Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 125
ಬುಧವಾರ,6 ಮೇ 2026 | ಪುಟಗಳು: 16 | ಬೆಲೆ: ₹ 5.00
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಭಾರತದ ಪತ್ರಕರ್ತರಾದ ಸುಪರ್ಣಾ ಶರ್ಮಾ, ಆನಂದ್ ಆರ್.ಕೆ. ಅವರಿಗೆ ಪುಲಿಟ್ಜರ್ ಪ್ರಶಸ್ತಿ

ಜಾಗತಿಕ ವೇದಿಕೆಯಲ್ಲಿ ಭಾರತದ ಕಲಾ ವೈಭವ

ಲವಲVK »ನೋಡಿ

ಕಿರಣ್ ಮಜುಂದಾರ್ ಸೋದರ ಸೊಸೆ ಕ್ಲೇರ್ ಮಜುಂದಾರ್‌ಗೆ ಬಯೋಕಾನ್ ಸಾರಥ್ಯ

ಈ ಪುಟದಲ್ಲಿರುವ ಎಲ್ಲವನ್ನೂ ಮ್ಯೂಟ್ ಮಾಡಲಾಗಿದೆ

ಮ್ಯೂಚ್ಯುವಲ್ ಫಂಡ್ ಹೂಡಿಕೆಗಳು ಮಾರುಕಟ್ಟೆಯ ಅಪಾಯಗಳಿಗೆ ಅಧೀನವಾಗಿವೆ; ಸ್ಕೀಮ್ ಸಂಬಂಧಿತ ಎಲ್ಲ ದಸ್ತಾವೇಜುಗಳನ್ನು ಗಮನವಿಟ್ಟು ಓದಿಕೊಳ್ಳಿ.

Bennett & Coleman
THE TIMES OF INDIA
www.vijaykarnataka.com
ಬುಧವಾರ,6 ಮೇ 2026 | ಪುಟಗಳು: 16 | ಬೆಲೆ: ₹ 5.00
VK
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA
ಸಂಪುಟ: 27 | ಸಂಚಿಕೆ: 125

ವಿಜಯ ಕರ್ನಾಟಕ

ಟಿವಿಕೆ ಅಭ್ಯರ್ಥಿ ಎದುರು ಒಂದೇ ಮತದಲ್ಲಿ ಸೋಲು ಕಂಡ ಡಿಎಂಕೆಯ ಪೆರಿಯಕರುಪ್ಪನ್

₹13,675 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	₹14,918 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	₹2,55,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

ನಾವು ನೋಡದ ಗೆಲುವಿಲ್ಲ, ಎದುರಿಸದ ಸೋಲಿಲ್ಲ, ಮತ್ತೆ ಗೆದ್ದು ಬರುತ್ತೇವೆ: ಸ್ಟಾಲಿನ್

ವಿಕ ಹೊಂಗಿರಣ

ಜೀವನದಲ್ಲಿ ನಾವು ಹೆದರುವಂತಹ ಸನ್ನಿವೇಶ ಎದುರಾದರೆ, ಅದನ್ನು ನಾವು ಧೈರ್ಯವಂತರಾಗಲು ದೊರೆತ ಅವಕಾಶವೆಂದೇ ತಿಳಿಯಬೇಕು.

- ಅನಾಮಿಕ

SBI
The banker to every Indian
ಎಸ್‌ಬಿಐ ಚಿನ್ನದ ಸಾಲಗಳೊಂದಿಗೆ ಸಂತೋಷಕ್ಕೆ ಹತ್ತಿರವಾಗಿ
- ಕಡಿಮೆ ಬಡ್ಡಿದರಗಳು
- ಹೊಂದಿಕೊಳ್ಳುವ ಮರುಪಾವತಿ ಆಯ್ಕೆಗಳು
- ಬುಲೆಟ್ ಮರುಪಾವತಿ:
- 3/6/12 ತಿಂಗಳುಗಳು, 36 ತಿಂಗಳವರೆಗೆ ಕಂತುಗಳು
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹122/- ಕೋಲಾರ 120/- ತುಮಕೂರು 120/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹162/-
ಕೋಲಾರ 160/- ತುಮಕೂರು 160/-
ವಿಥ್ ಸ್ಕಿನ್ ₹228/- ಕೋಲಾರ 226/- ತುಮಕೂರು 226/-
ವಿಥೌಟ್ ಸ್ಕಿನ್ ₹261/- ಕೋಲಾರ 258/- ತುಮಕೂರು 258/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಮೊದಲ ಪತ್ನಿಗೆ ಜೀವನಾಂಶ ಕಡ್ಡಾಯ »03
ಬೆಂಗಳೂರು ಸೇರಿ ಹಲವು ಜಿಲ್ಲೆಗಳಿಗೆ ಮಳೆ »05
ತೈಲ ಖರೀದಿಗೆ ಇರಾಕ್ ಭಾರಿ ಆಫರ್ »09

ಬಹುಮತಕ್ಕೆ 10 ಸ್ಥಾನಗಳ ಕೊರತೆ ನಡುವೆಯೂ ಆಡಳಿತಕ್ಕೆ ದಳಪತಿ ಸಜ್ಜು

ಟಿವಿಕೆಗೆ ಬೆಂಬಲ ಘೋಷಿಸಿದ ಕಾಂಗ್ರೆಸ್ | ಪ. ಬಂಗಾಳದಲ್ಲಿ ಫಲಿತಾಂಶಕ್ಕೆ ದೀದಿ ಸಡ್ಡು

ನಾಳೆ ವಿಜಯ್ ಪದಗ್ರಹಣ

ಚೆನ್ನೈ: ತಮಿಳುನಾಡು ಚುನಾವಣೆಯಲ್ಲಿ ಅನಿರೀಕ್ಷಿತ ಗೆಲುವಿನ ಮೂಲಕ ಹೊಸ ರಾಜಕೀಯ ಬಿರುಗಾಳಿ ಎಬ್ಬಿಸಿರುವ 'ಟಿವಿಕೆ' ಪಕ್ಷದ ಮುಖ್ಯಸ್ಥ, ನಟ ವಿಜಯ ಅವರು ಮೇ 7ರಂದು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಮೇ 6 ರಂದು ರಾಜ್ಯಪಾಲ ರಾಜೇಂದ್ರ ಆರ್ಲೇಕರ್ ಅವರನ್ನು ಭೇಟಿಯಾಗಲಿರುವ ವಿಜಯ್ ಅವರು ಸರಕಾರ ರಚನೆಗೆ ಹಕ್ಕು ಮಂಡಿಸಲಿದ್ದಾರೆ. ಮೇ 7ರಂದು ಚೆನ್ನೈನ ಜವಾಹರ್‌ಲಾಲ್ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಲಿದ್ದಾರೆ ಎಂದು ಟಿವಿಕೆ ಪಕ್ಷದ ಮೂಲಗಳು ತಿಳಿಸಿವೆ.

ಆದರೆ, ಪೂರ್ಣ ಬಹುಮತಕ್ಕೆ (118) ಇನ್ನೂ 10 ಸ್ಥಾನಗಳ ಕೊರತೆ ನಡುವೆ ವಿಜಯ್ ಹೇಗೆ ಸರಕಾರ ರಚನೆ ರಚಿಸಲಿದ್ದಾರೆ, ಯಾವ ಪಕ್ಷದ ಬೆಂಬಲ ಪಡೆಯಲಿದ್ದಾರೆ ಎಂಬ ಕುತೂಹಲ ಮನೆಮಾಡಿದೆ.

ತಮಿಳುನಾಡು ವಿಧಾನಸಭೆಯ 234 ಸ್ಥಾನಗಳಲ್ಲಿ ಟಿವಿಕೆ 108 ಸ್ಥಾನ ಗಳಿಸಿದೆ. ಬಹುಮತಕ್ಕೆ 10 ಸ್ಥಾನಗಳ ಕೊರತೆ ಎದುರಿಸುತ್ತಿದೆ. ಆದರೆ, ಎರಡು ಕ್ಷೇತ್ರಗಳಲ್ಲಿ ಗೆದ್ದಿರುವ ವಿಜಯ್ ಪೆರಂಬೂರ್ ಕ್ಷೇತ್ರವನ್ನು ಉಳಿಸಿಕೊಂಡು, ತಿರುಚ್ಚಿನಾಪಳ್ಳಿ ಪೂರ್ವ ಕ್ಷೇತ್ರವನ್ನು ಬಿಟ್ಟುಕೊಡಲು ನಿರ್ಧರಿಸಿದ್ದಾರೆ. ಹೀಗಾದಲ್ಲಿ ಟಿವಿಕೆ ಬಲಾಬಲ 107ಕ್ಕೆ ಕುಸಿದು 11 ಸ್ಥಾನ ಕೊರತೆ ಎದುರಾಗಲಿದೆ. ಇದರ ನಡುವೆ, ಐವರು ಸದಸ್ಯರನ್ನು ಹೊಂದಿರುವ ಕಾಂಗ್ರೆಸ್ ವಿಜಯ್‌ಗೆ ಬೆಂಬಲ ನೀಡುವುದಾಗಿ ಘೋಷಿಸಿದೆ. ಮಂಗಳವಾರ ರಾತ್ರಿ ನಡೆದ ರಾಜ್ಯ ಕಾಂಗ್ರೆಸ್ ಮುಖಂಡರ ತುರ್ತು ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. »10

ಚೆನ್ನೈನ ಟಿವಿಕೆ ಕಚೇರಿಗೆ ಮಂಗಳವಾರ ಆಗಮಿಸಿದ ವಿಜಯ್.

ತಮಿಳುನಾಡಿನಲ್ಲಿ ಸರಕಾರ ರಚಿಸಲು ವಿಜಯ್ ಅವರು ಕಾಂಗ್ರೆಸ್‌ನ ಬೆಂಬಲ ಕೋರಿದ್ದಾರೆ. ಈ ಸಂಬಂಧ ಅಂತಿಮ ನಿರ್ಧಾರ ಕೈಗೊಳ್ಳುವ ಆಯ್ಕೆಯನ್ನು ತಮಿಳುನಾಡು ಕಾಂಗ್ರೆಸ್ ಸಮಿತಿಗೆ ಬಿಡಲಾಗಿದೆ.

- **ಕೆ.ಸಿ. ವೇಣುಗೋಪಾಲ್** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಒಂದು ಗುರಿ 3 ಆಯ್ಕೆ

- **ಆಯ್ಕೆ 1:** ಸರಕಾರ ರಚನೆಗೆ ವಿಜಯ್ ಅವರ ಟಿವಿಕೆಗೆ 10 ಸದಸ್ಯರ ಬೆಂಬಲ ಬೇಕಿದೆ. ಡಿಎಂಕೆ, ಎಡಿಎಂಕೆ, ಕಾಂಗ್ರೆಸ್, ಬಿಜೆಪಿ, ಎಡಪಕ್ಷಗಳನ್ನು ಹೊರತುಪಡಿಸಿ ತಮಿಳು ಪ್ರಾದೇಶಿಕ ಪಕ್ಷಗಳ 10 ಶಾಸಕರ ಬೆಂಬಲ ಪಡೆದುಕೊಂಡು ಸರಕಾರ ರಚನೆ ಮಾಡಬಹುದು.
- **ಆಯ್ಕೆ 2:** ತಮಿಳು ಪ್ರಾದೇಶಿಕ ಪಕ್ಷಗಳ 10 ಶಾಸಕರ ಜತೆ ಕಾಂಗ್ರೆಸ್‌ನ 5, ಎಡಪಕ್ಷಗಳ 4 ಶಾಸಕರ ಬೆಂಬಲ ಪಡೆದು 127 ಶಾಸಕರ ಬಲದೊಂದಿಗೆ ಸಮ್ಮಿಶ್ರ ಸರಕಾರ ರಚನೆಗೂ ಪ್ರಯತ್ನಿಸಬಹುದು.
- **ಆಯ್ಕೆ 3:** ಬಿಜೆಪಿ ಹೊರತುಪಡಿಸಿ 52 ಸದಸ್ಯ ಬಲ ಹೊಂದಿರುವ ಎಐಎಡಿಎಂಕೆ ಹಾಗೂ ಮಿತ್ರ ಪಕ್ಷಗಳ ಬೆಂಬಲ ಪಡೆದುಕೊಂಡು 160 ಶಾಸಕರ ಬಲದೊಂದಿಗೆ ಸರಕಾರ ರಚಿಸಬಹುದು.

ರಾಜೀನಾಮೆ ನೀಡಲು ಮಮತಾ ನಕಾರ

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಟಿಎಂಸಿ ಸೋತಿದ್ದರೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ. ಚುನಾವಣಾ ಆಯೋಗ, ಕೇಂದ್ರ ಸರಕಾರ ಹಾಗೂ ಬಿಜೆಪಿ ಪಿತೂರಿಯಿಂದ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಸೋಲಾಗಿದೆ. ಈ ಸೋಲನ್ನು ನಾನು ಒಪ್ಪಿಕೊಳ್ಳುವುದಿಲ್ಲ,'' ಎಂದು ಘೋಷಿಸಿದ್ದಾರೆ. ವಿವರ»10

ಕಬ್ಬಿಗೆ 365 ರೂ. ಎಫ್‌ಆರ್‌ಪಿ

ಕಾರ್ಖಾನೆಗಳಿಂದ ಖರೀದಿ ದರ ₹10 ಏರಿಕೆ | ಕೇಂದ್ರ ಸಂಪುಟ ಅಸ್ತು

ಹೊಸದಿಲ್ಲಿ: ರೈತರಿಂದ ಕಬ್ಬು ಖರೀದಿಗೆ ಕಾರ್ಖಾನೆಗಳು ನೀಡಬೇಕಾದ ಕನಿಷ್ಠ ಖರೀದಿ ದರವನ್ನು 10 ರೂ. ಹೆಚ್ಚಿಸಲು ಕೇಂದ್ರ ಸಚಿವ ಸಂಪುಟ ಸಭೆ ಮಂಗಳವಾರ ಅನುಮೋದನೆ ನೀಡಿದೆ. ಇದರೊಂದಿಗೆ ಅಕ್ಟೋಬರ್‌ನಲ್ಲಿ ಆರಂಭವಾಗುವ 2026-27ನೇ ಸಾಲಿನ ಹಂಗಾಮಿನಲ್ಲಿ ಪ್ರತಿ ಕ್ವಿಂಟಾಲ್ ಕಬ್ಬು ಖರೀದಿಗೆ 'ನ್ಯಾಯೋಚಿತ ಮತ್ತು ಪರಿಹಾರ ರೂಪದ ದರ'(ಎಫ್‌ಆರ್‌ಪಿ) 365 ರೂ.ಗೆ ಹೆಚ್ಚಳಗೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಕುರಿತಾದ ಸಂಪುಟ ಸಮಿತಿಯ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

''ಪ್ರಸ್ತುತ ಪ್ರತಿ ಕ್ವಿಂಟಾಲ್ ಕಬ್ಬಿಗೆ 355 ರೂ. 'ಎಫ್‌ಆರ್‌ಪಿ' ಇದ್ದು, ಇದನ್ನು ಶೇ. 2.81ರಷ್ಟು ಹೆಚ್ಚಿಸಲಾಗಿದೆ. 2026-27ನೇ ಸಾಲಿನಲ್ಲಿ ಪ್ರತಿ ಕ್ವಿಂಟಾಲ್ ಕಬ್ಬಿಗೆ ಆಗುವ ಉತ್ಪಾದನಾ ವೆಚ್ಚವನ್ನು 182 ರೂ. ಎಂದು ಅಂದಾಜಿಸಲಾಗಿದ್ದು, ಇದಕ್ಕಿಂತಲೂ ಶೇ. 100.5ರಷ್ಟು ಮಟ್ಟದಲ್ಲಿ ಹೊಸ 'ಎಫ್‌ಆರ್‌ಪಿ' ನಿಗದಿಪಡಿಸಲಾಗಿದೆ. ಇದು ರೈತರಿಗೆ ಉತ್ಪಾದನಾ ವೆಚ್ಚಕ್ಕಿಂತಲೂ ಹೆಚ್ಚು ಆದಾಯ ಗಳಿಸಲು ಅನುಕೂಲವಾಗಲಿದೆ. ಸರಕಾರದ ನಿರ್ಧಾರದಿಂದ ದೇಶಾದ್ಯಂತ 1 ಕೋಟಿಗೂ ಅಧಿಕ ಕಬ್ಬು ಬೆಳಗಾರರಿಗೆ ಅನುಕೂಲವಾಗಲಿದೆ. ಜತೆಗೆ, ಕಬ್ಬು ಉತ್ಪಾದನೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ನೆರವಾಗಲಿದೆ. ಸಕ್ಕರೆ ಕಾರ್ಖಾನೆಗಳ ತಡೆರಹಿತ ಕಾರ್ಯನಿರ್ವಹಣೆಗೂ ಇದರಿಂದ ಅನುವಾಗಲಿದೆ,'' ಎಂದು ಸಭೆಯ ಬಳಿಕ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಹೇಳಿದ್ದಾರೆ.

ಸಂಪುಟದ ಇತರೆ ನಿರ್ಧಾರಗಳು

- ಹತ್ತಿ ಇಳುವರಿ ಹೆಚ್ಚಿಸಲು 5,659 ಕೋಟಿ ರೂ.ಗಳ ನೂತನ ಯೋಜನೆಗೆ ಅಸ್ತು
- ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ಸಂಕಷ್ಟಕ್ಕೆ ಸಿಲುಕಿರುವ ವಿಮಾನಯಾನ ಮತ್ತು 'ಎಂಎಸ್‌ಎಂಇ'ಗೆ 18,100 ಕೋಟಿ ರೂ.ಗಳ ಸಾಲ ಖಾತರಿ ಯೋಜನೆ. ವಿವರ»09

ಇರಾನ್ ದಾಳಿ, 3 ಭಾರತೀಯರಿಗೆ ಗಾಯ

ದುಬೈ: ಸಂಯುಕ್ತ ಅರಬ್ ಸಂಸ್ಥಾನದ (ಯುಎಇ) ಫುಜೈರಾ ಪೆಟ್ರೋಲಿಯಂ ಕೈಗಾರಿಕಾ ವಲಯದ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿರುವ ಬಗ್ಗೆ ಭಾರತ ತೀವ್ರ ಖಂಡನೆ ವ್ಯಕ್ತಪಡಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪ್ರಧಾನಿ ಮೋದಿ, ''ಯುಎಇ ಮೇಲೆ ಇರಾನ್ ನಡೆಸಿದ ಡ್ರೋನ್ ಹಾಗೂ ಕ್ಷಿಪಣಿ ದಾಳಿಯಲ್ಲಿ ಭಾರತೀಯರು ಗಾಯಗೊಂಡಿರುವುದು ದುಃಖಕರ. ಈ ದಾಳಿಯನ್ನು ಭಾರತ ಖಂಡಿಸುತ್ತದೆ,'' ಎಂದು ಹೇಳಿದ್ದಾರೆ. ''ಇಂಥ ಸಂಕಷ್ಟದ ಸಂದರ್ಭದಲ್ಲಿ ಭಾರತವು ಯುಎಇ ಜತೆ ಬೆಂಬಲವಾಗಿ ನಿಲ್ಲಲಿದೆ,'' ಎಂದಿದ್ದಾರೆ. ಏ.8ರ ಕದನ ವಿರಾಮದ ನಂತರ ಇರಾನ್ ಸೇನೆಯಿಂದ ಕೊಲ್ಲಿ ರಾಷ್ಟ್ರಗಳವ ಮೇಲೆ ನಡೆದ ಮೊದಲ ದಾಳಿ ಇದಾಗಿದೆ. ವಿವರ»09

ಜೀವರಾಜ್‌ಗೆ ಬಿಗ್ ರಿಲೀಫ್

ಎಫ್‌ಐಆರ್‌ಗೆ ಹೈಕೋರ್ಟ್ ತಾತ್ಕಾಲಿಕ ತಡೆ

ಬೆಂಗಳೂರು: ಅಂಚೆ ಮತಗಳ ಮರುಎಣಿಕೆಯಲ್ಲಿ ಮತಗಳನ್ನು ತಿರುಚಿದ ಆರೋಪ ಸಂಬಂಧ ಶೃಂಗೇರಿಯ ಬಿಜೆಪಿ ಶಾಸಕ ಡಿ.ಎನ್.ಜೀವರಾಜ್ ವಿರುದ್ಧ ಚಿಕ್ಕಮಗಳೂರು ಟೌನ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಎರಡು ದಿನಗಳ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

''ಪ್ರಕರಣದಲ್ಲಿ ರಾಜಕೀಯ ಒತ್ತಡಕ್ಕೆ ಮಣಿದು ಎಫ್‌ಐಆರ್ ದಾಖಲಿಸಲಾಗಿದೆ. ರಾಜಕೀಯ ಒತ್ತಡಗಳಿಗೆ ಮಣಿದು ಪೊಲೀಸರು ಕೆಲಸ ಮಾಡಬಾರದು. ಹೀಗಾದರೆ, ಯಾವ ಅಧಿಕಾರಿಗಳೂ ಸ್ವತಂತ್ರವಾಗಿ ಕೆಲಸ ಮಾಡಲಾರರು,'' ಎಂದು ಕಟುವಾಗಿ ಹೇಳಿದೆ.

ಪ್ರಕರಣ ರದ್ದು ಕೋರಿ ಜೀವರಾಜ್ ಸಲ್ಲಿಸಿದ್ದ ಅರ್ಜಿ ಕುರಿತು ನ್ಯಾ. ವಿ. ಶ್ರೀಷಾನಂದ ಅವರಿದ್ದ ರಜಾಕಾಲದ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ಶೃಂಗೇರಿ ಕ್ಷೇತ್ರದಲ್ಲಿ ವೋಟ್ ಡಕಾಯಿತಿ: ಸಿಎಂ ಆರೋಪ »04

10ರಂದು ಶ್ರೀ ಶ್ರೀ ಆಶ್ರಮಕ್ಕೆ ಪ್ರಧಾನಿ

ಬೆಂಗಳೂರು: ಪ್ರಸಿದ್ಧ ಆಧ್ಯಾತ್ಮಿಕ ಕೇಂದ್ರವಾಗಿರುವ ಆರ್ಟ್ ಆಫ್ ಲಿವಿಂಗ್‌ನ 45ನೇ ವರ್ಷಾಚರಣೆ ಹಾಗೂ ರವಿಶಂಕರ್ ಗುರೂಜಿಯವರ 70ನೇ ವರ್ಷದ ಹುಟ್ಟುಹಬ್ಬ ಆಚರಣೆ ಮೇ 10 ರಂದು ನೆರವೇರಲಿದೆ. ನಗರದ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗಲಿದ್ದಾರೆ.

ಇದೇ ವೇಳೆ ಆಶ್ರಮದ ಆವರಣದಲ್ಲಿ ನಿರ್ಮಾಣಗೊಂಡಿರುವ ನೂತನ ಧ್ಯಾನ ಮಂದಿರ ಉದ್ಘಾಟನೆಯಾಗಲಿದ್ದು, ಹಲವು ವಿಶೇಷಗಳನ್ನು ಹೊಂದಿರುವ ಧ್ಯಾನ ಮಂದಿರದ ಅನಾವರಣದ ಜತೆಗೆ ವಿಶೇಷ ಕಾರ್ಯಕ್ರಮಗಳು ಜರುಗಲಿವೆ. ಈ ನೂತನ ಧ್ಯಾನಮಂದಿರದಲ್ಲಿ ವಾರ್ಲಿ, ಮಧುಬನಿ, ಪಟ್ಟಚಿತ್ತ, ತಂಜಾವೂರು, ಸೋಹ್ರಾಹ್, ಕೊಹ್ಬರ್, ಗೊಂಡ್ ಮತ್ತು ಪಿಚ್ವಾಯಿ ಕಲೆಗಳನ್ನು ಬಳಕೆ ಮಾಡಲಾಗಿದೆ.

ಮಾನಸಿಕ, ಆಧ್ಯಾತ್ಮಿಕ ಸಾಧನೆಗಳ ಮೂಲಕ ಜನರಿಗೆ ಮಾರ್ಗದರ್ಶನ ನೀಡುತ್ತಾ ಬಂದಿರುವ ಆರ್ಟ್ ಆಫ್ ಲಿವಿಂಗ್, 45 ವರ್ಷಗಳನ್ನು ಪೂರೈಸುತ್ತಿದ್ದು, ಮೇ 10ರಿಂದ 25ರವರೆಗೆ ಹಲವು ಕಾರ್ಯಕ್ರಮಗಳು ನಡೆಯಲಿವೆ.

ಸುಪ್ರೀಂ ಜಸ್ಟೀಸ್ ಸಂಖ್ಯೆ 38ಕ್ಕೆ

ಹೊಸದಿಲ್ಲಿ: ಸುಪ್ರೀಂ ಕೋರ್ಟ್‌ನ ಕಾರ್ಯಕಲಾಪಗಳ ವೇಗ ಮತ್ತು ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ನ್ಯಾಯಮೂರ್ತಿಗಳ ಸಂಖ್ಯೆಯನ್ನು 38ಕ್ಕೆ ಹೆಚ್ಚಿಸುವ ಮಹತ್ವದ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಸಭೆ ಹಸಿರು ನಿಶಾನೆ ತೋರಿದೆ.

ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿ ಸಿಜೆಐ ಸೇರಿದಂತೆ ಒಟ್ಟು 34 ನ್ಯಾಯಮೂರ್ತಿಗಳಿದ್ದು, ಇನ್ನೂ ನಾಲ್ವರು ಹೆಚ್ಚುವರಿ ಜಸ್ಟೀಸ್‌ಗಳ ನೇಮಕಕ್ಕೆ ಅನುಮೋದನೆ ನೀಡಲಾಗಿದೆ.

ಇದಕ್ಕಾಗಿ ಕೇಂದ್ರ ಸರಕಾರ ಮುಂಬರುವ ಸಂಸತ್ ಅಧಿವೇಶನದಲ್ಲಿ 'ಸುಪ್ರೀಂ ಕೋರ್ಟ್ (ನ್ಯಾಯಮೂರ್ತಿಗಳ ಸಂಖ್ಯೆ) ವಿಧೇಯಕ-2026' ಮಂಡನೆ ಮಾಡಲಿದ್ದು, ಇದು ಅನುಮೋದನೆಗೊಂಡಲ್ಲಿ ಹೆಚ್ಚುವರಿ ನ್ಯಾಯಮೂರ್ತಿಗಳ ನೇಮಕಕ್ಕೆ ಹಾದಿ ಸುಗಮವಾಗಲಿದೆ.

ಈ ಮುನ್ನ 2019ರಲ್ಲಿ ಸುಪ್ರೀಂ ಕೋರ್ಟ್ ಜಸ್ಟೀಸ್‌ಗಳ ಸಂಖ್ಯೆಯನ್ನು 31ರಿಂದ 34ಕ್ಕೆ ಹೆಚ್ಚಿಸಲಾಗಿತ್ತು.



R.V. TOURS AND TRAVELS PVT. LTD.

KARNATAKA | TELANGANA | ANDHRA PRADESH | TAMILNADU

ಧರ್ಮದ ಅತ್ಯಂತ ಪವಿತ್ರ ಸ್ಥಳ... ಕಾಶಿ - ಅಯೋಧ್ಯೆ ಭೇಟಿ ನೀಡುವುದು ಶುಭ...

ಕಾಶಿ–ಅಯೋಧ್ಯೆ–ಪ್ರಯಾಗರಾಜ್

3 Nights / 4 Days (Flight Package)

RS.27,999/-

+5% GST PER PERSON

ಯುರೋಪ್
12 Nights / 13 Days
~~RS.3,25,000/-~~
RS.2,99,999/-
+5% GST +5% TCS * Limited Offer

ಚಾರ್ಧಾಮ್ ಯಾತ್ರಾ
12 Nights / 13 Days
RS.68,500/-

ಅಮರ್ನಾಥ್ ಯಾತ್ರಾ
13 Nights / 14 Days
RS.72,500/-

5 N 6 D	ಸಿಂಗಾಪುರ್ ಮಲೇಷ್ಯಾ	RS.1,12,000/-
5 N 6 D	ಶ್ರೀಲಂಕಾ	RS.59,500/-
4 N 5 D	ವಿಯೆಟ್ನಾಂ	RS.99,999/-
4 N 5 D	ಬ್ಯಾಂಕಾಕ್–ಪಟ್ಟಾಯ	RS.42,999/-
6 N 7 D	ಭೂತಾನ್	RS.60,000/-
4 N 5 D	ಬಾಲಿ	RS.95,000/-

7 N 8 D	ತಮಿಳುನಾಡು	RS.52,999/-
8 N 9 D	ಶಿಮ್ಲಾ–ಮನಾಲಿ	RS.55,999/-
6 N 7 D	ಗ್ಯಾಂಗ್ಟಾಕ್–ಡಾರ್ಜಿಲಿಂಗ್	RS.42,000/- *Land Package
12 N 13 D	ಮುಕ್ತಿನಾಥ್ ಯಾತ್ರಾ	RS.76,500/-
11 N 12 D	ಗುಜರಾತ್- ಮಧ್ಯಪ್ರದೇಶ	RS.69,999/-
13 N 14 D	ಕೈಲಾಸ ಮಾನಸ ಸರೋವರ	RS.2,85,000/- +5% GST +2%TCS

* For All Domestic Tour Package +5% GST Applicable

* For All International Tour Package +5% GST +2% TCS Applicable

*T&C APPLY * All Tour Packages Calculated Per Person

R V Ramana
Founder & Chairman

Reach us

Ph: 8712018312, 9154225664

Address : No. 313,Varsha Arcade, Next to sub-registar office, Ganganagar, Bellary road, Bengaluru.

ಮೊದಲ ಪತ್ನಿಗೆ ಜೀವನಾಂಶ ಕಡ್ಡಾಯ

ಎರಡನೇ ಸಂಸಾರ ನಡೆಸುವವನ 'ಕಡಿಮೆ ಆದಾಯ' ವಾದ ಒಪ್ಪದ ಹೈಕೋರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು



''ವ್ಯಕ್ತಿಯೊಬ್ಬ ಎರಡನೇ ಪತ್ನಿ ಮತ್ತು ಮಕ್ಕಳನ್ನು ಪೋಷಣೆ ಮಾಡುವ ಸಾಮರ್ಥ್ಯ ಹೊಂದಿದ್ದರೆ ಮೊದಲ ಪತ್ನಿ, ಮತ್ತವರ ಮಕ್ಕಳು ಮತ್ತು ವೃದ್ಧರಾಗಿರುವ ತಾಯಿಗೆ ಜೀವನಾಂಶ ನೀಡಲು ಹಣವಿಲ್ಲವೆಂದು ಹೇಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ,'' ಎಂದು ಹೈಕೋರ್ಟ್ ಆದೇಶಿಸಿದೆ.

ಮೊದಲ ಪತ್ನಿ ಮತ್ತವರ ಮಕ್ಕಳಿಗೆ ಮಾಸಿಕ 30 ಸಾವಿರ ರೂ. ಪರಿಹಾರ ನೀಡಬೇಕೆಂಬ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಬಿ. ಗೀತಾ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

''ಪತಿ ತನ್ನ ಆದಾಯ ತೋರಿಸಲು ಯಾವುದೇ ಸಾಕ್ಷ್ಯಗಳನ್ನು ತೋರಿಸಿಲ್ಲ. ಆದರೆ, ಪತಿ ನಿಜವಾಗಿಯೂ ಯಾವುದೇ ಕೆಲಸ ಮಾಡುತ್ತಿಲ್ಲ ಎಂದಾದರೆ ಎರಡನೇ ಪತ್ನಿ ಮತ್ತು ಆಕೆಯ ಇಬ್ಬರು ಮಕ್ಕಳನ್ನು ಪೋಷಣೆ ಮಾಡುತ್ತಿರಲಿಲ್ಲ. ಆದರೂ, ಎರಡನೇ ಹೆಂಡತಿ ಮಕ್ಕಳನ್ನು ಸಾಕುತ್ತಿರುವುದಾಗಿ ಒಪ್ಪಿಕೊಂಡಿದ್ದಾನೆ. ಇದರಿಂದ ಪ್ರತಿವಾದಿಯು ತನ್ನನ್ನು ತಾನು ನಿರ್ವಹಿಸಲು ಸಾಕಷ್ಟು ಆದಾಯ ಹೊಂದಿದ್ದಾನೆಂಬ ಅಂಶ ಗೊತ್ತಾಗಲಿದೆ,'' ಎಂದು ನ್ಯಾಯಾಲಯ ಹೇಳಿದೆ.

''ಪತಿ ಫೋಟೊ ಸ್ಟುಡಿಯೋ ನಡೆಸುತ್ತಿದ್ದು, ಜತೆಗೆ ದೇವಾಲಯವೊಂದರಲ್ಲಿ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆಂಬುದು ದಾಖಲೆಗಳಿಂದ ಗೊತ್ತಾಗಿದ್ದು, ಅದರಿಂದ ಬರುತ್ತಿರುವ ಆದಾಯವೆಷ್ಟು ಎಂಬುದು ತಿಳಿಸಿಲ್ಲ. ಆದರೆ, ಮಾಸಿಕ 5ರಿಂದ 6 ಸಾವಿರ ರೂ. ಮಾತ್ರ ದುಡಿಮೆ ಇದೆಯೆಂದು ತಿಳಿಸಿದ್ದಾರೆ. ಎರಡನೇ ಹೆಂಡತಿ ಮತ್ತು ಮಕ್ಕಳನ್ನು ಪೋಷಣೆ ಮಾಡುತ್ತಿದ್ದಾರೆ,'' ಎಂದು ನ್ಯಾಯಾಲಯ ತಿಳಿಸಿದೆ.

ಮೊದಲ ಹೆಂಡತಿಯ ಕಿರಿಯ ಮಗ ತನ್ನವನಲ್ಲವೆಂಬ ಪತಿಯ ವಾದ ತಳ್ಳಿಹಾಕಿದ ನ್ಯಾಯಪೀಠ, ''ಭಾರತೀಯ ಸಾಕ್ಷ್ಯ ಅಧಿನಿಯಮ-2023ರ ಸೆಕ್ಷನ್ 116 ರಡಿ ವಿವಾಹ ಚಾಲ್ತಿಯಲ್ಲಿರುವಾಗ ಜನಿಸಿದ ಮಗು ಕಾನೂನು ಬದ್ಧವಾಗಿ ಆ ವ್ಯಕ್ತಿಗೆ ಸೇರಿದ್ದಾಗಿರುತ್ತದೆ. ಅಲ್ಲದೆ, ಪತಿಯು ಪತ್ನಿಯೊಂದಿಗೆ ತನಗೆ ದೈಹಿಕ ಸಂಪರ್ಕವೇ ಇರಲಿಲ್ಲ ಎಂಬುದನ್ನು ಸಾಬೀತುಪಡಿಸಲು ಯಾವುದೇ ಸಾಕ್ಷ್ಯಾಧಾರಗಳನ್ನು ನೀಡಿಲ್ಲ,'' ಎಂದು ಹೇಳಿದೆ.

ಅಲ್ಲದೆ, 74 ವರ್ಷದ ತಾಯಿ ಮೆಸ್ ಒಂದರಲ್ಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ''ಮಗನಾಗಿ ತಾಯಿಯನ್ನು ನೋಡಿಕೊಳ್ಳುವುದು ಆತನ ಕಾನೂನಾತ್ಮಕ ಜವಾಬ್ದಾರಿ,'' ಎಂದು ತಿಳಿಸಿದೆ.

ಪ್ರಕರಣದ ಹಿನ್ನೆಲೆ: ಅರ್ಜಿದಾರರು ಮೊದಲ ಪತ್ನಿಯನ್ನು 2005ರಲ್ಲಿ ವಿವಾಹವಾಗಿದ್ದರು. ಮದುವೆ ವೇಳೆ ಚಿನ್ನಾಭರಣ ನೀಡಿ ವಿವಾಹ ಮಾಡಿಕೊಡಲಾಗಿತ್ತು. ದಂಪತಿ 2010ರವರೆಗೂ ಸಂತೋಷದಿಂದ ವೈವಾಹಿಕ ಜೀವನ ನಡೆಸಿದ್ದರು. ಬಳಿಕ ಪತಿ ಅಕ್ರಮ ಸಂಬಂಧ ಬೆಳೆಸಿಕೊಂಡಿದ್ದರಿಂದ ಎರಡನೇ ಪತ್ನಿಗೆ ಇಬ್ಬರು ಮಕ್ಕಳಾಗಿದ್ದರು. ಈ ನಡುವೆ, ಮದ್ಯಪಾನ ವ್ಯಸನಿಯಾಗಿದ್ದ ಪತಿ, ಮೊದಲ ಪತ್ನಿ ಮತ್ತವರ ಕುಟುಂಬ ಪೋಷಣೆಗೆ ಯಾವುದೇ ರೀತಿಯಲ್ಲಿಯೂ ನೆರವು ನೀಡದೆ, ವರದಕ್ಷಿಣೆ ಕಿರುಕುಳ ನೀಡುವುದಕ್ಕೆ ಮುಂದಾಗಿ, ಪತ್ನಿ ಮತ್ತು ಮಕ್ಕಳನ್ನು ಮನೆಯಿಂದ ಹೊರಹಾಕಿದ್ದರು.

ಅದಾದ ಬಳಿಕ ಮೊದಲ ಪತ್ನಿ, ಮಕ್ಕಳು ಮತ್ತು ಪತಿಯ ತಾಯಿಗೆ ಮಾಸಿಕ ಜೀವನಾಂಶಕ್ಕಾಗಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಬೆಳಗಾವಿಯ ಕೌಟುಂಬಿಕ ನ್ಯಾಯಾಲಯವು ಪತಿಗೆ ತನ್ನ ಮೊದಲ ಕುಟುಂಬಕ್ಕೆ ಮಾಸಿಕ 30,000 ರೂ. ಜೀವನಾಂಶ ನೀಡುವಂತೆ ಆದೇಶಿಸಿತ್ತು. ಅದನ್ನು ಪ್ರಶ್ನಿಸಿ ಪತಿಯು ಹೈಕೋರ್ಟ್ ಮೆಟ್ಟಿಲೇರಿದ್ದ.

ಆರ್‌ಜಿಯುಎಚ್‌ಎಸ್ ನಿರ್ಣಯ ರದ್ದುಗೊಳಿಸಿದ ಹೈಕೋರ್ಟ್

ಸೆನೆಟ್ ಸದಸ್ಯರನ್ನು ಹೊರಗಿಡುವ ನಿರ್ಧಾರ

ಬೆಂಗಳೂರು: ಕಾಲೇಜುಗಳ ಮಾನ್ಯತೆ ಮುಂದುವರಿಕೆಗೆ ಸಂಬಂಧಿಸಿದ ಸ್ಥಳೀಯ ಪರಿಶೀಲನಾ ಸಮಿತಿ (ಎಲ್‌ಐಸಿ)ಯಿಂದ ಸೆನೆಟ್ ಸದಸ್ಯರನ್ನು ಹೊರಗಿಡುವ ಕುರಿತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಸಿಂಡಿಕೇಟ್ ಸಭೆ 2024ರಲ್ಲಿ ಕೈಗೊಂಡಿದ್ದ ನಿರ್ಣಯವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಜೆ.ನಂದೀಶ್ ಮತ್ತಿತರ ಆರ್‌ಜಿಯುಎಚ್‌ಎಸ್ ಸೆನೆಟ್ ಸದಸ್ಯರು ನಿರ್ಣಯ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾ.ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ಮಾಡಿದೆ.

ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, ''ಶಾಸನವನ್ನು ತಿದ್ದುಪಡಿ ಮಾಡಲು ಅಥವಾ ರದ್ದುಗೊಳಿಸಲು ಸಿಂಡಿಕೇಟ್ ತನ್ನ ಪ್ರಸ್ತಾವನೆಯನ್ನು ಒಪ್ಪಿಗೆ ನೀಡುವ ಅಧಿಕಾರ ಹೊಂದಿರುವ ಸೆನೆಟ್‌ಗೆ ಸಲ್ಲಿಸಬೇಕು. ನಂತರ ಸೆನೆಟ್‌ನ ಶಿಫಾರಸಿನೊಂದಿಗೆ ಅಂತಹ ನಿರ್ಣಯವನ್ನು ಒಪ್ಪಿಗೆಗಾಗಿ ರಾಜ್ಯ ಸರಕಾರದ ಮುಂದಿಡಬೇಕಾಗುತ್ತದೆ. ಆದರೆ, ಇಲ್ಲಿ ಆ ನಿಯಮ ಪಾಲನೆಯಾಗಿಲ್ಲ,'' ಎಂದು ಆದೇಶಿಸಿದೆ. ಅಲ್ಲದೆ, ''ಕಾಲೇಜುಗಳ ಮಾನ್ಯತೆ ಮುಂದುವರಿಸಲು ಸಹ ಎಲ್‌ಐಸಿ ಸದಸ್ಯರು ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಬೇಕು ಮತ್ತು ಕಡ್ಡಾಯ ನಿಬಂಧನೆಗಳ ಅನುಸರಣೆಯಲ್ಲಿ ಯಾವುದೇ ಲೋಪವಿದ್ದರೂ ಸಂಬಂಧಪಟ್ಟ ಕಾಲೇಜಿನ ಮಾನ್ಯತೆಯನ್ನು ವಾಪಸ್ ಪಡೆದುಕೊಳ್ಳುವುದು ಸಮಿತಿಯ ಕರ್ತವ್ಯವಾಗಿದೆ.'' ಎಂದು ನ್ಯಾಯಾಲಯ ಹೇಳಿದೆ.

ಸಮಾನ ಪಿಂಚಣಿಗೆ ಹೈ ಆದೇಶ

■ **ವಿಕ ಸುದ್ದಿಲೋಕ** ಬೆಂಗಳೂರು

- ■ ನಿವೃತ್ತಿ ದಿನಾಂಕದ ಆಧಾರದಲ್ಲಿ ಪಿಂಚಣಿ ಬದಲಾವಣೆ ಸಂವಿಧಾನ ಬಾಹಿರ
- ■ ಕೆಪಿಸಿಎಲ್ ನಿವೃತ್ತ ನೌಕರರಿಗೆ ಪರಿಷ್ಕೃತ ಪಿಂಚಣಿ ನೀಡಲು ಆದೇಶ

ಪಿಂಚಣಿದಾರರು ಒಂದು ಸಮಾನ ಗುಂಪಿಗೆ ಸೇರಿದವರಾಗಿದ್ದು, ನಿವೃತ್ತಿಯ ದಿನಾಂಕದ ಆಧಾರದ ಮೇಲೆ ಅವರನ್ನು ಎರಡು ವರ್ಗಗಳಾಗಿ ವಿಂಗಡಿಸುವುದು ಸಂವಿಧಾನದ 14ನೇ ವಿಧಿಯ (ಸಮಾನತೆಯ ಹಕ್ಕು) ಉಲ್ಲಂಘನೆಯಾಗುತ್ತದೆ ಎಂದು ಹೈಕೋರ್ಟ್ ಆದೇಶಿಸಿದೆ.

ಅಲ್ಲದೆ, 2005ರ ಜುಲೈ 1ಕ್ಕಿಂತ ಮುಂಚಿತವಾಗಿ ನಿವೃತ್ತಿ ಹೊಂದಿದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ನೌಕರರ ಕುಟುಂಬಗಳಿಗೆ ಪರಿಷ್ಕೃತ ಪಿಂಚಣಿ ಸೌಲಭ್ಯ ಒದಗಿಸುವಂತೆ ನ್ಯಾಯಾಲಯ ನಿರ್ದೇಶನ ನೀಡಿದೆ.

ಕೆಪಿಸಿಎಲ್ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಸಿವರಾಮನ್ ಮತ್ತು ನ್ಯಾಯಮೂರ್ತಿ ತಾರಾ ವಿತಸ್ತ ಗಂಜು ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ಪಿಂಚಣಿ ಪರಿಷ್ಕರಣೆಯಿಂದ ಸುಮಾರು 250 ಕೋಟಿ ರೂ. ಹೊರೆಯಾಗಲಿದೆ ಎಂಬ ಕೆಪಿಸಿಎಲ್ ವಾದ ತಳ್ಳಿ ಹಾಕಿರುವ ವಿಭಾಗೀಯ ಪೀಠ, ''ಏಕಸದಸ್ಯ ಪೀಠಕ್ಕೆ ಅರ್ಜಿ ಸಲ್ಲಿಸಿರುವವರು ಬಾಕಿ ಮೊತ್ತದ ಹಕ್ಕು ಬಿಟ್ಟುಕೊಟ್ಟಿರುವುದರಿಂದ ಕೇವಲ 4 ಕೋಟಿ ರೂ. ವೆಚ್ಚದಲ್ಲಿ ಈ ಸೌಲಭ್ಯ ನೀಡಬಹುದಾಗಿದೆ,'' ಎಂದು ಹೇಳಿದೆ.

ಡಿ.ಎಸ್. ನಕಾರಾ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪನ್ನು ಉಲ್ಲೇಖಿಸಿದ ನ್ಯಾಯಪೀಠ, ''ಪಿಂಚಣಿ ಪರಿಷ್ಕರಣೆಯ ಪ್ರಯೋಜನವು ಎಲ್ಲಾ ನಿವೃತ್ತರಿಗೆ ಸಮಾನವಾಗಿ ಸಿಗಬೇಕು. ಆದ್ದರಿಂದ 2005ರ ಜುಲೈ 1ಕ್ಕಿಂತ ಮೊದಲು ನಿವೃತ್ತರಾದವರ ಕುಟುಂಬಗಳಿಗೂ ಪರಿಷ್ಕೃತ ಪಿಂಚಣಿ ನೀಡಬೇಕು. ಆದರೆ, ಬಾಕಿ ಮೊತ್ತವನ್ನು ಏಕಸದಸ್ಯ ಪೀಠದ ತೀರ್ಪು ಬಂದ ದಿನಾಂಕದಿಂದ ಪಾವತಿಸಬೇಕು ಮತ್ತು ಮುಂದಿನ ಮೂರು ತಿಂಗಳ ಒಳಗಾಗಿ ಈ ಪ್ರಕ್ರಿಯೆ ಪೂರ್ಣಗೊಳಿಸಬೇಕು,'' ಎಂದು ಆದೇಶಿಸಿದೆ.

ಪ್ರಕರಣದ ಹಿನ್ನೆಲೆ: ಕೆಪಿಸಿಎಲ್ ಹೊರಡಿಸಿದ್ದ ಆದೇಶದ ಪ್ರಕಾರ, 2005ರ ಜು.1ರ ನಂತರ ನಿವೃತ್ತರಿಗೆ ಮಾತ್ರ ಪರಿಷ್ಕೃತ ಪಿಂಚಣಿ ಸೌಲಭ್ಯ ನೀಡಲಾಗುತ್ತದೆ ಎಂದು ತಿಳಿಸಲಾಗಿತ್ತು. ಅದನ್ನು ಪ್ರಶ್ನಿಸಿ ಎಂ.ಎಸ್.ರಾಜೇಶ್ವರಿ ಸೇರಿದಂತೆ ಹಲವು ಕುಟುಂಬಗಳ ಪಿಂಚಣಿದಾರರು ಹೈಕೋರ್ಟ್‌ನ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ಏಕಸದಸ್ಯ ಪೀಠ, ''ನಿವೃತ್ತಿ ದಿನಾಂಕ ಆಧರಿಸಿ ಪಿಂಚಣಿ ಬದಲಾವಣೆ ಮಾಡಲು ಅವಕಾಶ ನೀಡಲಾಗುವುದಿಲ್ಲ, ಇದರಿಂದ ತಾರತಮ್ಯ ಮಾಡಿದಂತಾಗಲಿದೆ,'' ಎಂದು ಅಭಿಪ್ರಾಯಪಟ್ಟು, ಸರಕಾರದ ಸುತ್ತೋಲೆ ರದ್ದುಪಡಿಸಿತ್ತು. ಅದನ್ನು ಪ್ರಶ್ನಿಸಿ ಕೆಪಿಸಿಎಲ್ ಮೇಲ್ಮನವಿ ಸಲ್ಲಿಸಿತ್ತು.

ನೀಟ್ ಸಂಖ್ಯೆ ನೋಂದಣಿಗೆ ಅವಕಾಶ

ಬೆಂಗಳೂರು: ಸಿಇಟಿಗೆ ಅರ್ಜಿ ಸಲ್ಲಿಸಿ, ನೀಟ್ ಬರೆದಿರುವ ಅಭ್ಯರ್ಥಿಗಳು ತಮ್ಮ ನೀಟ್ ನೋಂದಣಿ ಸಂಖ್ಯೆ, ಅರ್ಜಿ ಸಂಖ್ಯೆ ಹಾಗೂ ನೀಟ್ ಪ್ರವೇಶ ಪತ್ರವನ್ನು ಅಪ್‌ಲೋಡ್ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ನೀಡಿದೆ. ಈ ಸಂಬಂಧ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ನೀಟ್ ಫಲಿತಾಂಶಕ್ಕೆ ಕಾದು, ನಂತರ ನೋಂದಣಿ ಪ್ರಕ್ರಿಯೆ ಆರಂಭಿಸುವುದರಿಂದ ಗಡಿಬಿಡಿ ಆಗುತ್ತಿತ್ತು. ಹೀಗಾಗಿ, ಈ ಬಾರಿ ನೀಟ್ ಫಲಿತಾಂಶಕ್ಕೂ ಮುನ್ನವೇ ಅಭ್ಯರ್ಥಿಗಳ ಮಾಹಿತಿ ಸಂಗ್ರಹಿಸುವುದರಿಂದ ಕೊನೆ ಕ್ಷಣದ ಗೊಂದಲಗಳಿಗೆ ಅವಕಾಶ ಇರುವುದಿಲ್ಲ. ಹೀಗಾಗಿ, ಎಲ್ಲರೂ ನೀಟ್ ನೋಂದಣಿ ಸಂಖ್ಯೆ ದಾಖಲಿಸಲು ಕೋರಲಾಗಿದೆ. ಫಲಿತಾಂಶ ಬಂದ ಬಳಿಕ, ಅರ್ಹರಿಗೆ ಮಾತ್ರ ಆಯ್ಕೆ ದಾಖಲಿಸಲು ಅವಕಾಶ ನೀಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ನೀಟ್ ಬರೆದಿರುವ ಹಾಗೂ ಕೆಇಎ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಇದುವರೆಗೂ ಕೆಇಎಗೆ ಅರ್ಜಿ ಸಲ್ಲಿಸದೇ ಇದ್ದಲ್ಲಿ ಅಂಥವರು ಕೂಡ ಅರ್ಜಿ ಸಲ್ಲಿಸಬಹುದು ಎಂದಿದ್ದಾರೆ.

22ರವರೆಗೆ ಸಿಇಟಿ ಅಭ್ಯರ್ಥಿಗಳ ದಾಖಲೆ ಪರಿಶೀಲನೆ

ಬೆಂಗಳೂರು: 2026ನೇ ಸಾಲಿನ ಯುಜಿ-ಸಿಇಟಿ ಅರ್ಜಿಯಲ್ಲಿ ಅರ್ಹತಾ ಕಂಡಿಕೆ ಎ1, ಬಿ1, ಬಿ, ಸಿ, ಡಿ, ಇ,ಎಫ್, ಜಿ, ಎಚ್, ಐ, ಜೆ, ಕೆ, ಎಲ್, ಎಂ, ಎನ್ ಮತ್ತು ಒ ಎಂದು ಕ್ಲೇಮ್ ಮಾಡಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಮೇ 11ರಿಂದ 22ರವರೆಗೆ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ನಡೆಯುವ ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳು ಬರುವ ಮುನ್ನ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್ ಮೂಲಕ ಮೊದಲೇ ಅವಧಿಯನ್ನು ಮುಂಗಡವಾಗಿ ಕಾಯ್ದಿರಿಸಬೇಕು ಮೇ 7ರಿಂದ ಸ್ಲಾಟ್‌ಬುಕ್ ಲಿಂಕ್ ಲಭ್ಯವಾಗಲಿದೆ ಎಂದು ಅವರು ತಿಳಿಸಿದ್ದಾರೆ. ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳೇ ಬರಬೇಕು. ಅವರ ಪರವಾಗಿ ಬೇರೆಯವರು ಬರುವಂತಿಲ್ಲ. ಪರಿಶೀಲನೆ ವೇಳೆ ಸಲ್ಲಿಸಬೇಕಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಇ-ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸಿಇಟಿ-2026 ಪ್ರವೇಶ ಪತ್ರ ಮತ್ತು ಅರ್ಜಿ, ಗುರುತಿನ ಚೀಟಿ (ಆಧಾರ್ ಕಾರ್ಡ್) 10 ಮತ್ತು 12ನೇ ತರಗತಿಯ ಅಂಕಪಟ್ಟಿ, ವ್ಯಾಸಂಗ ಪ್ರಮಾಣ ಪತ್ರ, ಪೋಷಕರ ಪ್ರಮಾಣ ಪತ್ರಗಳು, ಅರ್ಹತಾ ಖಂಡಿಕೆಗೆ ಅನುಗುಣವಾಗಿ ಅಗತ್ಯವಿರುವ ಇತರೆ ಎಲ್ಲ ಮೂಲ ದಾಖಲೆ ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡು ಬರಬೇಕು ಎಂದು ಅವರು ತಿಳಿಸಿದ್ದಾರೆ. ಪರಿಶೀಲನೆಗೆ ಹಾಜರಾಗಿ ಅರ್ಹತೆ ಪಡೆಯುವ ಅಭ್ಯರ್ಥಿಗಳಿಗೆ ಮಾತ್ರ ಆನ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಹಾಗೂ ಇಚ್ಛೆ ದಾಖಲಿಸಲು ಅವಕಾಶ ನೀಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.



ಸಿಎಂ ಸಿದ್ದರಾಮಯ್ಯ ಗಂಭೀರ ಆರೋಪ | ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಶೃಂಗೇರಿ ಕ್ಷೇತ್ರದಲ್ಲಿ ವೋಟ್ ಡಕಾಯಿತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಕೇವಲ ವೋಟ್ ಚೋರಿ ಅಲ್ಲ, ವೋಟ್ ಡಕಾಯಿತಿಯೇ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆಪಾದನೆ ಮಾಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ''ಕಾಂಗ್ರೆಸ್‌ನ ರಾಜೇಗೌಡರಿಗೆ ಬಂದಿದ್ದ ಸುಮಾರು 250 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಇದೊಂದು ಗಂಭೀರ ಸ್ವರೂಪದ ಕ್ರಿಮಿನಲ್ ಸಂಚು ಎಂದು ದೂರಿದರು.

''ಅಂಚೆ ಮತಗಳ ಮರು ಎಣಿಕೆ ಬಗ್ಗೆ ಕೋರ್ಟ್ ಗಮನಕ್ಕೂ ತರದೆ, ಚುನಾವಣಾ ವೀಕ್ಷಕರ ಅನುಮತಿ ಪಡೆಯದೆ ಫಲಿತಾಂಶ ಘೋಷಣೆ ಮಾಡಲಾಗಿದೆ. ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಮೇಲೆ ಚುನಾವಣಾ ಆಯೋಗ ಅಥವಾ ಬೇರಾವುದೋ ಮೂಲದ ಒತ್ತಡ ಇರಬಹುದು,'' ಎಂದು ಸಂಶಯವ್ಯಕ್ತಪಡಿಸಿದರು.

''2023ರ ಚುನಾವಣೆಯಲ್ಲಿ ಎಣಿಕೆ ಮಾಡಿದಾಗ ಸರಿ ಇದ್ದ ಮತಗಳು ಮರು ಎಣಿಕೆ ವೇಳೆ ಅನೂರ್ಜಿತ ಆಗಿದ್ದು ಹೇಗೆ? ಮರು ಎಣಿಕೆ ವೇಳೆ ರಾಜೇಗೌಡರಿಗೆ ಸೇರಿದ್ದ 170 ಮತಗಳು ಅನರ್ಹವಾಗಿವೆ. ಎಣಿಕೆ ಮಾಡಿ ದಾಖಲೆಗಳನ್ನು ಟ್ರಂಕ್‌ನಲ್ಲಿ ಇರಿಸುವಾಗ ಅಧಿಕಾರಿಗಳನ್ನು ಬಳಸಿಕೊಂಡು ಮತಪತ್ರಗಳನ್ನು ತಿದ್ದಿರುವುದು ಖಚಿತವಾಗಿದೆ. ಅಂಚೆ ಮತಗಳನ್ನೇ ಮರು ಎಣಿಕೆ ಮಾಡುವಂತೆ ಬಿಜೆಪಿಯ ಜೀವರಾಜ್ ಬೇಡಿಕೆಯೂ ಈ ಸಂಶಯವನ್ನು ದೃಢಪಡಿಸಿದೆ. ಆ ಸಂದರ್ಭದಲ್ಲಿ ರಾಜ್ಯದಲ್ಲಿದ್ದ ಬಿಜೆಪಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಕ್ರಿಮಿನಲ್ ಪಿತೂರಿ ಮತ್ತು ಟ್ಯಾಂಪರಿಂಗ್ ಮಾಡಿದೆ,'' ಎಂದು ಆಪಾದಿಸಿದರು.

ಆಗ ಇಲ್ಲದ ಆಕ್ಷೇಪ: ''ಇಬ್ಬರೂ ಅಭ್ಯರ್ಥಿಗಳು ಪಡೆದ ಅಂಚೆ, ಇವಿಎಂ ಮತಗಳನ್ನು ಅರ್ಹ ಹಾಗೂ ಅನರ್ಹ ಮತಗಳ ಬಗ್ಗೆ ಚುನಾವಣಾಧಿಕಾರಿಗಳು, ಏಜೆಂಟರು ಸಹಿ ಮಾಡಿ ಫಲಿತಾಂಶ ಘೋಷಿಸಿದ್ದರು. ಮತಗಳು ಅನರ್ಹ ಆಗಿದ್ದರೆ ಬಿಜೆಪಿಯ ಚುನಾವಣಾ ಏಜೆಂಟ್ ಆಕ್ಷೇಪ ಎತ್ತಿರಲಿಲ್ಲ ಏಕೆ,'' ಎಂದು ಪ್ರಶ್ನಿಸಿದರು.

''ಅಕ್ರಮ ನಡೆದಿದೆ ಎಂದು ಆಪಾದಿಸಿ ಜೀವರಾಜ್ ಸಲ್ಲಿಸಿದ್ದ ಮನವಿಯನ್ನು ಹೈಕೋರ್ಟ್ ಕಳೆದ ಮಾ.6 ರಂದು ಪುರಸ್ಕರಿಸಿ ಮರು ಎಣಿಕೆಗೆ ಆದೇಶಿಸಿತ್ತು. ಮರು ಎಣಿಕೆಯಲ್ಲಿ ರಾಜೇಗೌಡರಿಗೆ 314 ಅಂಚೆ ಮತಗಳು ಮಾತ್ರ ಅರ್ಹ ಎಂದು ಆಗಿ ಉಳಿದವು

ಅನರ್ಹವಾಗುತ್ತವೆ. ಜೀವರಾಜ್ ಅವರಿಗೆ ಮರು ಎಣಿಕೆಯಲ್ಲಿ 690 ಮತಗಳು ಅರ್ಹವಾಗಿವೆ. ಅಂದರೆ ಬಿಜೆಪಿಯವರು ಕ್ರಿಮಿನಲ್ ಸಂಚು ಮಾಡಿ ರಾಜೇಗೌಡರಿಗೆ ಬಂದಿದ್ದ ಅಂಚೆ ಮತಗಳನ್ನು ತಿದ್ದಿರುವುದು ಸ್ಪಷ್ಟ. ಇದು ವೋಟ್ ಡಕಾಯಿತಿ,'' ಎಂದು ಸಿದ್ದರಾಮಯ್ಯ ತಮ್ಮ ಆಪಾದನೆಗೆ ವಿವರಣೆ ನೀಡಿದರು.

ವೀಕ್ಷಕರ ಶಂಕೆ: ''ಮರು ಎಣಿಕೆ ಸಂದರ್ಭದಲ್ಲಿ ಚುನಾವಣಾ ವೀಕ್ಷಕರೂ ಬಂದಿದ್ದರು. ಗಂಭೀರ ಸ್ವರೂಪದ ಕ್ರಿಮಿನಲ್ ಸಂಚು ನಡೆದಿದೆ ಎಂದು ವೀಕ್ಷಕರು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ ಎಂಬ ಮಾಹಿತಿ ದೊರಕಿದೆ. ಅನರ್ಹ ಎಂದು ಗುರುತಿಸಿದ ಅಂಚೆ ಮತಗಳನ್ನು ಫೊರೆನ್ಸಿಕ್ ಪರಿಶೀಲನೆಗೆ ಕಳಿಸಬೇಕಿತ್ತು. ಚುನಾವಣಾ ಫಲಿತಾಂಶ ಘೋಷಣೆಯನ್ನು ಕೋರ್ಟ್ ವಿವೇಚನೆಗೆ ಬಿಡಬೇಕಾಗಿತ್ತು ಮತ್ತು ಚುನಾವಣಾ ವೀಕ್ಷಕರ ಅನುಮತಿ ಪಡೆಯಬೇಕಿತ್ತು. ಅದನ್ನು ಬಿಟ್ಟು ಚುನಾವಣಾಧಿಕಾರಿಗಳೇ ಫಲಿತಾಂಶ ಘೋಷಣೆ ಮಾಡಿದ್ದಾರೆ. ತಪ್ಪು ಮಾಡಿರುವ ಅಧಿಕಾರಿ ಯಾರೇ ಆಗಿದ್ದರೂ ಶಿಕ್ಷೆ ಆಗಬೇಕು. ಕ್ರಿಮಿನಲ್ ಸಂಚು ನಡೆದಿರುವ ಬಗ್ಗೆ ರಾಜೇಗೌಡ ನೀಡಿದ ದೂರಿನ ಮೇಲೆ ಎಫ್‌ಐಆರ್ ದಾಖಲಾಗಿದ್ದು, ನಿಷ್ಪಕ್ಷಪಾತವಾಗಿ ತನಿಖೆ ನಡೆಯಬೇಕು,'' ಎಂದು ಸಿಎಂ ಹೇಳಿದರು.

''ಈ ಹಿಂದೆ ಬಿಜೆಪಿಯವರು ಚಿಲುಮೆ ಎಂಬ ಸಂಸ್ಥೆ ಮೂಲಕ ಮತದಾರರ ಪಟ್ಟಿಯನ್ನೇ ತಿರುಚಿದ್ದರು. ಆಳಂದದಲ್ಲಿ ನೈಜ ಮತದಾರರನ್ನೇ ಪಟ್ಟಿಯಿಂದ ಕೈಬಿಟ್ಟಿದ್ದರು. ಬಿಜೆಪಿಯವರಿಗೆ ಮೊದಲಿನಿಂದಲೂ ಪ್ರಜಾಪ್ರಭುತ್ವ, ಸಂವಿಧಾನದಲ್ಲಿ ನಂಬಿಕೆಯಿಲ್ಲ. ಹಾಗಾಗಿ ಬಿಜೆಪಿಯವರು ಇಂತಹ ಅಪರಾಧ ಎಸಗಲು ಹಿಂಜರಿಯುವುದಿಲ್ಲ. ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ ಹಾಗೂ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಸಮರ್ಥನೆ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಮುಂದಿನ ದಿನಗಳಲ್ಲಿ ಜನರು ಅವರಿಗೆ ಪಾಠ ಕಲಿಸಲಿದ್ದಾರೆ,'' ಎಂದರು.

ಕಾನೂನು ಹೋರಾಟ: ಡಿಸಿಎಂ

''ಶೃಂಗೇರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದಿರುವ ಅಂಚೆ ಮತಗಳನ್ನು ತಿದ್ದುವ ಮೂಲಕ ಮರು ಎಣಿಕೆಯಲ್ಲಿ ಅಸಿಂಧುಗೊಳಿಸಲಾಗಿದೆ. ಇಡೀ ದೇಶದಲ್ಲಿ ಇಂತಹ ಅಪರಾಧ ನಡೆದಿಲ್ಲ, ಇದರ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ,'' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. '' ಮತ ಎಣಿಕೆ ಮಾಡಿದ ಬಳಿಕ ಬಿಜೆಪಿ ಅಭ್ಯರ್ಥಿಯು ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳನ್ನು ತಿದ್ದಿಸಿದ್ದಾರೆ. ಹಾಗಾಗಿಯೇ ಜೀವರಾಜ್ ಅವರು ನಿರ್ದಿಷ್ಟ ಮತಗಳ ಬಂಡಲ್ ಅನ್ನೇ ಮರು ಎಣಿಕೆ ಮಾಡಲು ಪಟ್ಟು ಹಿಡಿದಿದ್ದರು. ಅಧಿಕಾರಿಗಳು ಹಾಗೂ ಬಿಜೆಪಿ ಅಭ್ಯರ್ಥಿ ಈ ಅಕ್ರಮದಲ್ಲಿ ಭಾಗಿಯಾಗಿದ್ದು, ಗಂಭೀರ ತನಿಖೆ ನಡೆಯಬೇಕು,'' ಎಂದು ತಿಳಿಸಿದರು.

ಶೃಂಗೇರಿ ಕ್ಷೇತ್ರದ ಪ್ರಕರಣದಲ್ಲಿ ಮತಗಳಿಗೆ ಇರಬೇಕಾದ ಭದ್ರತೆ, ಪಾವಿತ್ರ್ಯತೆ ಸಂಪೂರ್ಣ ಹಾಳಾಗಿದೆ
- ಬಿ.ಎಲ್.ಶಂಕರ್ ಕೆಪಿಸಿಸಿ ಉಪಾಧ್ಯಕ್ಷ

201 ಮತಗಳ ಅಂತರದಿಂದ ಗೆದ್ದಿದ್ದ ನನ್ನನ್ನು ಮೋಸದಿಂದ ಸೋಲಿಸಲಾಗಿದೆ. ಆಯೋಗ ಮತ್ತು ನ್ಯಾಯಾಲಯದಲ್ಲಿ ನನಗೆ ನ್ಯಾಯ ಸಿಗುವ ವಿಶ್ವಾಸವಿದೆ. ಈಗ ನ್ಯಾಯ ಸಿಗಲಿಲ್ಲ ಎಂದಾದರೆ ದೇಶಕ್ಕೆ ಕೆಟ್ಟ ಸಂದೇಶ ಹೋಗುತ್ತದೆ.
-ಟಿ.ಡಿ.ರಾಜೇಗೌಡ ಮಾಜಿ ಶಾಸಕ

ರಾಜಕೀಯ ಒತ್ತಡಕ್ಕೆ ಮಣಿಯಬೇಡಿ

ಚಿಕ್ಕಮಗಳೂರು ಪೊಲೀಸರಿಗೆ ಎಚ್ಚರಿಕೆ ನೀಡಿದ ಹೈಕೋರ್ಟ್ ಪೀಠ

■ **ವಿಕ ಸುದ್ದಿಲೋಕ** ಬೆಂಗಳೂರು

ಅಂಚೆ ಮತಗಳ ಮರು ಎಣಿಕೆಯಲ್ಲಿ ಮತಗಳನ್ನು ತಿರುಚಿದ ಆರೋಪ ಸಂಬಂಧ ಶೃಂಗೇರಿಯ ಬಿಜೆಪಿ ಶಾಸಕ ಡಿ.ಎನ್.ಜೀವರಾಜ್ ವಿರುದ್ಧ ಚಿಕ್ಕಮಗಳೂರು ಟೌನ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಎರಡು ದಿನಗಳ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

''ಪ್ರಕರಣದಲ್ಲಿ ರಾಜಕೀಯ ಒತ್ತಡಕ್ಕೆ ಮಣಿದು ಎಫ್‌ಐಆರ್ ದಾಖಲಿಸಲಾಗಿದೆ. ರಾಜಕೀಯ ಒತ್ತಡಗಳಿಗೆ ಮಣಿದು ಪೊಲೀಸರು ಕೆಲಸ ಮಾಡಬಾರದು. ಹೀಗಾದರೆ, ಯಾವ ಅಧಿಕಾರಿಗಳೂ ಸ್ವತಂತ್ರವಾಗಿ ಕೆಲಸ ಮಾಡಲಾಗದು,'' ಎಂದು ಕಟುವಾಗಿ ಹೇಳಿದೆ.

ಪ್ರಕರಣ ರದ್ದು ಕೋರಿ ಜೀವರಾಜ್ ಸಲ್ಲಿಸಿದ್ದ ಅರ್ಜಿ ಕುರಿತು ನ್ಯಾ. ವಿ. ಶ್ರೀಷಾನಂದ ಅವರಿದ್ದ ರಜಾ ಕಾಲದ ಪೀಠ ಮಂಗಳವಾರ ವಿಚಾರಣೆ ನಡೆಸಿತು. ಅರ್ಜಿ ಸಂಬಂಧ ಚಿಕ್ಕಮಗಳೂರು ಟೌನ್ ಠಾಣಾ ಪೊಲೀಸರು ಮತ್ತು ದೂರುದಾರ ಸುಧೀರ್ ಮುರೊಳ್ಳಿಗೆ ನೋಟಿಸ್ ಜಾರಿಗೊಳಿಸಿತು. ಇದೇ ಪ್ರಕರಣ ಸಂಬಂಧ ತಮ್ಮ ವಿರುದ್ಧದ ಎಫ್‌ಐಆರ್‌ಗೆ ತಡೆ ಕೋರಿ ಮೇನಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿದ್ದ ರಮೇಶ್ ಸಲ್ಲಿಸಿರುವ ಅರ್ಜಿಯಲ್ಲಿಯೂ ಇದೇ ಆದೇಶ ಮಾಡಲಾಗುವುದು ಎಂದು ಮೌಖಿಕವಾಗಿ ತಿಳಿಸಿದ ಪೀಠ, ವಿಚಾರಣೆಯನ್ನು ಮೇ 7ಕ್ಕೆ ಮುಂದೂಡಿತು.

ಅರ್ಜಿದಾರ ಡಿ.ಎನ್.ಜೀವರಾಜ್ ಪರ ವಕೀಲರು, ''2023ರ ಮೇ 13ರಂದು ನಡೆದಿದೆ ಎನ್ನಲಾದ ಆರೋಪ ಆಧರಿಸಿ ಈಗ ಪ್ರಕರಣ ದಾಖಲಿಸಲಾಗಿದೆ. ಆಡಳಿತಾರೂಢ ಪಕ್ಷದ ಅಭ್ಯರ್ಥಿ ಸೋತ ಹಿನ್ನೆಲೆಯಲ್ಲಿ ಈ ಪ್ರಕರಣ ದಾಖಲಿಸಲಾಗಿದೆ,'' ಎಂದು ಆಕ್ಷೇಪಿಸಿದರು.

ಸರಕಾರಿ ಅಭಿಯೋಜಕ ಬಿ.ಎ. ಬೆಳ್ಳಿಯಪ್ಪ, ''ಅಂಚೆ ಮತಗಳ ಕಟ್ಟುಗಳಲ್ಲಿ ಸೀಲು ಇರಲಿಲ್ಲ, ಮತಗಳ ಮೇಲೆ ಡಬಲ್ ಟಿಕ್ ಇದೆ. ಈ ವಿಚಾರವನ್ನು ಮರು ಎಣಿಕೆ ನಡೆಯುವುದಕ್ಕೆ ಮುನ್ನವೇ ಸುಧೀರ್ ಅವರು ಚುನಾವಣಾಧಿಕಾರಿ ಗೌರವ್ ಶೆಟ್ಟಿ ಗಮನಕ್ಕೆ ತಂದಿದ್ದಾರೆ. ಇಲ್ಲಿ ಮತ ತಿರುಚುವ ಕೃತ್ಯ ನಡೆದಿದೆ,'' ಎಂದು ಸಮರ್ಥಿಸಿಕೊಂಡರು.

ಕೆರಳಿದ ನ್ಯಾಯಪೀಠ: ಅದಕ್ಕೆ ಕೆರಳಿದ ನ್ಯಾಯಪೀಠ, ''2023ರ ಮೇ 13ರಂದು ಮತ ತಿರುಚಿದ ಕೃತ್ಯ ನಡೆದಿದೆ ಎನ್ನುವುದಾದರೆ ಈಗ ಏಕೆ ಎಫ್‌ಐಆರ್ ದಾಖಲಿಸಬೇಕು. ಈ ವಿಚಾರವನ್ನು ಮರು ಎಣಿಕೆಗೆ ಆದೇಶಿಸಿದ ಹೈಕೋರ್ಟ್ ಪೀಠದ ಗಮನಕ್ಕೆ ತಂದು, ಪೀಠದ ನಿರ್ದೇಶನ ಪಡೆದು ಹಾಲಿ ಚುನಾವಣಾಧಿಕಾರಿ ಮುಂದುವರಿಯಬೇಕಿತ್ತು,'' ಎಂದು ತೀಕ್ಷ್ಣವಾಗಿ ಕೇಳಿತು.

ಒತ್ತಡಗಳಿಗೆ ಮಣಿಯಬಾರದು: ''ಪ್ರಕರಣದ ತನಿಖಾಧಿಕಾರಿ ಎಲ್ಲಿ,'' ಎಂದು ಪೀಠ ಪ್ರಶ್ನಿಸಿದಾಗ ಮುಂದೆ ಬಂದ ತನಿಖಾಧಿಕಾರಿಗೆ ''ಯಾರೋ ಎಸಗಿದ ಪ್ರಮಾದಕ್ಕೆ ಇನ್ಯಾರ ವಿರುದ್ಧ ಏಕೆ ಪ್ರಕರಣ ದಾಖಲಿಸಿದ್ದೀರಿ? ನಿಮ್ಮನ್ನು ಅಮಾನತು ಮಾಡಲು ಆದೇಶ ಬರೆಯೋಣವೇ ಹೇಳಿ,'' ಎಂದು ಕೇಳಿತು. ನಂತರ ಚುನಾವಣಾ ತಕರಾರು ಅರ್ಜಿ ತೀರ್ಪು ನೀಡಿರುವ ಹೈಕೋರ್ಟ್‌ನ ಸಮನ್ವಯ ಪೀಠದ ಮುಂದೆ ಎಲ್ಲಾ ಸಂಗತಿಗಳನ್ನು ವಿವರಿಸಿ, ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ನಿರ್ದೇಶನ ಪಡೆಯಿರಿ ಎಂದು ಸರಕಾರ, ತನಿಖಾಧಿಕಾರಿಗೆ ತಾಕೀತು ಮಾಡಿತು.

''ಪೊಲೀಸರು ರಾಜಕೀಯ ಒತ್ತಡಗಳಿಗೆ ಮಣಿದು ಕೆಲಸ ಮಾಡಬಾರದು. ಆದರೆ, ಈ ಪ್ರಕರಣದಲ್ಲಿ ರಾಜಕೀಯ ಒತ್ತಡಕ್ಕೆ ಎಫ್‌ಐಆರ್ ದಾಖಲಿಸಲಾಗಿದೆ. ಒಂದು ವೇಳೆ ರಾಜೇಗೌಡರ ವಿರುದ್ಧ ಇಂಥದ್ದೇ ಪ್ರಕರಣ ದಾಖಲಿಸಿದ್ದರೂ ಅದಕ್ಕೆ ತಡೆ ನೀಡುತ್ತಿದ್ದೆ. ನ್ಯಾಯಾಧೀಶರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿಲ್ಲ,'' ಎಂದು ಪೀಠ ಹೇಳಿತು.

■ 2023ರ ದೂರಿಗೆ ಈಗೇಕೆ ಎಫ್‌ಐಆರ್?

■ ಯಾರೋ ಎಸಗಿದ ಪ್ರಮಾದಕ್ಕೆ ಇನ್ಯಾರ ವಿರುದ್ಧ ಏಕೆ ಪ್ರಕರಣ?

ನ್ಯಾಯಾಂಗ ಅಧಿಕಾರಿ ನೇಮಕ ಸ್ಥಿತಿ

ಪಶ್ಚಿಮ ಬಂಗಾಳದಲ್ಲಿ ನ್ಯಾಯಾಂಗ ಅಧಿಕಾರಿಗಳನ್ನು ಚುನಾವಣಾಧಿಕಾರಿಗಳನ್ನಾಗಿ ನೇಮಿಸಿದ ಸುಪ್ರೀಂಕೋರ್ಟ್ ನಿರ್ದೇಶನ ಉಲ್ಲೇಖಿಸಿದ ನ್ಯಾಯಪೀಠ, ''ಇಲ್ಲಿಯೂ ಅಂಥದ್ದೇ ಪರಿಸ್ಥಿತಿ ಬರಲಿದೆ. ನ್ಯಾಯಾಂಗ ಅಧಿಕಾರಿಗಳನ್ನು ಚುನಾವಣಾಧಿಕಾರಿಗಳನ್ನು ನೇಮಿಸುವ ಸ್ಥಿತಿ ಬರಲಿದೆ. ಆ ಹಂತಕ್ಕೆ ಇದು ಹೋಗಲಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ,'' ಎಂದು ಖಾರವಾಗಿ ಹೇಳಿತು. ಅಂತಿಮವಾಗಿ ಬಿ.ಎ.ಬೆಳ್ಳಿಯಪ್ಪ, ''ಪ್ರಕರಣದಲ್ಲಿ ಮತಗಳನ್ನು ತಿರುಚಲಾಗಿದೆ. ಆ ಸಂಬಂಧ ಎಲ್ಲಾ ದಾಖಲೆಗಳನ್ನು ಮೇ 7ರಂದು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಅದಕ್ಕೆ ಅವಕಾಶ ನೀಡಬೇಕು,'' ಎಂದು ಕೋರಿದರು. ಅದಕ್ಕೆ ಒಪ್ಪಿದ ನ್ಯಾಯಪೀಠ, ವಿಚಾರಣೆಯನ್ನು ಮೇ 7ಕ್ಕೆ ಮುಂದೂಡಿತು.

ಪ್ರಶ್ನೆ: ಮಾಡುವ ಕೆಲಸಗಳೆಲ್ಲ ಅರ್ಧದಲ್ಲೇ ನಿಲ್ಲುತ್ತಿವೆ ಗುರೂಜಿ?

ಜನ್ಮ ದಿನಾಂಕ: 29.03.2000 **ನಕ್ಷತ್ರ:** ಹಸ್ತಾ

ಪರಿಹಾರ: ಏಕಾದಶಕ್ಕೆ ಗುರು ಬರಲಿದ್ದು, ನಿಮ್ಮ ಕೆಲಸಗಳಲ್ಲಿ ಕೊಂಚ ವೇಗ ಕಾಣಬಹುದು. ವಿಘ್ನಹರ ಚಿಂತಾಮಣಿ ಗಣಪತಿಯ ಪ್ರಾರ್ಥನೆಯಿಂದ ನಿಂತ ಕೆಲಸಗಳೆಲ್ಲ ಮುಂದೆ ಸಾಗಿ, ಜನಾನುರಾಗ ಉಂಟಾಗಿ, ನಿಮ್ಮ ಸ್ಥಿತಿ ಸಂಪೂರ್ಣ ಬದಲಾಗುವುದು. ನಿಮ್ಮ ಗುರು ಯಾರೇ ಆಗಿರಲಿ, ಅವರಿಗೆ ನಮಸ್ಕರಿಸಿ. ನಿಮ್ಮ ಆಚರಣೆಯಲ್ಲಿರುವ ಪೀಠಾಧಿಪತಿಗಳನ್ನು ದರ್ಶಿಸಿ ಆಶೀರ್ವಾದ ಪಡೆಯಿರಿ.

ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 06-05-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ವಸಂತ. **ಮಾಸ:** ವೈಶಾಖ.
ಪಕ್ಷ: ಕೃಷ್ಣ. **ಮಳೆ ನಕ್ಷತ್ರ:** ಭರಣಿ.
ನಿತ್ಯನಕ್ಷತ್ರ: ಮೂಲ.
ತಿಥಿ: ಚತುರ್ಥಿ. **ಯೋಗ:** ಸಿದ್ಧ.
ಕರಣ: ಬಾಲವ.
ವಾರ: ಬುಧವಾರ.

ರಾಹು ಕಾಲ: ಮ. 12.00 - 1.30
ಗುಳಿಕ ಕಾಲ: ಬೆ. 10.30-12.00
ಯಮಗಂಡ ಕಾಲ: ಬೆ. 7.30-9.00
ಸೂರ್ಯ ಉದಯ: ಬೆ.5.58
ಸೂರ್ಯ ಅಸ್ತ: ಸಂ. 6.34

ಬಿಎಸ್‌ವೈ ಕಾರ್ಯಕ್ರಮಕ್ಕೆ 10 ಲಕ್ಷ ಜನ

ದುರ್ಗದ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಬಫೆ ಮಾದರಿಯಲ್ಲಿ ಊಟ

■ **ವಿಕ ಸುದ್ದಿಲೋಕ** ಚಿತ್ರದುರ್ಗ

ಮೇ 9ರಂದು ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ಆಯೋಜಿಸಿರುವ ನಗರದ ಹೊರವಲಯದ ಶ್ರೀಮಾದರ ಚನ್ನಯ್ಯ ಗುರುಪೀಠದ ಬಳಿಯ ಮೈದಾನದಲ್ಲಿ ಆಹಾರಕ್ಕೆ ಸಂಬಂಧಪಟ್ಟ ಸ್ಥಳಕ್ಕೆ ಬೆಂಗಳೂರಿನ ಐದಾರು ವಿಧಾನಸಭಾ ಕ್ಷೇತ್ರಗಳ ಶಾಸಕರು, ಮಂಗಳವಾರ ಭೇಟಿ ನೀಡಿ, ಪರಿಶೀಲಿಸಿದರು.

ಈ ವೇಳೆ ಸುದ್ದಿಗಾರರ ಜತೆ ಬೆಂಗಳೂರಿನ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿ, ''ಕಾರ್ಯಕ್ರಮಕ್ಕೆ ರಾಜ್ಯದ ನಾನಾ ಕಡೆಗಳಿಂದ ಆಗಮಿಸುವ 10 ಲಕ್ಷ ಜನರಿಗೆ ಊಟದ ಕೊರತೆಯಾಗದಂತೆ ನಿಭಾಯಿಸಲಾಗುವುದು. ಬರುವವರಿಗೆ ಊಟ, ನೀರಿನ ಜವಾಬ್ದಾರಿಯನ್ನು ಪಕ್ಷ ಬೆಂಗಳೂರಿನ ಶಾಸಕರು ಮತ್ತು ಪ್ರಮುಖರಿಗೆ ವಹಿಸಿದೆ,''ಎಂದರು.

''ಈಗಾಗಲೇ ಅಡುಗೆ ಭಟ್ಟರನ್ನು ನೇಮಿಸಲಾಗಿದೆ. ಸುಮಾರು 500 ಜನ ಅಡುಗೆಯವರು ಅಗತ್ಯ ಸಾಮಗ್ರಿ ಸಮೇತರಾಗಿ ಚಿತ್ರದುರ್ಗಕ್ಕೆ ಬರಲಿದ್ದಾರೆ,''ಎಂದು ಮಾಹಿತಿ ನೀಡಿದರು.

''ಮೇ9 ಬೆಳಗ್ಗೆ 9ರಿಂದ ಕಾರ್ಯಕ್ರಮ ಮುಗಿಯುವವರೆಗೂ ಬಫೆ ಮಾದರಿಯಲ್ಲಿ ಊಟದ ವ್ಯವಸ್ಥೆ ಮಾಡಲಾಗುವುದು. ಬೆಳಗ್ಗೆ ಟೊಮೆಟೊ ಬಾತ್, ಮೊಸರನ್ನ, ಮೈಸೂರು ಪಾಕ್, ಮಧ್ಯಾಹ್ನ 12ರ ನಂತರ ಪಲಾವ್, ಮೊಸರನ್ನ, ಮೈಸೂರು ಪಾಕ್ ಹಾಗೂ ಬಾಟಲ್ ನೀರು ಒದಗಿಸಲಾಗುವುದು. ಒಂದೊಂದು ಕೌಂಟರ್ ಬಳಿ ಇಬ್ಬರು ಶಾಸಕರು, 120 ಜನ ಸ್ವಯಂ ಸೇವಕರು ಇರಲಿದ್ದಾರೆ,'' ಎಂದರು.

ಈ ಸಂದರ್ಭದಲ್ಲಿ ಮಹಾಲಕ್ಷ್ಮಿಪುರಂ ಶಾಸಕ ಗೋಪಾಲಯ್ಯ, ದಾಸರಹಳ್ಳಿ ಶಾಸಕ ಮುನಿರಾಜ್, ಬೆಂಗಳೂರು ದಕ್ಷಿಣದ ಕೃಷ್ಣಪ್ಪ, ಮಾಜಿ ಸಚಿವ ಕಟ್ಟಾ ಸುಬ್ರಮಣ್ಯನಾಯ್ಡು, ರಾಜ್ಯ ಉಪಾಧ್ಯಕ್ಷರಾದ ತಮ್ಮೇಶ್ ಗೌಡ್ರು, ಮಲ್ಲಿಕಾರ್ಜುನ, ಕಲ್ಲಂ ಸೀತಾರಾಮರೆಡ್ಡಿ ಇದ್ದರು.

ಹಬ್ಬದ ವಾತಾವರಣ

ಬೆಂಗಳೂರಿನ ರಾಜರಾಜೇಶ್ವರಿ ನಗರದ ಶಾಸಕ ಮುನಿರತ್ನ ಮಾತನಾಡಿ, ''ಯಡಿಯೂರಪ್ಪ ಕೊಟ್ಟ ಮಾತಿನಂತೆ ನಡೆದ ವ್ಯಕ್ತಿಯಾಗಿದ್ದಾರೆ. ಅಧಿಕಾರದ ಸಮಯದಲ್ಲಿ ತಾನು ಬೆಳೆದು ತನ್ನ ಜತೆಯಲ್ಲಿ ಇರುವವರನ್ನೂ ಬೆಳೆಸುವುದರ ಮೂಲಕ ದೊಡ್ಡ ವ್ಯಕ್ತಿಯಾಗಿದ್ದಾರೆ. ನಂಬಿದವರನ್ನು ಕೈಬಿಡುವುದಿಲ್ಲ ಎಂಬ ಹೆಸರು ಯಾರಿಗಾದರೂ ಇದ್ದರೆ ಅದು ಯಡಿಯೂರಪ್ಪಗೆ ಮಾತ್ರ. ಅವರ 50 ವರ್ಷದ ಹೋರಾಟದ ಜೀವನದ ಸಾಧನೆಯ ಕಾರ್ಯಕ್ರಮದ ಯಶಸ್ಸಿಗೆ ಎಲ್ಲರೂ ಕಂಕಣಬದ್ಧರಾಗಿ ದುಡಿಯುತ್ತಿದ್ದಾರೆ. ಪಕ್ಷದ ಕಾರ್ಯಕರ್ತರಿಗೆ ಹಬ್ಬದ ವಾತಾವರಣ ಮೂಡಿಸಿದೆ ಎಂದರು.

ನೆರೆಯ ರಾಜ್ಯದ ಜತೆ ರಾಜ್ಯ ರಾಜಕಾರಣದ ಲೆಕ್ಕಾಚಾರ

ಕೆಸಿವಿ ಸಿಎಂ ಆಗಲಿ ಎಂದ ಡಿಕೆಶಿ ಕ್ಯಾಂಪ್

■ **ವಿಕ ಸುದ್ದಿಲೋಕ** ಬೆಂಗಳೂರು

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಗೆ ಕೇರಳದ ಮುಖ್ಯಮಂತ್ರಿಯಾಗುವ ಆಸೆಯಿದೆ. ಅದಕ್ಕೆ ರಾಹುಲ್ ಗಾಂಧಿ ಒಪ್ಪುವ ಸಾಧ್ಯತೆ ಕಡಿಮೆಯಿದೆ. ಆದರೆ, ಕರ್ನಾಟಕದ ಡಿಸಿಎಂ ಡಿ.ಕೆ. ಶಿವಕುಮಾರ್ ಕ್ಯಾಂಪ್‌ನಲ್ಲಿ ಕೆಸಿಪಿಗೆ ಕೇರಳದ ಪಟ್ಟಾಭಿಷೇಕವಾಗಲಿ ಎಂಬ ಅಭಿಲಾಷೆ ವ್ಯಕ್ತವಾಗುತ್ತಿದೆ!

ವೇಣುಗೋಪಾಲ್ ಅವರಿಗೆ ಕೇರಳದ ಸಿಎಂ ಪಟ್ಟ ದೊರಕಲಿ ಎಂದು ಕರ್ನಾಟಕದ ಡಿಸಿಎಂ ಬೆಂಬಲಿಗರು ಹಾರೈಸಲು ಎತ್ತಣಿಂದೆತ್ತ ಸಂಬಂಧವೆಂದು ಕೇಳಬಹುದು. ಕೆಸಿಪಿ ಕೇರಳದಲ್ಲಿ ಸೆಟ್ಲ್ ಆದರೆ ಇತ್ತ ಡಿ.ಕೆ.ಶಿವಕುಮಾರ್ ದಾರಿಯೂ ಕ್ಲಿಯರ್ ಆಗಬಹುದು ಎನ್ನುವುದು ಒಂದು ಲೆಕ್ಕಾಚಾರ.

ಎಐಸಿಸಿಯಲ್ಲಿ ರಾಹುಲ್‌ಗೆ ಬಲಗೈನಂತೆ ಇರುವ ವೇಣುಗೋಪಾಲ್ ಸಲಹೆಗೆ ರಾಹುಲ್ ಕಿವಿಗೊಡುತ್ತಾರೆ. ಸಿದ್ದರಾಮಯ್ಯ ಅವರಿಗೂ ಕೆಸಿಪಿ ಜತೆಗೇ ಉತ್ತಮ ಬಾಂಧವ್ಯವಿದೆ. ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯ ಪ್ರಸ್ತಾಪ ಬಂದಾಗೆಲ್ಲ ಸಿದ್ದರಾಮಯ್ಯ ಅವರ ಪರವಾಗಿ ವೇಣುಗೋಪಾಲ್ ನಿಲ್ಲುತ್ತಿದ್ದಾರೆ. ರಾಹುಲ್ ಗಾಂಧಿ ಅವರಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ಹಾಗಾಗಿ ಡಿ.ಕೆ.ಶಿವಕುಮಾರ್ ಕನಸು ನನಸಾಗಲು ಕೆಸಿಪಿ ಅವರೇ ಅಡ್ಡಿ ಎಂಬ ಅಭಿಪ್ರಾಯವಿದೆ.

ಇಂಥ ಪರಿಸ್ಥಿತಿಯಲ್ಲಿ ತವರು ರಾಜ್ಯ ಕೇರಳಕ್ಕೆ ಹೋಗಿ ವೇಣುಗೋಪಾಲ್ ನಾಯಕತ್ವ ವಹಿಸಿಕೊಂಡರೆ ಎಐಸಿಸಿಯಲ್ಲೂ ಬದಲಾವಣೆಯಾಗುತ್ತದೆ. ಆಂದರೆ ಕೆಸಿಪಿ ಜಾಗಕ್ಕೆ ಬೇರೊಬ್ಬರು ಪ್ರಧಾನ ಕಾರ್ಯದರ್ಶಿಯಾಗಿ ಬರುತ್ತಾರೆ. ಆಗ ರಾಜ್ಯದಲ್ಲಿ ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ಮಾತುಕತೆ ಆರಂಭಿಸಲು ಸೂಕ್ತ ವೇದಿಕೆ ನಿರ್ಮಾಣಕ್ಕೆ ದಾರಿ ತೆರೆದುಕೊಳ್ಳಬಹುದು ಎಂಬ ಚರ್ಚೆ ಡಿಸಿಎಂ ಆಪ್ತ ವಲಯದಲ್ಲಿ ನಡೆಯುತ್ತಿದೆ. ವೇಣುಗೋಪಾಲ್ ಅವರಿಗಂತೂ ಕೇರಳ ಸರಕಾರದ ಸೂತ್ರ ಹಿಡಿಯುವ ಪ್ರಬಲ ಆಕಾಂಕ್ಷೆಯಿದೆ. ಅದಕ್ಕೆ ತಕ್ಕಂತೆ ಕರ್ನಾಟಕ ಕಾಂಗ್ರೆಸ್‌ನ ಒಂದು ವಲಯದ ಹಾರೈಕೆಯೂ ಇದೆ. ಅದರಂತೆ 'ವೇಣುಗೋಪಾಲ್ ಬಯಸಿದ್ದೂ ಹಾಲು-ಹೈಕಮಾಂಡ್ ಕೊಟ್ಟಿದ್ದೂ ಹಾಲು' ಎಂಬಂತಾದರೆ ಕರ್ನಾಟಕದ ರಾಜಕಾರಣದಲ್ಲೂ ಬದಲಾವಣೆಯನ್ನು ಆದಷ್ಟು ಬೇಗ ನಿರೀಕ್ಷಿಸಬಹುದು ಎಂದು ಹೇಳಲಾಗುತ್ತಿದೆ.

ಕೇರಳದಲ್ಲಿ ಯಾರಿಗೆ?

ವೇಣುಗೋಪಾಲ್ ಅವರ ವೈಯಕ್ತಿಕ ಅಪೇಕ್ಷೆಗಳೇನೇ ಇರಬಹುದು. ಆದರೆ, ಇದಕ್ಕೆ ಹಸಿರು ನಿಶಾನೆ ತೋರಬೇಕಾದವರು ರಾಹುಲ್ ಗಾಂಧಿ. ಸದ್ಯ ರಾಹುಲ್ ಗಾಂಧಿ ಅವರಿಗೆ ಅತ್ಯಂತ ಸಮೀಪವರ್ತಿಯಾಗಿ ಎಐಸಿಸಿ ಆಗುಹೋಗುಗಳನ್ನು ನೋಡಿಕೊಳ್ಳುತ್ತಿರುವ ಕೆಸಿವಿ ಅವರನ್ನು ಕೇರಳಕ್ಕೆ ಕಳುಹಿಸುವ ಸಾಧ್ಯತೆಗಳು ಬಹಳ ಕಮ್ಮಿ. ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷದ ನಿರ್ವಹಣೆಯಲ್ಲಿ ಅನುಭವ ಹೊಂದಿರುವ ವೇಣುಗೋಪಾಲ್ ಅವರನ್ನು ಬದಲಿಸಿದರೆ ಸೂಕ್ತ ವ್ಯಕ್ತಿಯನ್ನು ತಕ್ಷಣಕ್ಕೆ ತರುವುದು ಕಷ್ಟ. ಅಲ್ಲದೆ ಕೇರಳದಲ್ಲಿ ವಿ.ಡಿ.ಸತೀಶನ್ ಕಳೆದ ಅವಧಿಯಲ್ಲಿ ಪ್ರತಿಪಕ್ಷದ ನಾಯಕರಾಗಿದ್ದು, ಈಗ ಸಿಎಂ ಸ್ಥಾನದ ಪ್ರಬಲ ಆಕಾಂಕ್ಷಿ. ಅವರಿಗೇ ಹೈಕಮಾಂಡ್ ಅವಕಾಶ ನೀಡುವ ನಿರೀಕ್ಷೆಯಿದೆ ಎಂಬ ವರ್ತಮಾನವಿದೆ.

ಸ್ಟ್ರಾಂಗ್ ರೂಮ್ ಕೀಲಿ ವಿವಾದ ಆಯೋಗಕ್ಕೆ ಆಮ್ ಆದ್ಮಿ ದೂರು

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯ ಮತ ಎಣಿಕೆ ವಿಳಂಬಕ್ಕೆ ಸ್ಟ್ರಾಂಗ್ ರೂಂ ಕೀಲಿಕೈ ಕಳೆದುಕೊಂಡಿರುವುದು ಕಾರಣ ಎಂಬುದು ಬಹಿರಂಗವಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಹಾಗೂ ಚುನಾವಣೆ ಅಭ್ಯರ್ಥಿ ಕೆ.ಎಸ್. ಶಿವಕುಮಾರಪ್ಪ ಮಾಹಿತಿ ನೀಡಿ,''ನಗರದ ಡಿಆರ್‌ಆರ್ ವಿದ್ಯಾಸಂಸ್ಥೆಯಲ್ಲಿ ಸೋಮವಾರ ದಾವಣಗೆರೆ ದಕ್ಷಿಣ ವಿಧಾನಸಭೆ ಉಪಚುನಾವಣೆ ಮತ ಎಣಿಕೆಗೆ ನಿಯಮದಂತೆ ಬೆಳಗ್ಗೆ 8 ಗಂಟೆಗೆ ಸ್ಟ್ರಾಂಗ್ ರೂಮ್ ಬಾಗಿಲು ತೆರೆಯಬೇಕಿತ್ತು. ಆದರೆ, 8.30 ಆದರೂ ಬೀಗ ತೆರೆಯಲೇ ಇಲ್ಲ, ಬೀಗ ತೆಗೆಯಲು ಸಿಬ್ಬಂದಿ ಹರಸಾಹಸ ಮಾಡುತ್ತಿದ್ದರು. ಕೊನೆಗೆ ಸಿಬ್ಬಂದಿಗಳು ಬೀಗ ಮುರಿದರು. ಈ ಬಗ್ಗೆ ರಾಜ್ಯ ಹಾಗೂ ಕೇಂದ್ರ ಚುನಾವಣೆ ಆಯೋಗಗಳಿಗೆ ದೂರು ನೀಡಲಾಗಿದೆ,' ಎಂದರು.

''ಮತ ಎಣಿಕೆ ಕೇಂದ್ರದಲ್ಲಿ ಅಷ್ಟೊಂದು ಭದ್ರತೆ, ಸಿಸಿ ಕ್ಯಾಮೆರಾ ಎಲ್ಲ ಇತ್ತು. ಆದರೂ ಬೀಗ ಇಲ್ಲ, ಮಿಸ್ ಮ್ಯಾಚ್ ಆಗಿದೆ, ನಂಬರ್ ಬರ್ತಾ ಇಲ್ಲ, ಬೀಗ ಸಿಕ್ತಾ ಇಲ್ಲ ಎಂದು ಸಬೂಬು ಹೇಳುವುದರ ಅರ್ಥವೇನು? ಕಡೆಗೆ ಬೀಗ ಒಡೆದು ಬಾಗಿಲು ತೆರೆಯಲಾಯಿತು. ಹಾಗಾದರೆ ಬೀಗ ಎಲ್ಲಿ ಹೋದವು? ರಾತ್ರಿಯೆಲ್ಲಾ ಬೀಗಗಳು ಯಾರ ಬಳಿ ಇದ್ದವು? ಬೀಗ ಇಟ್ಟುಕೊಂಡವರು ಬೆಳಗ್ಗೆ ಏಕೆ ಬರಲಿಲ್ಲ? ಮಿಸ್ ಮ್ಯಾಚ್ ಹೇಗೆ ಸಾಧ್ಯ ಎಂಬೆಲ್ಲಾ ಪ್ರಶ್ನೆಗಳು ಮೂಡುತ್ತಿವೆ,''ಎಂದು ಹೇಳಿದರು.

ಬಿಜೆಪಿ ಹೇಳಿದಂತೆ ಉಪಚುನಾವಣೆ 2028ಕ್ಕೆ ದಿಕ್ಸೂಚಿ: ಸಿಎಂ

ವರಿಷ್ಠರು ಕರೆದಾಗ ದಿಲ್ಲಿಗೆ: ಸಿದ್ದರಾಮಯ್ಯ

■ **ವಿಕ ಸುದ್ದಿಲೋಕ** ಬೆಂಗಳೂರು

ಸಚಿವ ಸಂಪುಟ ಪುನಾರಚನೆ ಪ್ರಸ್ತಾಪದ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡಲಿದ್ದು, ವರಿಷ್ಠರು ಕರೆದಾಗ ದಿಲ್ಲಿಗೆ ಹೋಗುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಸಂಪುಟ ಪುನಾರಚನೆ ಸೇರಿ ಎಲ್ಲವೂ ಪಕ್ಷದ ಹೈಕಮಾಂಡ್ ನಾಯಕರ ವಿವೇಚನೆಗೆ ಬಿಟ್ಟಿದ್ದು,'' ಎಂದರು.

23 ಸಾವಿರ ಮುಸ್ಲಿಂ ವೋಟ್ ಮಿಸ್: ''ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 56 ಸಾವಿರ ಮುಸ್ಲಿಮರು ಮತದಾನ ಮಾಡಿದ್ದು, ಎಸ್‌ಡಿಪಿಐ ಅಭ್ಯರ್ಥಿಗೆ ಸುಮಾರು 19 ಸಾವಿರ ಮತ್ತು ಉಳಿದ ಮುಸ್ಲಿಂ ಅಭ್ಯರ್ಥಿಗಳಿಗೆ ಬಿದ್ದಿರುವುದು ಸೇರಿ 23 ಸಾವಿರದಷ್ಟು ಮತಗಳು ಹೋಗಿವೆ. ಕಾಂಗ್ರೆಸ್ ಅಭ್ಯರ್ಥಿಗೆ ಸುಮಾರು 35 ಸಾವಿರದಷ್ಟು ಮುಸ್ಲಿಂ ಮತಗಳು ಸಿಕ್ಕಿವೆ. ಪಕ್ಷದ ತೆಕ್ಕೆಯಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮೈನಾರಿಟಿ ಮತಗಳು ಕೈತಪ್ಪಿದ್ದು, ನಾವು ಎಲ್ಲಿ ಎಡವಿದ್ದೇವೆ ಎಂಬ ಬಗ್ಗೆ ಪಕ್ಷದ ಕಡೆಯಿಂದ ತನಿಖೆ ಮಾಡುತ್ತೇವೆ,'' ಎಂದು ಸಿದ್ದರಾಮಯ್ಯ ತಿಳಿಸಿದರು.

2028ಕ್ಕೆ ದಿಕ್ಸೂಚಿ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯು ಮುಂದಿನ 2028ರ ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಎಂದೇ ಬಿಜೆಪಿಯವರು ಪ್ರಚಾರ ಮಾಡಿದ್ದರು. ಈಗ ಕಾಂಗ್ರೆಸ್ ಎರಡೂ ಕ್ಷೇತ್ರಗಳನ್ನು ಗೆದ್ದಿದ್ದೇವೆ. ಹಾಗಾಗಿ 2028ಕ್ಕೂ ಕಾಂಗ್ರೆಸ್ ಪಕ್ಷವೇ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬುದು ಸ್ಪಷ್ಟವಾಗಿದೆ,'' ಎಂದು ಹೇಳಿದರು.

''ಈ ಹಿಂದೆ ನಡೆದ ಮೂರು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿತ್ತು. ಈಗ 2 ಕ್ಷೇತ್ರಗಳ ಉಪ ಚುನಾವಣೆಯನ್ನೂ ಗೆದ್ದಿದೆ. ರಾಜ್ಯದ ಜನ ನಮ್ಮ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡಿದ್ದಾರೆ ಮತ್ತು ಗ್ಯಾರಂಟಿ ಯೋಜನೆಗಳು ರಾಜ್ಯದ ಜನರ ಕೈಹಿಡಿದಿವೆ ಎಂಬುದು ಸ್ಪಷ್ಟವಾಗಿದೆ,'' ಎಂದು ಸಿಎಂ ತಿಳಿಸಿದರು.

ರಿಜ್ವಾನ್, ಸಲೀಂ: ಸುದ್ದಿಗೋಷ್ಠಿ ಸಂದರ್ಭದಲ್ಲಿ ಶಾಸಕ ರಿಜ್ವಾನ್ ಅರ್ಷದ್ ಮತ್ತು ಪರಿಷತ್‌ನಲ್ಲಿ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರನ್ನು ಮುಖ್ಯಮಂತ್ರಿಯವರು ಅಕ್ಕಪಕ್ಕದಲ್ಲಿ ಕೂರಿಸಿಕೊಂಡಿದ್ದು ಗಮನ ಸೆಳೆಯಿತು.

ಅಭ್ಯರ್ಥಿ ಶ್ರೀನಿವಾಸಗೆ ವಿಜಯೇಂದ್ರ ಸಾಂತ್ವನ

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಪಕ್ಷದ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅವರ ನಿವಾಸಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಭೇಟಿ ನೀಡಿದರು.

ಚುನಾವಣೆ ವೇಳೆ ಪ್ರಚಾರ ಕಾರ್ಯದಲ್ಲಿ ಪಕ್ಷಕ್ಕಾಗಿ ಹಗಲಿರುಳು ಶ್ರಮಿಸಿದ ಎಲ್ಲ ಪ್ರಮುಖರು ಮತ್ತು ಕಾರ್ಯಕರ್ತರೊಂದಿಗೆ ಹೊಸ ಹುರುಪು, ಹುಮ್ಮಸ್ಸು ತುಂಬುವ ನಿಟ್ಟಿನಲ್ಲಿ ಮಾತುಕತೆ ನಡೆಸಿದರು.

''ಪಕ್ಷ ಸಂಘಟನೆಗಾಗಿ ಶ್ರಮ ವಹಿಸುವ ನಮ್ಮ ಪ್ರತಿಯೊಬ್ಬ ಕಾರ್ಯಕರ್ತರ ಬದ್ಧತೆ ಹಾಗೂ ಪರಿಶ್ರಮ ಅಮೂಲ್ಯವಾದುದು. ಚುನಾವಣೆಯ ಫಲಿತಾಂಶ ಏನೇ ಇರಲಿ, ನಮ್ಮ ಕಾರ್ಯಕರ್ತರ ನಿಸ್ವಾರ್ಥ ಸೇವೆಗೆ ಬೆಲೆ ಕಟ್ಟಲಾಗದು. ಪ್ರಜಾಪ್ರಭುತ್ವದಲ್ಲಿ ಸೋಲು ಗೆಲುವು ಸಹಜ. ಈಗಿನ ಹಿನ್ನಡೆಯಿಂದ ಕಾರ್ಯಕರ್ತರು ಧೃತಿಗೆಡುವ ಅವಶ್ಯಕತೆಯಿಲ್ಲ, ಜನರ ನಡುವೆಯೇ ಕೆಲಸ ಮಾಡೋಣ, ಕಮಲ ಅರಳುವ ಸಮಯ ನಿಶ್ಚಿತವಾಗಿ ಬರಲಿದೆ,''ಎಂದು ಧೈರ್ಯ ತುಂಬಿಸಿದರು.

ದುರ್ಗದಲ್ಲಿ ಚುನಾವಣಾ ರಣಕಹಳೆ



ಸುಂಟಿಕೊಪ್ಪ(ಮಡಿಕೇರಿ): ಪಂಚ ರಾಜ್ಯಗಳ ಚುನಾವಣೆಗಳ ಪೈಕಿ 3 ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದು, ಕರ್ನಾಟಕದಲ್ಲಿಯೂ 2028ರಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲು ಪ್ರೇರಣೆ ದೊರೆತಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ನುಡಿದರು.

ಮಾದಾಪುರದಲ್ಲಿ ಸುದ್ದಿಗಾರರೊಂದಿಗೆ ಪ್ರತಿಕ್ರಿಯಿಸಿ,'' ಚಿತ್ರದುರ್ಗದ ಯಡಿಯೂರಪ್ಪ ಅಭಿನಂದನೋತ್ಸವದಲ್ಲಿ ಬಿಜೆಪಿ ಚುನಾವಣಾ ರಣಕಹಳೆ ಊದಲಿದೆ. ಆ ಮೂಲಕ ಕಾಂಗ್ರೆಸ್ ಸರಕಾರದ ಪತನಕ್ಕೆ ದಿನಗಣನೆ ಪ್ರಾರಂಭಿಸಲಿದೆ,'' ಎಂದು ಹೇಳಿದರು. ''15 ವರ್ಷಗಳ ಕಾಲ ಪಶ್ಚಿಮ ಬಂಗಾಳದಲ್ಲಿ ದುರಾಡಳಿತ ನಡೆಸಿದ್ದ ಮಮತಾ ಬ್ಯಾನರ್ಜಿಯ ಸರ್ವಾಧಿಕಾರವನ್ನು ಅಂತ್ಯಗೊಳಿಸಿದ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಜೋಡಿಯ ಕಾರ್ಯತಂತ್ರ ಭಾರತೀಯರ ಮೆಚ್ಚುಗೆ ಗಳಿಸಿದೆ'' ಎಂದರು. ''ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಹಣ, ಹೆಂಡವನ್ನು ಹಂಚುವ ಮೂಲಕ ಕರಾಳ ರಾತ್ರಿಯ ನೆನಪನ್ನು ತಂದು ಕುಟಿಲ ತಂತ್ರದಿಂದ ಗೆಲುವು ಸಾಧಿಸಿದೆ'' ಎಂದು ಪ್ರತಿಕ್ರಿಯಿಸಿದರು.

ಜೀವರಾಜ್‌ಗೆ ಪ್ರಮಾಣ ವಚನ: ರಾಜ್ಯಪಾಲರ ಮೊರೆ ಹೋದ ಬಿಜೆಪಿ

■ **ವಿಕ ಸುದ್ದಿಲೋಕ** ಬೆಂಗಳೂರು

ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆ ಬಳಿಕ ಜಯಶೀಲರಾಗಿರುವ ಬಿಜೆಪಿಯ ಡಿ.ಎನ್.ಜೀವರಾಜ್ ಅವರಿಗೆ ಪ್ರಮಾಣ ವಚನ ಬೋಧಿಸಲು ಸ್ಪೀಕರ್ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿರುವ ಬಿಜೆಪಿಯು, ರಾಜ್ಯಪಾಲರೇ ಪ್ರಮಾಣ ವಚನ ಬೋಧಿಸಬೇಕೆಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಮನವಿ ಮಾಡಿದೆ.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರು ಜೀವರಾಜ್, ಮಾಜಿ ಸಚಿವ ಆರಗ ಜ್ಞಾನೇಂದ್ರ ಅವರೊಂದಿಗೆ ಲೋಕಭವನದಲ್ಲಿ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಿ ಮಧ್ಯ ಪ್ರವೇಶಕ್ಕೆ ಮನವಿ ಮಾಡಿದರು.

ಭೇಟಿ ಬಳಿಕ ಪ್ರತಿಕ್ರಿಯಿಸಿದ ಅಶೋಕ್, ''ಶೃಂಗೇರಿ ಕ್ಷೇತ್ರದಿಂದ ಜೀವರಾಜ್ ಜಯ ಗಳಿಸಿದ್ದು, ಚುನಾವಣಾ ಆಯೋಗದಿಂದ ಪ್ರಮಾಣಪತ್ರವೂ ಸಿಕ್ಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲ ಶಾಸಕರು ಇದೇ ರೀತಿ ಶಾಸಕರು ಎನಿಸಿಕೊಳ್ಳುತ್ತಾರೆ. ಈ ಸಂಬಂಧ ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಫೋನ್ ಕರೆ ಮಾಡಿ ಮಾತಾಡಲು ಯತ್ನಿಸಿದರೆ ಉದ್ದೇಶಪೂರ್ವಕವಾಗಿ ಕರೆ ಸ್ವೀಕರಿಸಲಿಲ್ಲ,'' ಎಂದು ಆರೋಪಿಸಿದರು.

''ಜೀವರಾಜ್ ವಿರುದ್ಧದ ದೂರಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದೆ. ಕಾಂಗ್ರೆಸ್‌ನವರೇ ದೊಡ್ಡ ಡಕಾಯಿತಿ ಮಾಡುತ್ತಾರೆ. ಮತ ಎಣಿಕೆ ವೇಳೆ ಚುನಾವಣಾಧಿಕಾರಿಗೆ ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಕರೆ ಮಾಡಿ ಒತ್ತಡ ಹೇರಿದ್ದಾರೆಯೇ ಎಂಬ ಬಗ್ಗೆ ಸಿಬಿಐ ತನಿಖೆಯಾಗಬೇಕಿದೆ. ಫಲಿತಾಂಶವನ್ನು ತಕ್ಷಣ ಪ್ರಕಟಿಸಬೇಕೆಂಬ ಸೂಚನೆ ಇದೆ. ಇಲ್ಲಿ ಸ್ಪೀಕರ್ ಭೇಟಿಯಾಗಿ ಕೇಳಿದರೆ, ನಾಳೆ ಬಾ ನೋಡೋಣ, ಕಾನೂನು ಸಲಹೆ



ಪಡೆಯಬೇಕಿದೆ ಎನ್ನುತ್ತಿದ್ದಾರೆ,'' ಎಂದು ಆಕ್ಷೇಪಿಸಿದರು.

''ಸಂವಿಧಾನದ ವಿಧಿ 188ರ ಪ್ರಕಾರ, ಪ್ರಮಾಣವಚನವನ್ನು ರಾಜ್ಯಪಾಲರು ಬೋಧಿಸುತ್ತಾರೆ. ಸ್ಪೀಕರ್ ಇಲ್ಲದಿದ್ದರೆ ಬೇರೆಯವರ ಹೆಸರು ಸೂಚಿಸುವ ಅಧಿಕಾರ ರಾಜ್ಯಪಾಲರಿಗಿದೆ. ಹಾಗಾಗಿ ಸ್ಪೀಕರ್ ಬದಲಿಗೆ ರಾಜ್ಯಪಾಲರೇ ಪ್ರಮಾಣವಚನ ಬೋಧಿಸಬೇಕೆಂದು ಕೋರಿದ್ದೇವೆ. ಈ ಪ್ರಕ್ರಿಯೆ ನಡೆಯದಿದ್ದರೆ ಸ್ಪೀಕರ್ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ,'' ಎಂದು ಎಚ್ಚರಿಸಿದರು.

''ಜೀವರಾಜ್ ಸೋತವರು. ಅವರ ಮಾತನ್ನು ಅಧಿಕಾರಿಗಳು ಕೇಳಲು ಸಾಧ್ಯವೇ? ಅಧಿಕಾರಿಗಳು ಮುಖ್ಯಮಂತ್ರಿಗಳ ಮಾತು ಕೇಳುತ್ತಾರೆ. ಶೃಂಗೇರಿ ಕ್ಷೇತ್ರ ವೋಟ್ ಚೋರಿಗೆ ಉದಾಹರಣೆಯಾಗಿದ್ದು, ಇಡೀ ಸರಕಾರವನ್ನೇ ವಜಾ ಮಾಡಬೇಕಿದೆ. ಎಲ್ಲ ಕಡೆ ಮತಗಳ್ಳತನ ಆಗುತ್ತಿದೆ ಎಂದರೆ ಸರಕಾರದ ಎಲ್ಲ ಅಧಿಕಾರಿಗಳು ಡಕಾಯಿತರು ಎನ್ನಬೇಕಾಗುತ್ತದೆ,'' ಎಂದು ಹೇಳಿದರು.

ಗಾಂಧಿನಗರ ಮರು ಎಣಿಕೆ ಅರ್ಜಿ ಸಲ್ಲಿಕೆಗೆ ಅವಕಾಶವಿಲ್ಲ: ಸಪ್ತಗಿರಿ

ಬೆಂಗಳೂರು: ಕಳೆದ ವಿಧಾನಸಭೆ ಚುನಾವಣೆಯಲ್ಲಿ ಗಾಂಧಿನಗರ ಕ್ಷೇತ್ರದಲ್ಲಿ ಅಸಿಂಧುವಾದ ಮತಗಳ ಪ್ರಮಾಣ ಕೇವಲ 71 ಇದ್ದು, ನನ್ನ ಸೋಲಿನ ಅಂತರ 105 ಮತಗಳಾಗಿರುವುದರಿಂದ ಕಾನೂನಿನ ಪ್ರಕಾರ ಮರು ಎಣಿಕೆ ಅರ್ಜಿ ಸಲ್ಲಿಕೆಗೆ ಅವಕಾಶವಿಲ್ಲ ಎಂದು ಪರಾಜಿತ ಬಿಜೆಪಿ ಅಭ್ಯರ್ಥಿ ಸಪ್ತಗಿರಿ ಗೌಡ ಸ್ಪಷ್ಟಪಡಿಸಿದ್ದಾರೆ.

ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆ ಬಳಿಕ ಬಿಜೆಪಿಯ ಡಿ.ಎನ್.ಜೀವರಾಜ್ ಜಯ ಗಳಿಸಿರುವ ಹಿನ್ನೆಲೆಯಲ್ಲಿ ಗಾಂಧಿನಗರದ ಕ್ಷೇತ್ರದಲ್ಲೂ ಮರು ಎಣಿಕೆಗೆ ಕೋರುವಂತೆ ಕೆಲವರು ಮನವಿ ಮಾಡಿರುವ ಬಗ್ಗೆ ಅವರು ಎಕ್ಸ್‌ನಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಲಿಂಗಾಯತ ಬಾಹುಳ್ಯ ಬಾಗಲಕೋಟೆಯಲ್ಲಿ ಸೋಲು: ಬಿಜೆಪಿಯಲ್ಲಿ ಅಸಮಾಧಾನ

ಬೆಂಗಳೂರು: ಲಿಂಗಾಯತ ಬಾಹುಳ್ಯದ ಬಾಗಲಕೋಟೆ ಯಲ್ಲಿ ದೊಡ್ಡ ಸೋಲಾಗಿದ್ದಕ್ಕೆ ಬಿಜೆಪಿಯೊಳಗೇ ಅಸಮಾಧಾನ ಎದ್ದಿದೆ. ಕಾಂಗ್ರೆಸ್ ವ್ಯವಸ್ಥಿತ ರಣತಂತ್ರ ರೂಪಿಸಿತ್ತು. ಅದಕ್ಕೆ ಪ್ರತಿಯಾಗಿ ಪೈಪೋಟಿ ನೀಡುವ ಪೂರ್ಣ ಪ್ರಯತ್ನ ಮಾಡಲಿಲ್ಲ, ಇನ್ನಷ್ಟು ಶ್ರಮ ವಹಿಸಿದ್ದರೆ ಸೋಲಿನ ಅಂತರ ತಗ್ಗಿಸಬಹುದಿತ್ತು. ಇದು ಮುಂದಿನ ಚುನಾವಣೆಗೆ ತಯಾರಿ ಮಾಡಿಕೊಳ್ಳಲು ಅನುಕೂಲವಾಗುತ್ತಿತ್ತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಫೈರ್ ಬ್ರ್ಯಾಂಡ್‌ಗಳ ಎಡವಟ್ಟು: ''ಬಿಜೆಪಿಯಿಂದ ಉಚ್ಚಾಟಿತಗೊಂಡಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಹಿಂದುತ್ವದ ಫೈರ್ ಬ್ರ್ಯಾಂಡ್‌ಗಳು ಬಾಯಿಗೆ ಬಂದಂತೆ ಮಾತನಾಡಿ ಎಡವಟ್ಟು ಮಾಡಿದ್ದಾರೆ. ಕೋಮು ಧ್ರುವೀಕರಣ ಮಾಡುವ ಉತ್ಸಾಹದಲ್ಲಿ ಮುಖ್ಯಮಂತ್ರಿ ಬಗ್ಗೆಯೇ ವೈಯಕ್ತಿಕ ನಿಂದನೆ ಮಾಡಲಾಗಿದೆ. ಜತೆಗೆ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಿಗೆ, ''ಮುಖ ಗಂಟಿಕ್ಕಿಕೊಂಡು ಇರಬಾರದು. ಎಲ್ಲರೊಂದಿಗೆ ಬೆರೆಯಬೇಕು,'' ಎಂಬ ಅರ್ಥದಲ್ಲಿ ಯತ್ನಾಳ್ ಹೇಳಿದ್ದರಿಂದಲೂ ಸಮಸ್ಯೆಯಾಯಿತು. ಇವೆಲ್ಲವೂ ಪರಿಣಾಮ ಬೀರಿವೆ ಎಂಬ ಅತೃಪ್ತಿ ಬಿಜೆಪಿ ಆಂತರಿಕ ವಲಯದಲ್ಲಿ ಕೇಳಿ ಬರುತ್ತಿದೆ.

'ಸೋತ ಕಡೆ ಕಾಂಗ್ರೆಸ್‌ಗೆ ಇವಿಎಂ ಸರಿ ಇರುವುದಿಲ್ಲ'

ಬೆಂಗಳೂರು: ಎಲ್ಲಿ ಕಾಂಗ್ರೆಸ್ ಸೋಲುತ್ತದೆಯೋ ಅಲ್ಲಿ ಇವಿಎಂ ಸರಿಯಿರುವುದಿಲ್ಲ, ಕಾಂಗ್ರೆಸ್ ಪಕ್ಷ ಗೆದ್ದರೆ ಇವಿಎಂ ಸರಿಯಿರುತ್ತದೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ವ್ಯಂಗ್ಯವಾಡಿದ್ದಾರೆ. ''ಇವಿಎಂ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯರವರು ತಕರಾರು ತೆಗೆದಿದ್ದಾರೆ. ಕೇರಳದಲ್ಲಿ ಇವಿಎಂ ಮೂಲಕ ಕಾಂಗ್ರೆಸ್ ಪಕ್ಷ ಜಯ ಗಳಿಸಿದ್ದು, ಆ ಬಗ್ಗೆ ಉತ್ತರಿಸಬೇಕು,'' ಎಂದು ಆಗ್ರಹಿಸಿದರು.

ಮಹಿಳಾ ಮೀಸಲು ವಿರೋಧಿ ಪಕ್ಷಗಳು ನೆಲಕಚ್ಚಿವೆ: ಸೋಮಣ್ಣ

■ **ವಿಕ ಸುದ್ದಿಲೋಕ** ಬೆಂಗಳೂರು

ಲೋಕಸಭೆಯಲ್ಲಿ ಕೇಂದ್ರ ಸರಕಾರ ಮಂಡಿಸಿದ್ದ ಮಹಿಳಾ ಮೀಸಲು ವಿಧೇಯಕ ಬೆಂಬಲಿಸದ ಪ್ರತಿಪಕ್ಷಗಳು ಚುನಾವಣೆಯಲ್ಲಿ ನೆಲಕಚ್ಚಿವೆ ಎಂದು ರೈಲ್ವೆ ಖಾತೆ ಸಹಾಯಕ ಸಚಿವ ವಿ. ಸೋಮಣ್ಣ ತಿಳಿಸಿದರು.



''ಪಂಚರಾಜ್ಯಗಳ ಚುನಾವಣೆ ಪೈಕಿ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ದಾಖಲಿಸಿದೆ. ಪಶ್ಚಿಮ ಬಂಗಾಳ ಕಮಲ ಅರಳಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಪಟ್ಟ ಶ್ರಮ ಫಲ ನೀಡಿದೆ. ದೇಶದ ಹೆಣ್ಣು ಮಕ್ಕಳಿಗೆ ಅಧಿಕಾರ ನೀಡುವಲ್ಲಿ ಅಡ್ಡಗಾಲು ಹಾಕಿದ ವಿರೋಧ ಪಕ್ಷಗಳು ಛಿದ್ರವಾಗಿವೆ. ಅತ್ಯಧಿಕ ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಜನಸಂಘ ಕಟ್ಟಿದ ಶ್ಯಾಮಾ ಪ್ರಸಾದ್ ಅವರ ಕನಸು ನನಸಾಗಿದೆ,'' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಸಂತಸ ಹಂಚಿಕೊಂಡರು.

''ಡಿಎಂಕೆ, ಟಿಎಂಸಿ ಸೇರಿದಂತೆ ಇತರೆ ಎಡ ಪಕ್ಷಗಳು ಕಾಂಗ್ರೆಸ್ ಜತೆ ಸೇರಿ ನಾರಿಶಕ್ತಿ ವಿಧೇಯಕ ವಿರೋಧಿಸಿದ್ದರಿಂದ ಚುನಾವಣೆಯಲ್ಲಿ ಜನ ಆ ಪಕ್ಷಗಳಿಗೆ ತಕ್ಕ ಪಾಠ ಕಲಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಕೇಂದ್ರ ಸರಕಾರದ ಯೋಜನೆಗಳು ಅನುಷ್ಠಾನಗೊಳ್ಳದಂತೆ ತಡೆದ ಮಮತಾ ದುರಾಡಳಿತ ಅಂತ್ಯವಾಗಿದೆ. ಬಂಗಾಳದಲ್ಲಿ ವಿಕಸಿತ ಭಾರತದ ಪರಿಕಲ್ಪನೆ ಮಂಗಳವಾರದಿಂದಲೇ ಜಾರಿಯಾಗಿದೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹಣ, ಅಧಿಕಾರದ ಬಲ : ''ಕರ್ನಾಟಕದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಸರಕಾರದ ಹಣ ಮತ್ತು ಅಧಿಕಾರದ ಬಲ ಕೆಲಸ ಮಾಡಿದೆ. ನಮ್ಮಿಂದ ಸಂಘಟಿತ ಪ್ರಯತ್ನವಾಗದ ಕಾರಣ ಉಪಚುನಾವಣೆಯಲ್ಲಿ ಸೋಲಾಗಿದೆ. ಸರಕಾರದ ವೈಫಲ್ಯಗಳನ್ನು ಜನರ ಮುಂದಿಡುವಲ್ಲಿ ನಾವೆಲ್ಲ ಸೋತಿದ್ದೇವೆ,''ಎಂದರು.

Published for the Proprietors, Metropolitan Media Company Limited, by Lokesh K V at No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No.9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol.27 Issue No.125

ನೀರಿನ ಸಮಸ್ಯೆ ನಿವಾರಣೆಗೆ ಸರಕಾರ ತುರ್ತು ಕ್ರಮ | ಕೆಲವೆಡೆ ಟ್ಯಾಂಕರ್ ಮೂಲಕ ಪೂರೈಕೆ

ಕುಡಿವ ನೀರಿಗಾಗಿ ₹72 ಕೋಟಿ

■ **ವಿಕ ಸುದ್ದಿಲೋಕ** ಬೆಂಗಳೂರು

ಬೇಸಿಗೆಯಲ್ಲಿ ರಾಜ್ಯದ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಎದುರಾಗಿರುವ ಕುಡಿಯುವ ನೀರಿನ ಕೊರತೆ ನಿವಾರಣೆಗೆ ಸರಕಾರವು ಸಮರೋಪಾದಿಯಲ್ಲಿ ಪರಿಹಾರ ಕ್ರಮ ಕೈಗೊಂಡಿದ್ದು, ಮಾರ್ಚ್‌ನಿಂದ ಈವರೆಗೆ ಒಟ್ಟು 208.67 ಕೋಟಿ ರೂ. ಬಿಡುಗಡೆ ಮಾಡಿದೆ. ತುರ್ತು ಕಾಮಗಾರಿಗೆಂದು ಮಂಗಳವಾರವೂ 72 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

''ಈ ಅನುದಾನವನ್ನು ಪ್ರಸಕ್ತ ಸಾಲಿನ ಹೊಸ ಕಾಮಗಾರಿಗಳ ಜತೆಗೆ, ಈ ಹಿಂದೆ ಟಾಸ್ಕ್‌ಫೋರ್ಸ್ ಸಮಿತಿಯಿಂದ ಅನುಮೋದನೆ ಪಡೆದು ಪೂರ್ಣಗೊಂಡಿದ್ದ ಕಾಮಗಾರಿಗಳ ಬಾಕಿ ಪಾವತಿಗಾಗಿ ವಿನಿಯೋಗಿಸಲಾಗುವುದು,'' ಎಂದು ತಿಳಿಸಿದ್ದಾರೆ

''ಬೇಸಿಗೆಯ ತೀವ್ರತೆಯಿಂದ ಅಂತರ್ಜಲ ಮಟ್ಟ ಕುಸಿದು ಕೊಳವೆಬಾವಿಗಳಲ್ಲಿ ನೀರಿನ ಪ್ರಮಾಣ ತಗ್ಗಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತಗಳು ಲಭ್ಯವಿರುವ ಕೊಳವೆಬಾವಿಗಳ ಫ್ಲಶಿಂಗ್ ಮತ್ತು ಆಳಗೊಳಿಸಲು ಕ್ರಮ ವಹಿಸಬೇಕು. ನೀರಿನ ಮೂಲಗಳಿಲ್ಲದ ಕಡೆಗಳಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಲು ಅಥವಾ ಟ್ಯಾಂಕರ್ ನೀರು ಪೂರೈಕೆಗೆ ಅನುಮತಿ ನೀಡಲಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಭೂವಿಜ್ಞಾನಿಗಳ ವರದಿ ಆಧರಿಸಿ ಹೊಸ ಕೊಳವೆಬಾವಿ ಕೊರೆಯಲು ಮತ್ತು ಪಂಪಿಂಗ್ ಯಂತ್ರಗಳನ್ನು ಅಳವಡಿಸಲು ಸೂಚಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

''ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಕೊರತೆಯಾಗದಂತೆ ಸಮರ್ಪಕ ನೀರು ಪೂರೈಕೆಗೆ ನಿರಂತರವಾಗಿ ಜಿಲ್ಲಾಮಟ್ಟದ ಅಧಿಕಾರಿಗಳು ಟಾಸ್ಕ್‌ಫೋರ್ಸ್ ಸಭೆಗಳನ್ನು ನಡೆಸುತ್ತಿದ್ದಾರೆ. ಸರಕಾರದ ಮಟ್ಟದಲ್ಲಿ ನಿಯಮಿತವಾಗಿ ಪರಿಸ್ಥಿತಿಯನ್ನು ಅವಲೋಕಿಸಲಾಗುತ್ತಿದೆ. ಈ ಎಲ್ಲಾ ಕಾಮಗಾರಿಗಳನ್ನು ಕೈಗೊಳ್ಳುವಾಗ ಕೆಟಿಪಿಪಿ ಮತ್ತು ಆರ್ಥಿಕ ಸಂಹಿತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕಾಮಗಾರಿಗಳ ಭೌತಿಕ ಪ್ರಗತಿಯನ್ನು ಆಧರಿಸಿಯಷ್ಟೇ ಬಿಲ್‌ಗಳನ್ನು ಪಾವತಿಸಲು ಮತ್ತು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯಿಂದ ಕಡ್ಡಾಯವಾಗಿ ಅನುಮೋದನೆ ಪಡೆಯಲು ಅಧಿಕಾರಿಗಳಿಗೆ ಸೂಚಿಸಲಾಗಿದೆ,'' ಎಂದು ಹೇಳಿದ್ದಾರೆ.

ಈ ಬೃಹತ್ ಮೊತ್ತದ ಅನುದಾನ ಬಿಡುಗಡೆಯಿಂದಾಗಿ ರಾಜ್ಯದ 31 ಜಿಲ್ಲೆಗಳ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ತಕ್ಷಣದ ಪರಿಹಾರ ಸಿಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

₹34 ಕೋಟಿ ಮೌಲ್ಯದ ಹೈಡ್ರೊ ಗಾಂಜಾ ವಶ

■ **ವಿಕ ಸುದ್ದಿಲೋಕ** ಬೆಂಗಳೂರು ಗ್ರಾಮಾಂತರ

ದೇವನಹಳ್ಳಿಯಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮೇ ತಿಂಗಳ ಮೊದಲ 5 ದಿನಗಳಲ್ಲಿ ಕಸ್ಟಮ್ಸ್ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಹೈಡ್ರೊ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ.

ಮೇ. 1 ರಿಂದ 5 ರವರೆಗೆ ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ವಿವಿಧ ಪ್ರಕರಣಗಳಲ್ಲಿ ಒಟ್ಟು 34.72 ಕೋಟಿ ರೂ. ಮೌಲ್ಯದ ಹೈಡ್ರೊ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಮೇ 1ರಂದು ಮೊದಲ ಪ್ರಕರಣದಲ್ಲಿ ಒಬ್ಬ ಪ್ರಯಾಣಿಕನ ಬಳಿಯಿಂದ 3.15 ಕೋಟಿ ರೂ. ಮೌಲ್ಯದ ಸುಮಾರು 9 ಕೆ.ಜಿ ಹೈಡ್ರೊ ಗಾಂಜಾ ಹಾಗೂ ಎರಡನೇ ಪ್ರಕರಣದಲ್ಲಿ 18.43 ಕೋಟಿ ರೂ. ಮೌಲ್ಯದ 52.68 ಕೆ.ಜಿ, ಮೇ.4ರ ಮೊದಲ ಪ್ರಕರಣದಲ್ಲಿ 2.72 ಕೋಟಿ ರೂ. ಮೌಲ್ಯದ 7.86 ಕೆ.ಜಿ, ಮತ್ತೊಂದು ಪ್ರಕರಣದಲ್ಲಿ 9.31 ಕೋಟಿ ಮೌಲ್ಯದ 26.62 ಕೆ.ಜಿ, ಇನ್ನೊಂದು ಪ್ರಕರಣದಲ್ಲಿ 1.11 ಕೋಟಿ ಮೌಲ್ಯದ 3.18 ಕೆ.ಜಿಯಷ್ಟು ಹೈಡ್ರೊ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸ್ವಕ್ಷೇತ್ರದಲ್ಲಿ ಮತ್ತೆ ಡಿಕೆಶಿ ಸಕ್ರಿಯ

■ **ವಿಕ ಸುದ್ದಿಲೋಕ** ರಾಮನಗರ (ಬೆಂಗಳೂರು ದಕ್ಷಿಣ ಜಿಲ್ಲೆ)

ರಾಜ್ಯ ರಾಜಕಾರಣದಲ್ಲಿ ಅವಿರತವಾಗಿ ತೊಡಗಿಸಿಕೊಂಡಿದ್ದ ಉಪಮುಖ್ಯಮಂತ್ರಿ ಹಾಗೂ ಕನಕಪುರ ಶಾಸಕ ಡಿ.ಕೆ. ಶಿವಕುಮಾರ್ ಈಗ ತಮ್ಮ ಸ್ವಕ್ಷೇತ್ರದಲ್ಲಿ ಮತ್ತೆ ಸಕ್ರಿಯರಾಗಿದ್ದು, ಕೇವಲ ಎಂಟು ದಿನಗಳ ಅಂತರದಲ್ಲಿ ಎರಡು ಬಾರಿ ಕನಕಪುರಕ್ಕೆ ಭೇಟಿ ನೀಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಕನಕೋತ್ಸವದ ಬಳಿಕ ಕ್ಷೇತ್ರದಲ್ಲಿ ಹೆಚ್ಚು ಕಾಣಿಸಿಕೊಳ್ಳದಿದ್ದ ಡಿಕೆಶಿ, ಇತ್ತೀಚೆಗೆ ನಡೆದ ಕೆಡಿಪಿ ಸಭೆಗಳ ಮೂಲಕ ಮತ್ತೆ ಕ್ಷೇತ್ರ ರಾಜಕಾರಣದತ್ತ ಗಮನ ಹರಿಸಿದ್ದಾರೆ. ಏ.29ರಂದು ನಡೆದ ತಾಲೂಕು ಮಟ್ಟದ ಕೆಡಿಪಿ ಸಭೆಯಲ್ಲಿ ಭಾಗವಹಿಸಿದ್ದರು. ಆ ಸಭೆ ಅಪೂರ್ಣಗೊಂಡ ಹಿನ್ನೆಲೆಯಲ್ಲಿ ಮೇ 4ರಂದು ಮತ್ತೆ ಮುಂದುವರಿದ ಸಭೆ ಎಂದು ಅಧಿಕಾರಿಗಳ ಜತೆ ಚರ್ಚೆ ನಡೆಸಿದರು.

ಕನಕಪುರ ತಾಲೂಕು ಮಟ್ಟದ ಕೆಡಿಪಿ ಸಭೆಯಲ್ಲಿ ಭಾಗವಹಿಸಿದ್ದ ಡಿ.ಕೆ.ಶಿವಕುಮಾರ್ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ರಾಜ್ಯ ಹಾಗೂ ರಾಷ್ಟ್ರ ರಾಜಕಾರಣ, ಉಪಚುನಾವಣೆ ಜವಾಬ್ದಾರಿಗಳ ನಡುವೆ ಕ್ಷೇತ್ರಕ್ಕೆ ಕಡಿಮೆ ಭೇಟಿ ನೀಡಿದ್ದ ಡಿಕೆಶಿ ಬಗ್ಗೆ ಕಾರ್ಯಕರ್ತರಲ್ಲಿ ಮೂಡಿಸಿದ್ದ ಬೇಸರವನ್ನು ಈ ಭೇಟಿಗಳು ನಿವಾರಿಸಿವೆ. ವಾರದಲ್ಲಿ 2 ಬಾರಿ ಕ್ಷೇತ್ರಕ್ಕೆ ಆಗಮಿಸಿರುವುದು ಕಾರ್ಯಕರ್ತರಲ್ಲಿ ಹೊಸ ಉತ್ಸಾಹವನ್ನು ಹುಟ್ಟಿಸಿದೆ.

ಕನಕಪುರ ನಗರಕ್ಕೆ ರಿಂಗ್‌ರೋಡ್ ಭಾಗ್ಯ: ಕನಕಪುರ ನಗರದ ಭವಿಷ್ಯದ ಅಭಿವೃದ್ಧಿಗಾಗಿ ಹೊರವರ್ತುಲ ರಸ್ತೆ (ರಿಂಗ್ ರೋಡ್) ನಿರ್ಮಾಣದ ಯೋಜನೆಗೆ ಚಾಲನೆ ನೀಡುವ ಸಿದ್ಧತೆಗಳು ನಡೆಯುತ್ತಿದ್ದು, ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಘೋಷಿಸಿದರು.

ಪ್ರವಾಸಿ ವೀಸಾ ಬಳಸಿ ಬಿಸಿನೆಸ್ ಬೇಡ

ಫ್ರಾನ್ಸ್ ಪ್ರಜೆಗೆ ದೇಶ ಬಿಟ್ಟು ತೆರಳಲು ನೋಟಿಸ್ ನೀಡಿದ ಕ್ರಮ ಎತ್ತಿಹಿಡಿದ ಹೈಕೋರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು

ವಿದೇಶಿ ಪ್ರಜೆಗಳು ತಮ್ಮ ಪ್ರವಾಸಿ ವೀಸಾವನ್ನು ವಾಣಿಜ್ಯ ಚಟುವಟಿಕೆಗಳಿಗೆ ಪ್ರವೇಶಿಸುವ ವೇದಿಕೆಯನ್ನಾಗಿ ಅಥವಾ ಸಾಮಾಜಿಕ ಸುವ್ಯವಸ್ಥೆಗೆ ಹಾನಿ ಮಾಡುವಂತಹ ನಡವಳಿಕೆಯಲ್ಲಿ ತೊಡಗುವುದಕ್ಕೆ ಬಳಸಿಕೊಳ್ಳುವಂತಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಲ್ಲದೆ, ಫ್ರಾನ್ಸ್ ಪ್ರಜೆಯೊಬ್ಬರಿಗೆ ದೇಶ ಬಿಟ್ಟು ತೆರಳುವಂತೆ ಜಾರಿಗೊಳಿಸಿದ್ದ ನೋಟಿಸ್ ಕ್ರಮವನ್ನು ನ್ಯಾಯಾಲಯ ಎತ್ತಿಹಿಡಿದಿದೆ. ಫ್ರಾನ್ಸ್ ಪ್ರಜೆ ಕ್ರಿಸ್ಟೋಫ್ ಸ್ಟೀಫನ್ ಮಾನ್ನಿಯನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ಮಾಡಿದೆ.

ದೇಶ ಬಿಟ್ಟು ತೆರಳುವಂತೆ ಎಫ್‌ಆರ್‌ಆರ್‌ಒ 2026ರ ಮಾ.16ರಂದು ಜಾರಿಗೊಳಿಸಿದ್ದ ನೋಟಿಸ್‌ನ ಕ್ರಮ ಎತ್ತಿಹಿಡಿದಿರುವ ನ್ಯಾಯಾಲಯ, ಅರ್ಜಿ ವಜಾಗೊಳಿಸಿದೆ. ತಕ್ಷಣ ಭಾರತ ಬಿಟ್ಟು ತೆರಳುವಂತೆ ಕ್ರಿಸ್ಟೋಫ್ ಸ್ಟೀಫನ್ ಮಾನ್ನಿಯನ್‌ಗೆ ನಿರ್ದೇಶನ ನೀಡಿದೆ.

ಕ್ರಿಸ್ಟೋಫ್ ಪ್ರವಾಸಿ ವೀಸಾದಡಿ ಭಾರತಕ್ಕೆ ಬಂದು ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಉತ್ತರ ಕನ್ನಡ ಜಿಲ್ಲೆಯ ಹಿತ್ತಲಮಕ್ಕಿಯಲ್ಲಿ 'ಹೋಟೆಲ್ ಗ್ರೀನ್ (ಒಎಂ ಹೋಟೆಲ್) ಇಂಟರ್ ನ್ಯಾಷನಲ್ ಗೋಕರ್ಣ' ಹೆಸರಲ್ಲಿ ರೆಸ್ಟೋರೆಂಟ್ ನಡೆಸುತ್ತಿದ್ದ. ಆತನ ಬಳಿ 2032ರ ಅ.17ಕ್ಕೆ ಅವಧಿ ಮುಕ್ತಾಯವಾಗಲಿರುವ ಪಾಸ್ ಪೋರ್ಟ್ ಇದ್ದು, 2025ರ ನ.25ರಿಂದ 2026ರ ನ.24ರವರೆಗಿನ ಪ್ರವಾಸಿ ವೀಸಾ ಇತ್ತು. ಆದರೆ, ಪ್ರವಾಸಿ ವೀಸಾದಡಿ ಬಂದು ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ದೇಶ ಬಿಟ್ಟು ತೆರಳುವಂತೆ ನೋಟಿಸ್ ಜಾರಿಗೊಳಿಸಿತ್ತು.

ಶೀಘ್ರ ಶೇ.100ರಷ್ಟು ರೈಲು ವಿದ್ಯುದ್ದೀಕರಣ

■ **ವಿಕ ಸುದ್ದಿಲೋಕ** ರಾಮನಗರ (ಬೆಂ.ದಕ್ಷಿಣ)

''ಪ್ರಸ್ತುತ ಶೇ.97ರಷ್ಟು ರೈಲುಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದ್ದು, ಇನ್ನೆರಡು ತಿಂಗಳಲ್ಲಿ ಶೇ. 100 ರಷ್ಟು ರೈಲುಗಳನ್ನು ವಿದ್ಯುದ್ದೀಕರಣಗೊಳಿಸಲಾಗುವುದು,'' ಎಂದು ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಹೇಳಿದರು.

ರಾಮನಗರದ ರೈಲು ನಿಲ್ದಾಣದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಹಸಿರು ನಿಶಾನೆ ತೋರಿಸಿ ಮಾತನಾಡಿದರು. ''ಬೆಂಗಳೂರು-ಮೈಸೂರು ರೈಲು ಮಾರ್ಗದಲ್ಲಿ ಚತುಷ್ಪಥ ಅಭಿವೃದ್ಧಿ ಕಾಮಗಾರಿ ಆರಂಭಿಸಲು ಕ್ರಮ ವಹಿಸಲಾಗುವುದು,'' ಎಂದು ಭರವಸೆ ನೀಡಿದರು.

''ರಾಜ್ಯದ 64 ಮೇಲ್ಸೇತುವೆ, ಕೆಳಸೇತುವೆ ನಿರ್ಮಾಣಕ್ಕೆ 2,900 ಕೋಟಿ ರೂ. ವಿನಿಯೋಗಿಸಲಾಗಿದೆ. ಪ್ರತೀ ವರ್ಷ ಕೇಂದ್ರದ ಆಯವ್ಯಯದಲ್ಲಿ ಕರ್ನಾಟಕ ರಾಜ್ಯದ ರೈಲ್ವೆ ಅಭಿವೃದ್ಧಿ ಕಾಮಗಾರಿಗಳಿಗೆ 700ಕ್ಕೂ ಹೆಚ್ಚು ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಸದ್ಯ ರಾಜ್ಯದಲ್ಲಿ 13 ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ. ಬೆಂಗಳೂರು-

ಮಂಗಳೂರು ವಂದೇ ಭಾರತ್ ರೈಲನ್ನು ಶೀಘ್ರದಲ್ಲೇ ಆರಂಭಿಸಲಾಗುವುದು,'' ಎಂದರು.

''ಕೋವಿಡ್ ಸಂದರ್ಭದಲ್ಲಿ ನಿಲ್ಲಿಸಲಾಗಿದ್ದ ರಾಜ್ಯದ 37 ಮಾರ್ಗಗಳ ರೈಲುಗಳನ್ನು ರಾಜ್ಯದ ಸಂಸದರ ಮನವಿಯಂತೆ ಮತ್ತೆ ಆರಂಭಿಸಲಾಗಿದೆ. 7 ಹೊಸ ರೈಲು ಕಾರಿಡಾರ್‌ಗಳಿಗೆ ಅನುಮೋದನೆ ನೀಡಲಾಗಿದ್ದು, ಅದರಂತೆ ಬೆಂಗಳೂರು-ಚೆನ್ನೈ, ಬೆಂಗಳೂರು-ಪುಣೆ ಹೈಸ್ಪೀಡ್ ರೈಲು ಕಾರಿಡಾರ್‌ಗಳಿಗೆ ಚಾಲನೆ ನೀಡಲಾಗುವುದು,'' ಎಂದರು.

ಹಲವು ಜಿಲ್ಲೆಗಳಿಗೆ ಮಳೆ ಅಲರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಮುಂದಿನ 5 ದಿನಗಳ ಕಾಲ ಹವಾಮಾನ ಇಲಾಖೆ ಮಳೆಯ ಮುನ್ಸೂಚನೆ ನೀಡಿದೆ. ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಿಗೆ ಮೇ 6 ಮತ್ತು 7ರಂದು ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆಯಾಗಲಿದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ.

ದಕ್ಷಿಣ ಒಳನಾಡು ಮತ್ತು ಕಲ್ಯಾಣ ಕರ್ನಾಟಕದ ಕೆಲ ಭಾಗಗಳಲ್ಲಿ ಮಳೆಯಾಗಲಿದೆ. ಉತ್ತರ ಒಳನಾಡು, ಮಲೆನಾಡು ಮತ್ತು ಕರಾವಳಿಯ ಉಳಿದ ಜಿಲ್ಲೆಗಳಲ್ಲಿ ಹವಾಮಾನ ಸಾಮಾನ್ಯವಾಗಿರಲಿದೆ. ಯಾದಗಿರಿ, ರಾಯಚೂರು, ಬಳ್ಳಾರಿ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗುಡುಗು, ಗಾಳಿ ಸಹಿತ ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆ ಇದೆ.

ಮೇ 6ರಂದು ದಕ್ಷಿಣ ಒಳನಾಡಿನ ಜತೆಗೆ, ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಿಗೂ ಅಲರ್ಟ್ ನೀಡಲಾಗಿದೆ. ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡಕ್ಕೆ ಯೆಲ್ಲೊ ಅಲರ್ಟ್ ನೀಡಲಾಗಿದೆ.

ಕೊಚ್ಚಿ ವಿಜ್ಞಾನಿಗಳಿಂದ ಕಾವೇರಿ ನದಿಯಲ್ಲಿ ಸಿಹಿ ನೀರಿನ ಮೀನು ಪ್ರಭೇದ ಪತ್ತೆ

ಶಿವನಸಮುದ್ರದಲ್ಲಿ ಅಪರೂಪದ ಕಾಗೆ ಮೀನು

■ **ಅಕ್ರಂ ಪಾಷ** ತಲಕಾಡು (ಮೈಸೂರು)
akrampasha2288@gmail.com

ಶಿವನಸಮುದ್ರ ಪ್ರದೇಶದ ಕಾವೇರಿ ನದಿಯಲ್ಲಿ 'ಕಾಗೆ ಮೀನು' (labero kaage) ಎಂದು ಕರೆಯಲಾಗುವ ಸಿಹಿ ನೀರಲ್ಲಿ ವಾಸಿಸುವ ಮೀನಿನ ಪ್ರಭೇದವನ್ನು ಕೊಚ್ಚಿಯ ವಿಜ್ಞಾನಿಗಳ ತಂಡ ಪತ್ತೆ ಹಚ್ಚಿದೆ.

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ ವಾರ್ಷಿಕ ನಿರ್ವಹಣೆ ಮಾಡುವ ಅಂದರೆ ರಸ್ತೆ, ಒಳಚರಂಡಿ, ವಿಭಾಗಜಕ, ಹಾಗೂ ಇತರೆ ಅಭಿವೃದ್ಧಿ ಮಾಡುವ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಮರು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ (https://www.kppp.karnataka.gov.in) ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ: 11-05-2026 5.00 ಗಂಟೆವರೆಗೆ. 2) ಟೆಂಡರಿನ ಮೊದಲನೆ ಸಭೆಯ (Pre-bid meeting) ದಿನಾಂಕ: 12-05-2026 11.00 ಗಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 14-05-2026 ಅಪರಾಹ್ನ 4.00 ಗಂಟೆವರೆಗೆ. 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 16-05-2026 11.00 ಗಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 18-05-2026 11.00 ಗಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.

ಸಹಿ/- ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/193/ಮಣಿಪಾಲ್/2026-27

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಕುಮಾರಿ. ಪ್ರಣತೀ ಸುಹಾನಿಸಿ, ಆರ್. ನಾಗರತ್ನ ಮತ್ತು ಕುಮಾರಿ. ಅಮೃತಾ ಎಸ್.ಎಂ.ವಿ.ಸಿ. ಹನುಮಂತಯ್ಯ ರವರಿಂದ ಅಧಿಕಾರ ಪಡೆದಿರುವ ಶ್ರೀ. ಎಂ.ವಿ.ಸಿ. ಹನುಮಂತಯ್ಯ ರವರ ಇರಾದೆಯ ಮೇರೆಗೆ ಈ ಕೆಳಗೆ ಷೆಡ್ಯೂಲ್ ನಲ್ಲಿ ವಿವರವಾಗಿ ವಿವರಿಸಿರುವ ಬೆಂಗಳೂರು ನಗರ ಜಿಲ್ಲೆ, ಯಶವಂತಪುರ ಹೋಬಳಿ, ಯಶವಂತಪುರ ಗ್ರಾಮದ ಸರ್ವೆ ನಂ. 90/1, 90/2, 90/3, 91, 93, 94/1, 94/3 95 ರಲ್ಲಿ ವಿಂಗಡಿಸಿ ನಿರ್ಮಿಸಿರುವ ದ ಪ್ರೆಸಿಡೆನ್ಸಿಯಲ್ ಟವರ್ ಅಪಾರ್ಟ್‌ಮೆಂಟ್ 4 ನೇ ಮಹಡಿ ಬ್ಲಾಕ್‌ನಲ್ಲಿರುವ ನಂ. ಪಿಬಿ-401 ಬಿ ಮತ್ತು ಎ ಬ್ಲಾಕ್‌ನಲ್ಲಿರುವ ಪಿ.ಎ.401 ರಲ್ಲಿರುವ ಫ್ಲಾಟ್‌ಗಳನ್ನು ಖರೀದಿಸಲು ಮೇ॥ ಬೆಸ್ಟ್ ಗೋಲ್ಡನ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ರವರಿಂದ ದಿನಾಂಕ: 14/11/2018 ಮತ್ತು ದಿನಾಂಕ: 25/11/2018 ರಂದು ನೋಂದಾಯಿತ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಮಾರಾಟಗಾರರು ಶುದ್ಧ ಕ್ರಯ ಪತ್ರವನ್ನು ನೋಂದಣಿ ಮಾಡಿಕೊಡಲು ವಿಳಂಬ ಮಾಡುತ್ತಿದ್ದು, ಸದರಿ ವ್ಯವಹಾರದ ಬಗ್ಗೆ ಲಿಖಿತ ಮೂಲಕ ಶುದ್ಧ ಕ್ರಯ ಪತ್ರವನ್ನು ನೋಂದಣಿ ಮಾಡಿಕೊಡಲು ಒತ್ತಾಯ ಮಾಡುತ್ತಿದ್ದರೂ ಸಹ ಯಾವುದೇ ಉತ್ತರವನ್ನು ನೀಡದೇ ವಾಸ್ತವ ಸಂಗತಿಯನ್ನು ಮರೆಮಾಚಿ ಷೆಡ್ಯೂಲ್‌ನಲ್ಲಿರುವ ಫ್ಲಾಟ್‌ಗಳನ್ನು ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡಲು ಪ್ರಯತ್ನ ಮಾಡುತ್ತಿರುವುದು ತಿಳಿದುಬಂದಿರುತ್ತದೆ. ಆದ್ದುದರಿಂದ, ಸಾರ್ವಜನಿಕರು ಈ ಕೆಳಗಿನ ಸ್ವತ್ತು/ಫ್ಲಾಟ್‌ಗಳನ್ನು ಮೇ॥ ಬೆಸ್ಟ್ ಗೋಲ್ಡನ್ ಡೆವಲಪರ್ ಪ್ರೈವೇಟ್ ಲಿಮಿಟೆಡ್ ರವರಿಂದ ಖರೀದಿಸಲು ವ್ಯವಹರಿಸಿ ಮುಂದುವರಿಯಬಾರದೆಂದೂ, ಮುಂದುವರಿದಲ್ಲಿ, ಅಥವಾ ಖರೀದಿಸಿದಲ್ಲಿ ಸದರಿ ವ್ಯವಹಾರವು ನನ್ನ ಕಕ್ಷಿದಾರರಿಗೆ ಬಾಧಕವಾಗುವುದಿಲ್ಲವೆಂದೂ ಷೆಡ್ಯೂಲ್ ಫ್ಲಾಟ್‌ಗಳಿಗೆ ಸಂಬಂಧಿಸಿದಂತೆ ಅವರೊಡನೆ ವ್ಯವಹರಿಸಿದಲ್ಲಿ ಆ ವ್ಯವಹರಕ್ಕೆ ಅವರೇ ಹೊಣೆಗಾರರು ಮತ್ತು ಕಾರಣಕರ್ತರು ಹಾಗೂ ಜವಾಬ್ದಾರರಾಗಿರುತ್ತಾರೆಂದೂ, ಸದರಿ ವ್ಯವಹಾರವು ಕಾನೂನು ಬಾಹಿರವಾಗಿರುತ್ತದೆಂದೂ ಈ ಮೂಲಕ ತಿಳಿಯಪಡಿಸುತ್ತೇನೆ.

ಷೆಡ್ಯೂಲ್ ವಿವರ
ಬೆಂಗಳೂರು ನಗರ ಜಿಲ್ಲೆ, ಯಶವಂತಪುರ ಹೋಬಳಿ, ಯಶವಂತಪುರ ಗ್ರಾಮದ ಸರ್ವೆ ನಂ. 90/1, 90/2, 90/3, 91, 93, 94/1, 94/3 95 ರ ಪರಿವರ್ತಿತ ಜಮೀನಿನಲ್ಲಿ ವಿಂಗಡಿಸಿ ನಿರ್ಮಿಸಿರುವ ದ ಪ್ರೆಸಿಡೆನ್ಸಿಯಲ್ ಟವರ್ ಅಪಾರ್ಟ್‌ಮೆಂಟ್‌ನ 4 ನೇ ಮಹಡಿ ಎ ಬ್ಲಾಕ್‌ನಲ್ಲಿರುವ ಸುಮಾರು 2335 ಚದುರ ಅಡಿ ಅಳತೆವುಳ್ಳ ನಂ. ಪಿಬಿ- 401 ಮತ್ತು ಬಿ ಬ್ಲಾಕ್‌ನಲ್ಲಿರುವ ಸುಮಾರು 2310 ಚದುರ ಅಡಿ ಅಳತೆವುಳ್ಳ ಪಿ.ಎ.401 ರಲ್ಲಿರುವ 2 ಫ್ಲಾಟ್‌ಗಳು.
ಡಿ. ನರಸೇಗೌಡ, ವಕೀಲರು
12, ರಾಮನುಜ ಪ್ಲಾಜ್, 1ನೇ ಮಹಡಿ, 5ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560 003.
ಮೊ: 9845772739

ಪೊಲೀಸ್ ಇಲಾಖೆ
ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ, ಸಿ.ಐ.ಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು-560 001,
ಸಂಖ್ಯೆ: 02/ಸಂಗ್ರಹ-1/ಅಪ್‌ಗ್ರೇಡೇಷನ್/ಕ್ರಿಪ್ಟೋಕರೆನ್ಸಿ/ಸಿಐಡಿ/2025-26 ದಿನಾಂಕ: 05/05/2026

ಇ-ಖರೀದಿ ನೋಟೀಸ್

ಸಿಐಡಿ ಕಛೇರಿಗೆ ಅವಶ್ಯವಿರುವ ಕೆಳಕಂಡ ಸಾಫ್ಟ್‌ವೇರ್/ಪರಿಕರವನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ (www.kppp.karnataka.gov.in) 2ನೇ ಬಾರಿಗೆ ಕರೆಯಲಾಗಿರುವ 15 ದಿನಗಳ ಅಲ್ಪಾವಧಿ ಇ-ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಲು ಟೆಂಡರ್‌ಗೆ ಅರ್ಜಿಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

Upgradation of Cyber Crime Division, CID, B'lore Scheme-2025-26

Sl. No.	Name of the Item/Component	Qty	Approximate Cost in Rs.	Last date for bid submission
15 days Short term E-Tender (Call-2)				
1	Advanced Tool for Crypto Currency Investigation (01 year License, 3 years Warranty)	01 No.	₹ 3,80,00,000/-	15.05.2026 at 17-00 Hours

ಮೇಲಿನ ಸಾಫ್ಟ್‌ವೇರ್/ಪರಿಕರವನ್ನು ಸರಬರಾಜು ಮಾಡಲು ಇಚ್ಛಿಸುವವರು ಇ-ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಇ-ಖರೀದಿಯ ಬಗ್ಗೆ ತರಬೇತಿಯ ಕಾರ್ಯಕ್ರಮವನ್ನು ಇ-ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸಲಾಗುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ 080-46010000, 080-68948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ-ಖರೀದಿ ಫ್ಲಾಟ್‌ಫಾರಂನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ ಸಂಖ್ಯೆ 080-46010000, 080-68948777 ಗಳಿಗೆ ಸಂಪರ್ಕಿಸತಕ್ಕದ್ದು.
ಪೊಲೀಸ್ ಮಹಾ ನಿರ್ದೇಶಕರು
ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ರವರ ಪರವಾಗಿ
ವಾ.ಸಾ.ಸಂ.ಇ/ವಾಪ್ರ/515/ಆಕಾರ್/2026-27

Bennett & Coleman THE TIMES OF INDIA

ಸಂಪಾದಕೀಯ EDITORIAL

ಗೊಬ್ಬರ ದರ ಏರಿಕೆ ಬರೆ

ರೈತರ ಬೆವರಲ್ಲಿ ಲಾಭ ಹುಡುಕಬೇಡಿ

ನಾಡಿಗೆ ಅನ್ನ ನೀಡಲು ರೈತ ಭೂಮಿ ಹದಮಾಡಿ ಮಳೆರಾಯನ ಕೃಪೆಗೆ ಕಾಯುತ್ತಿರುವಾಗಲೇ, ರಸಗೊಬ್ಬರ ಡೀಲರ್‌ಗಳು 'ಬೆಲೆ ಏರಿಕೆ'ಯ ಬರೆ ಎಳೆಯುತ್ತಿರುವುದು ಅತ್ಯಂತ ದುರದೃಷ್ಟಕರ ಮತ್ತು ಖಂಡನೀಯ. ಮುಂಗಾರು ಮಳೆ ಆರಂಭಕ್ಕೂ ಮುನ್ನವೇ ರಾಜ್ಯದಲ್ಲಿ ರಸಗೊಬ್ಬರಕ್ಕೆ ಬೇಡಿಕೆ ಸೃಷ್ಟಿಯಾಗುವುದನ್ನು ಅರಿತಿರುವ ವ್ಯಾಪಾರಿಗಳು, ಅಂತಾರಾಷ್ಟ್ರೀಯ ಮಾರುಕಟ್ಟೆಯ ಏರಿಳಿತ ಹಾಗೂ ಸಮರದ ಸಬೂಬು ಹೇಳಿ ರೈತರಿಂದ ನಿಗದಿಗಿಂತ ಅಧಿಕ ಹಣ ವಸೂಲಿ ಮಾಡುತ್ತಿರುವುದು ಒಂದು ರೀತಿಯ ಹಗಲು ದರೋಡೆಯಲ್ಲದೆ ಮತ್ತೇನಲ್ಲ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಿಂದ ರಸಗೊಬ್ಬರ ಉತ್ಪಾದನೆ ಕುಸಿದಿರಬಹುದು. ಆದರೆ, ರಾಜ್ಯದಲ್ಲಿ ಸದ್ಯ 14.35 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ ಎಂದು ಸರಕಾರದ ಅಂಕಿಅಂಶಗಳೇ ಹೇಳುತ್ತಿವೆ. ಹೀಗಿದ್ದೂ, ಗ್ರಾಮೀಣ ಭಾಗದ ಡೀಲರ್‌ಗಳು ಕೃತಕ ಅಭಾವ ಸೃಷ್ಟಿಸಿ, ಗೊಬ್ಬರದ ಚೀಲಗಳನ್ನು ಕದ್ದುಮುಚ್ಚಿ ದಾಸ್ತಾನು ಮಾಡುತ್ತಿರುವುದು ಅವರ ಲಾಭಕೋರತನಕ್ಕೆ ಸಾಕ್ಷಿಯಾಗಿದೆ. ಕೇಂದ್ರ ಸರಕಾರ ನಿಗದಿಪಡಿಸಿದ ದರಪಟ್ಟಿಗೂ ಹಾಗೂ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿರುವ ದರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಪ್ರತಿ 50 ಕೆ.ಜಿ. ಚೀಲಕ್ಕೆ 200ರಿಂದ 300 ರೂಪಾಯಿ ಅಧಿಕ ಹಣ ವಸೂಲಿ ಮಾಡುತ್ತಿರುವ ಡೀಲರ್‌ಗಳು, ಚೀಲದ ಮೇಲೆ ಮುದ್ರಿತವಾಗಿರುವ ಎಂಆರ್‌ಪಿ ದರವನ್ನೂ ಲೆಕ್ಕಿಸದೆ ದರ್ಪ ತೋರುತ್ತಿದ್ದಾರೆ.

ಕೃಷಿ ಇಲಾಖೆಯು 'ಫ್ರೂಟ್ಸ್' (FID) ಆಧಾರಿತ ವಿತರಣಾ ವ್ಯವಸ್ಥೆ ಜಾರಿಗೆ ತಂದಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದರೂ, ತಳಮಟ್ಟದಲ್ಲಿ ಅದರ ಪರಿಣಾಮಕಾರಿ ಅನುಷ್ಠಾನ ಕಾಣುತ್ತಿಲ್ಲ. ರೈತರು ದೂರು ನೀಡಿದರೆ ಪರವಾನಗಿ ರದ್ದು ಮಾಡುತ್ತೇವೆ ಎನ್ನುವ ಅಧಿಕಾರಿಗಳ ಭರವಸೆ ಕೇವಲ ಕಾಗದಕ್ಕೆ ಸೀಮಿತವಾಗಬಾರದು. ಕೃಷಿ ಇಲಾಖೆಯ ಜಾಗೃತ ದಳಗಳು ಕೇವಲ ದೂರಿಗಾಗಿ ಕಾಯದೆ, ತಾವೇ ಖುದ್ದಾಗಿ ಅಂಗಡಿಗಳ ಮೇಲೆ ದಾಳಿ ನಡೆಸಿ ದರ ಪರಿಶೀಲನೆ ನಡೆಸಬೇಕಿದೆ.

ಯುದ್ಧ ಮತ್ತು ಉತ್ಪಾದನಾ ವೆಚ್ಚದ ನೆಪವೊಡ್ಡಿ ರೈತನ ಸುಲಿಗೆ ಮಾಡುವ ವ್ಯವಸ್ಥೆ ನಿಲ್ಲಬೇಕು. ಇಡೀ ವರ್ಷ ಕಷ್ಟಪಟ್ಟು ದುಡಿಯುವ ರೈತನಿಗೆ ಬಿತ್ತನೆ ಹಂತದಲ್ಲೇ ಇಂತಹ ಆರ್ಥಿಕ ಹೊರೆ ಹೇರುವುದು ಆತನನ್ನು ಆತ್ಮಹತ್ಯೆಯಂಥ ಹತಾಶೆಯ ಹಾದಿಗೆ ತಳ್ಳಿದಂತೆ. ಸರಕಾರವು ತಕ್ಷಣವೇ ಮಧ್ಯಪ್ರವೇಶಿಸಿ, ಗೊಬ್ಬರದ ಅಕ್ರಮ ದಾಸ್ತಾನು ತಡೆಯುವುದರ ಜತೆಗೆ ಪ್ರತಿ ಹಳ್ಳಿಯಲ್ಲೂ ನಿಗದಿತ ದರಕ್ಕೇ ಗೊಬ್ಬರ ಸಿಗುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ರೈತ ಬದುಕಿದರೆ ಮಾತ್ರ ಈ ನಾಡು ಬದುಕಲು ಸಾಧ್ಯ ಎಂಬ ಕನಿಷ್ಠ ಪ್ರಜ್ಞೆ ಆಡಳಿತ ಯಂತ್ರಕ್ಕೆ ಇರಲಿ.

ಮಧುರಾನುಭೂತಿ

ಬದುಕೆಂಬುದು ಮತ ಎಣಿಕೆ ಪ್ರಕ್ರಿಯೆಯಂತೆ

ಮೊನ್ನೆ ತಾನೆ ಇಡೀ ದೇಶದ ರಾಜಕೀಯ ಆಸಕ್ತರ ಉಸಿರಿನ ಲಯತಪ್ಪಿತ್ತು. ಕುತೂಹಲ, ಉನ್ಮಾದ, ಸಂತೋಷ, ರೋಷ, ಅಸಮಾಧಾನ, ಚಡಪಡಿಕೆ ಹೀಗೆ ನಾನಾ ಭಾವನೆಗಳು ಅವರವರ ವಿಚಾರಧಾರೆ, ಆಸಕ್ತಿ, ಅಭಿಮಾನಕ್ಕೆ ತಕ್ಕಂತೆ ಹೊಯ್ದಾಡುತ್ತಿದ್ದವು. ಮಾಧ್ಯಮಗಳು ಇತ್ತೀಚೆಗಷ್ಟೇ ನಡೆದ ಚುನಾವಣೆಗಳ ಫಲಿತಾಂಶದ ಕ್ಷಣಕ್ಷಣದ ಅಪ್‌ಡೇಟ್ ನೀಡುತ್ತಿದ್ದರೆ, ಇತ್ತ ರಾಜಕೀಯ ವೀಕ್ಷಕರ ಕುತೂಹಲ ತೈಲ ಸುರಿದಂತೆಲ್ಲ ಧಗ್ಗನೆ

ಪುಟಿದೇಳುವ ಬೆಂಕಿ ಜ್ವಾಲೆಯಂತೆ ಆಡುತ್ತಿತ್ತು.

ಚುನಾವಣೆ ಫಲಿತಾಂಶವೆಂದರೆ ಕೇವಲ ಸಂಖ್ಯೆಗಳ ಆಟವಲ್ಲ, ಅದು ಭರವಸೆ ಮತ್ತು ತಂತ್ರಗಾರಿಕೆಯ ಭವಿಷ್ಯ ನಿರ್ಧಾರ. ಬೆಳಗ್ಗೆ ಮತ ಎಣಿಕೆ ಆರಂಭಗೊಳ್ಳುತ್ತಿದ್ದಂತೆ ಹರಿದು ಬರುವ ಅಪ್‌ಡೇಟ್‌ಗಳು, ಪ್ರತಿ ಸುತ್ತಿನಲ್ಲಿ ಬದಲಾಗುವ ಚಿತ್ರಣ ಇವೆಲ್ಲವೂ ಪತ್ತೇದಾರಿ ಕಥೆಯಂತೆ ಭಾಸವಾಗುತ್ತವೆ. ಪ್ರತಿ ಬೆಳವಣಿಗೆಯೊಂದಿಗೆ ಭಾವನೆಗಳು ಬದಲಾಗುತ್ತವೆ. ಈ ರಾಜಕೀಯದ ಅಗ್ನಿಪರೀಕ್ಷೆ ಸಮಾಜ ಮತ್ತು ನಮ್ಮ ಜೀವನದ ಮೇಲೆ ನೇರ ಪರಿಣಾಮ ಬೀರುತ್ತದೆ.

ಚುನಾವಣೆ ಮತ ಎಣಿಕೆ ಪ್ರಕ್ರಿಯೆಯ ನಿಜವಾದ ಥ್ರಿಲ್ ಅದರ ಅನಿಶ್ಚಿತತೆಯಲ್ಲಿದೆ. ಒಬ್ಬ ಅಭ್ಯರ್ಥಿ ಆರಂಭಿಕ ಹಂತಗಳಲ್ಲಿ ಮುಂದಿದ್ದು, ಉಳಿದವರೆಲ್ಲ ಹಿಂದುಳಿದಿರುತ್ತಾರೆ. ಆದರೆ, ಮುಂದಿನ ಹಂತ ಗೇಮ್ ಚೇಂಜಿಂಗ್ ಆಗಲೂಬಹುದು. ಆಗ ಹಿಂದಿದ್ದವರು ಮುಂದಿರುವವರನ್ನು ಹಿಂದಿಕ್ಕಬಹುದು. ಖಚಿತವೆಂದು ಭಾವಿಸಿದ್ದ ಗೆಲುವು ಸೋಲಾಗಿ ಬದಲಾಗಬಹುದು, ಗೆಲ್ಲುವ ಭರವಸೆಯನ್ನೇ ತ್ಯಜಿಸಿದವರು ವಿಜಯಶಾಲಿಯಾಗಬಹುದು.

ಚುನಾವಣೆ ಫಲಿತಾಂಶಗಳು ನಮಗೆ ಕಲಿಸುವ ಪ್ರಮುಖ ಪಾಠವೆಂದರೆ ತಾಳ್ಮೆ. ಅಭ್ಯರ್ಥಿಗಳು ಗೆಲುವಿಗಾಗಿ ತಿಂಗಳುಗಟ್ಟಲೆ ಕಠಿಣ ಪರಿಶ್ರಮ ಪಟ್ಟಿರುತ್ತಾರೆ. ಆದರ ಫಲಿತಾಂಶ ಕೆಲವೇ ಗಂಟೆಗಳಲ್ಲಿ ನಿರ್ಧಾರವಾಗಿಬಿಡುತ್ತದೆ. ಅನೇಕರ ಸೆಣಸಾಟದಲ್ಲಿ ಒಬ್ಬರಷ್ಟೇ ಗೆಲ್ಲುತ್ತಾರೆ. ಸೋತವರು ಧೈರ್ಯ, ಸ್ಥೈರ್ಯ ಕಳೆದುಕೊಳ್ಳದಿರುವುದು ಮತ್ತು ಫಲಿತಾಂಶವನ್ನು ಒಪ್ಪಿಕೊಳ್ಳುವುದು ಬಹು ಮುಖ್ಯವಾಗಿರುತ್ತದೆ. ಪ್ರತಿಯೊಂದು ಪ್ರಯತ್ನವೂ ಗೆಲುವು ತರುವುದಿಲ್ಲ, ಆದರೆ, ಅದು ಖಂಡಿತವಾಗಿಯೂ ನಿಮ್ಮನ್ನು ಗೆಲುವಿಗೆ ಹತ್ತಿರ ಕೊಂಡೊಯ್ಯುತ್ತದೆ. ಚುನಾವಣೆಯ ಗೆಲುವಿಗಾಗಿ ಮಾಡಿದ ಪರಿಶ್ರಮ ಕಠಿಣ, ಪರಿಪೂರ್ಣವಾಗಿರಬಹುದು, ಪ್ರಯತ್ನ ಪ್ರಾಮಾಣಿಕವಾಗಿರಬಹುದು. ಆದರೆ, ಪ್ರಜಾಪ್ರಭುತ್ವದಲ್ಲಿ ಅಂತಿಮವಾಗಿ ಮತದಾರರ ಮೂಡ್ ಎಲ್ಲವನ್ನೂ ನಿರ್ಧರಿಸುತ್ತದೆ.

ನಮ್ಮ ಜೀವನವೂ ಇದೇ ರೀತಿ, ಕಠಿಣ ಪರಿಶ್ರಮ, ಸಂದರ್ಭ ಮತ್ತು ಸಮಯಗಳು ಬದುಕಿನ ಯಶಸ್ಸು- ವೈಫಲ್ಯಗಳ ಫಲಿತಾಂಶ ನಿರ್ಧರಿಸುತ್ತವೆ. ಇಲ್ಲಿಯೂ ಅದೃಷ್ಟ ಯಾವ ಹಂತದಲ್ಲಿ ಬದಲಾದೀತು ಎಂಬುದು ಅನಿಶ್ಚಿತವಾಗಿರುತ್ತದೆ. ಕೊನೆಯ ಕ್ಷಣದವರೆಗೆ ಏನು ಬೇಕಾದರೂ ಆಗಬಹುದು. ಆರಂಭವು ನಿರೀಕ್ಷೆಯಂತೆ ನಡೆಯದಿದ್ದಾಗ ಧೈರ್ಯ, ಸ್ಥೈರ್ಯ ಕಾಪಾಡಿಕೊಳ್ಳಬೇಕಾಗುತ್ತದೆ. ಚುನಾವಣೆಯ ಮತ ಎಣಿಕೆ ಒಂದು ಹಂತದಲ್ಲಿ ಮುಗಿದುಹೋಗುತ್ತದೆ. ಆದರೆ, ಬದುಕಿನ ಫಲಿತಾಂಶ ನಿರ್ಧಾರಗಳ ಎಣಿಕೆ ಸದಾ ಮುಂದುವರಿದಿರುತ್ತದೆ.

ವಿಕ ತಗೋ ಕನ್ನಡ

ನಿರ್ಮಿತ್ರ, ಅನ್‌ಫ್ರೆಂಡ್?

ಇದರಲ್ಲಿ ಮಿತ್ರ: 'ಸ್ನೇಹಿತ, ಗೆಳೆಯ' ಎಂಬ ಅರ್ಥದ ಪದಕ್ಕೆ ನಿರ್ ಉಪಸರ್ಗವು ಸೇರಿದೆ. 'ನಿರ್' ಸೇರಿಸಿದಾಗ ಉಂಟಾಗುವ ಸಮಾಸದ ಪದವು 'ಇಲ್ಲದ್ದು, ಹೆಚ್ಚಿನದು, ಅತಿಕ್ರಮ, ನಿಷೇಧ' ಮುಂತಾದ ಅರ್ಥಗಳನ್ನು ಹೊಮ್ಮಿಸುತ್ತದೆ. ನಿರ್ಮಿತ್ರ ಎಂದರೆ 'ಮಿತ್ರನಿಲ್ಲದವನು, ಏಕಾಕಿ' ಎಂದು ಅರ್ಥ. ಡಿವಿಜಿಯವರ ಒಂದು ಅರ್ಥಪೂರ್ಣ ಕಗ್ಗದಲ್ಲಿ ಈ ಪದವನ್ನು ಹೀಗೆ ಬಳಸಿದ್ದಾರೆ: 'ಒರ್ವನೇ ನಿಲುವೆ ನೀನುತ್ಕಟಕ್ಷಣಗಳಲಿ/ ಧರ್ಮಸಂಕಟಗಳಲಿ, ಜೀವಸಮರದಲಿ/ ನಿರ್ವಾಣದೀಕ್ಷೆಯಲಿ, ನಿರ್ಯಾಣಘಟ್ಟದಲಿ/ ನಿರ್ಮಿತ್ರನಿರಲು ಕಲಿ- ಮಂಕುತಿಮ್ಮ'. ಕೊನೆಗೆ ಮನುಷ್ಯ ಏಕಾಂಗಿ ಎನ್ನುವುದನ್ನು ಅರಿತುಕೊಳ್ಳಬೇಕೆಂಬ ಭಾವ ಇಲ್ಲಿ ಸುಸ್ಪಷ್ಟ. ಈಗ 'ನಿರ್ಮಿತ್ರ' ಪದದ ಅರ್ಥವಿಸ್ತಾರ ಮಾಡಿಕೊಂಡು, ಸಾಮಾಜಿಕ ಮಾಧ್ಯಮದ ಲೌಕಿಕಕ್ಕೆ ಎಳೆತಂದು ಅನ್‌ಫ್ರೆಂಡ್: 'ಮತ್ತೊಬ್ಬನನ್ನು ತನ್ನ ಸ್ನೇಹವಲಯದಿಂದ ಹೊರಗಿಡು' ಎಂದು ಉಪಯೋಗಿಸಬಹುದಲ್ಲವೇ? ಯೋಚಿಸಿನೋಡಿ; ತಿಳಿಸಿ.

- ಜಿ.ವಿ. ಅರುಣ

– ಪದ ಸೂಚಿಸಿದವರು: ಗಾಯತ್ರಿ ಸತ್ಯನಾರಾಯಣ, ಬೆಂಗಳೂರು

ಬತ್ತಳಿಕೆ



ಒಂದು ಕಾಲದಲ್ಲಿ ಅಸಾಧ್ಯ, ಈಗ ಕೈವಶ. ಇಂಪಾಸಿಬಲ್ ರಾಜ್ಯವನ್ನೂ ಪಾಸಿಬಲ್ ಆಗಿಸಬಲ್ಲ ಸಾಮರ್ಥ್ಯ ಬಿಜೆಪಿಯದ್ದು. 15 ವರುಷಗಳಿಂದ ಪಟ್ಟು ಬಿಡದೆ ಹೋರಾಡಿದ್ದ ಬಿಜೆಪಿ ಕಡೆಗೂ ಪ. ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್‌ನ ಗೋಡೆಗಳನ್ನು ಉರುಳಿಸಿದೆ. ದೀದಿ ಕೋಟೆ ನೆಲಕಚ್ಚಿದೆ. ಇದಕ್ಕೂ ಮುನ್ನ ದೇಶದ ರಾಜಧಾನಿ ದಿಲ್ಲಿಯನ್ನು ಕೈವಶ ಮಾಡಿಕೊಳ್ಳಲು ಇಂಥದ್ದೇ ಹೋರಾಟವನ್ನು ಬಿಜೆಪಿ ನಡೆಸಿತ್ತು. ಆದಾಗ್ಯೂ, ದೇಶದ ಅರ್ಧಕ್ಕಿಂತ ಹೆಚ್ಚಿನ ಭಾಗ ಆಳುತ್ತಿರುವ ಬಿಜೆಪಿಗೆ ದಕ್ಷಿಣ ರಾಜ್ಯಗಳೂ ಸೇರಿ ಕೆಲವು ರಾಜ್ಯಗಳು ಸವಾಲಾಗಿವೆ.

ಬಿಜೆಪಿಗೆ ಸವಾಲೊಡ್ಡಿದ ಕೋಟೆಗಳು

22 ರಾಜ್ಯಗಳನ್ನು ಆಳುತ್ತಿದ್ದರೂ, ಇಲ್ಲಿ ಕೇಸರಿ ಬಾವುಟ ಹಾರುತ್ತಿಲ್ಲವೇಕೆ?

ಬಂಗಾಳವೆಂದರೆ ಸುಮ್ಮನೆಯೇ? ಅದು ಹಠದ ಮಣ್ಣು. ಕಳೆದ ಹದಿನೈದು ವರ್ಷಗಳಿಂದ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ ಎಂಬ ಅಭೇದ್ಯ ಕೋಟೆಯ ಮುಂದೆ ಬಿಜೆಪಿ ಎನ್ನುವ ಅಲೆ ಅದೆಷ್ಟು ಬಾರಿ ಅಪ್ಪಳಿಸಿ ನಿರಾಶೆಯಿಂದ ಮರಳಿತ್ತೋ ಲೆಕ್ಕವಿಲ್ಲ. ಕಡೆಗೂ, ಬಿಜೆಪಿ ಅಲೆಯ ಮುಂದೆ ತೃಣಮೂಲ ಕಾಂಗ್ರೆಸ್‌ನ ಭದ್ರಕೋಟೆಯ ಗೋಡೆಗಳು ಛಿದ್ರಗೊಂಡಿವೆ.

ಎಲ್ಲೆಲ್ಲಿ ಅಸಾಧ್ಯವೋ, ಅಲ್ಲೆಲ್ಲ ಬಿಜೆಪಿ ಇಂಥ ರಭಸದಲ್ಲೇ ಮುನ್ನುಗ್ಗಿ, ಕೋಟೆಗಳನ್ನು ಪುಡಿಗಟ್ಟಿದೆ. ದಿಲ್ಲಿಯಲ್ಲಿಯೂ ಕೇಜ್ರಿವಾಲ್ ಕಟ್ಟಿದ್ದ ಆಪ್‌ನ ಭದ್ರಕೋಟೆಯನ್ನು ಬಿಜೆಪಿ ಸಾಕಷ್ಟು ತಯಾರಿ ಮಾಡಿಕೊಂಡೇ ಉರುಳಿಸಿತು. ಪ್ರಸ್ತುತ, ಭಾರತದ 22 ರಾಜ್ಯಗಳಲ್ಲಿ ಬಿಜೆಪಿ ಅಥವಾ ಅದರ ಮೈತ್ರಿಕೂಟದ ಸರಕಾರಗಳಿವೆ. ಆದಾಗ್ಯೂ, ಇಂಥ ಬಲಿಷ್ಠ ಪಕ್ಷಕ್ಕೆ ನಿದ್ದೆಗೆಡಿಸಿರುವ, ಇನ್ನೂ ಸವಾಲಾಗಿಯೇ ಉಳಿದಿರುವ ಕೋಟೆಗಳಿವೆ.



ವಿಕ ಫೋಕಸ್

1 ಪಂಜಾಬ್

ಮುಂದಿನ ಚುನಾವಣೆ- 2027

ಸವಾಲು: ***ರೈತ ವಿರೋಧಿ ಹಣೆಪಟ್ಟಿ, ಬೇರು ಮಟ್ಟದ ಸಂಘಟನೆ ಇಲ್ಲದಿರುವುದು, ಆಪ್ ವಲಸೆ ಮೇಲೆ ಕಣ್ಣು.***

ಪಂಜಾಬ್‌ನಲ್ಲಿ ಬಿಜೆಪಿಯ ಪಯಣವು ಮುಳ್ಳಿನ ಹಾದಿಯಂತಿದೆ. 2020-21ರ ರೈತ ಹೋರಾಟವು ರಾಜ್ಯದಲ್ಲಿ ಬಿಜೆಪಿಯನ್ನು 'ರೈತ ವಿರೋಧಿ' ಎಂದೇ ಬಿಂಬಿಸಿದೆ. ಅಕಾಲಿದಳದೊಂದಿಗಿನ ದಶಕಗಳ ಮೈತ್ರಿ ಮುರಿದುಬಿದ್ದ ಮೇಲೆ ಬಿಜೆಪಿ ಇಲ್ಲಿ ಏಕಾಂಗಿಯಾಗಿ ಹೋರಾಡುತ್ತಿದೆ. ಆದಾಗ್ಯೂ, ಆಮ್ ಆದ್ಮಿ ಪಕ್ಷದ ಆಂತರಿಕ ಕಲಹ ಮತ್ತು ರಾಘವ್ ಚಡ್ಡಾರಂಥ ಚತುರ ನಾಯಕರ ವಲಸೆಯು ಬಿಜೆಪಿಗೆ ಹೊಸ ಭರವಸೆ ನೀಡಿದೆ. ಈಗ ಬಿಜೆಪಿ ತನ್ನ ಹಳೆಯ ತಂತ್ರವನ್ನು ಬದಲಿಸಿ, ನಗರ ಪ್ರದೇಶದ ಹಿಂದೂ- ಖತ್ರಿ ಮತದಾರರನ್ನು ಕ್ರೋಡೀಕರಿಸಲು ಮುಂದಾಗಿದೆ. 2027ರ ಚುನಾವಣೆಯಲ್ಲಿ ಕನಿಷ್ಠ ಶೇ. 20-30 ಮತ ಹಂಚಿಕೆ ಪಡೆಯುವ ಗುರಿ ಹೊಂದಿರುವ ಪಕ್ಷಕ್ಕೆ, ಗ್ರಾಮೀಣ ಪಂಜಾಬ್‌ನ 'ಪಂಜಾಬಿಯತ್' ಮತ್ತು ರೈತರ ಆಕ್ರೋಶವನ್ನು ತಣಿಸುವುದು ದೊಡ್ಡ ಸವಾಲಾಗಿದೆ.

2 ಕೇರಳ

ಮುಂದಿನ ಚುನಾವಣೆ- 2031

ಸವಾಲು: ***ಅಲ್ಪಸಂಖ್ಯಾತ ಮತಗಳ ಪ್ರಭಾವ, ಸಮರ್ಥ ನಾಯಕತ್ವದ ಕೊರತೆ***

ಕೇರಳವು ಬಿಜೆಪಿಯ ಪಾಲಿಗೆ ಇಂದಿಗೂ 'ಅಂತಿಮ ಗಡಿ'ಯಾಗಿಯೇ ಉಳಿದಿದೆ. ಎಡಪಂಥೀಯರ (ಎಲ್‌ಡಿಎಫ್) ಮತ್ತು ಕಾಂಗ್ರೆಸ್ (ಯುಡಿಎಫ್) ನೇತೃತ್ವದ ದ್ವಿಧ್ರುವಿ ರಾಜಕೀಯದಲ್ಲಿ ಮೂರನೇ ಶಕ್ತಿಯಾಗಿ ನೆಲೆ ನಿಲ್ಲಲು ಬಿಜೆಪಿ ಹೆಣಗಾಡುತ್ತಿದೆ. ಇಲ್ಲಿನ ಅಲ್ಪಸಂಖ್ಯಾತ ಮತಗಳ ಪ್ರಭಾವ ಮತ್ತು ಹಿಂದುತ್ವದ ವಿರುದ್ಧದ ಪ್ರಬಲ ನಿರೂಪಣೆ ಬಿಜೆಪಿಯ ಹಾದಿಯನ್ನು ಕಷ್ಟವಾಗಿಸಿದೆ. ಆದರೆ, 2024ರಲ್ಲಿ ತ್ರಿಶೂರ್ ಲೋಕಸಭಾ ಕ್ಷೇತ್ರವನ್ನು ಗೆದ್ದಿದ್ದು, ಪಾಲಕ್ಕಾಡ್ ಹಾಗೂ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿನ ಪ್ರಭಾವವು ಪಕ್ಷಕ್ಕೆ ಆಶಾದಾಯಕವಾಗಿದೆ. ಈಗಿನ ವಿಧಾನಸಭಾ ಚುನಾವಣೆಯಲ್ಲಿ ಗೆದ್ದ 3 ಸೀಟುಗಳು ತುಸು ಬಲ ತುಂಬಿವೆ. ಅತಿಹೆಚ್ಚು ಶಾಖೆಗಳೊಂದಿಗೆ ಆರ್‌ಎಸ್‌ಎಸ್ ಸಂಘಟನೆ ಇಲ್ಲಿ ತಳಮಟ್ಟದಲ್ಲಿ ಪ್ರಭಾವಿಯಾಗಿದ್ದರೂ, ಅಲ್ಪಸಂಖ್ಯಾತ ಮತಗಳ ಪ್ರಭಾವವೇ ಬಿಜೆಪಿಗೆ ದೊಡ್ಡ ಸವಾಲಾಗಿದೆ. ಈಗೀಗ ಕ್ರಿಶ್ಚಿಯನ್ ಸಮುದಾಯದ ಒಂದು ವರ್ಗವನ್ನು ತಲುಪುವ ಪ್ರಯತ್ನದ ಮೂಲಕ ಬಿಜೆಪಿ ಇಲ್ಲಿ ತನ್ನ ಮತದ ಪಾಲನ್ನು ಹೆಚ್ಚಿಸಿಕೊಳ್ಳಲು ದೀರ್ಘಾವಧಿ ಯೋಜನೆ ರೂಪಿಸಿದೆ.

3 ತಮಿಳುನಾಡು

ಮುಂದಿನ ಚುನಾವಣೆ- 2031

ಸವಾಲು: ***ದ್ರಾವಿಡ ಅಸ್ಮಿತೆ, ಹಿಂದಿ ವಿರೋಧಿ ಭಾವನೆ, ಹಿಂದುತ್ವ ವಿರೋಧಿ ನಿರೂಪಣೆ.***

ತಮಿಳುನಾಡು ಬಿಜೆಪಿಗೆ ಅತ್ಯಂತ ಕಠಿಣವಾದ ಮೈದಾನ. ಪ್ರತಿ ಚುನಾವಣೆಯಲ್ಲಿಯೂ ಇಲ್ಲಿನ ರಾಜಕೀಯ ನಿಲ್ಲುವುದು ಭಾಷಾಭಿಮಾನ ಮತ್ತು ದ್ರಾವಿಡ ಗುರುತಿನ ಮೇಲೆ. ಡಿಎಂಕೆ ಪಕ್ಷವು ಬಿಜೆಪಿಯನ್ನು 'ಹಿಂದಿ ಹೇರಿಕೆ' ಮಾಡುವ ಉತ್ತರ ಭಾರತದ ಪಕ್ಷ ಎಂದು ಬಿಂಬಿಸುತ್ತಿರುವುದು ದೊಡ್ಡ ಅಡ್ಡಿಯಾಗಿದೆ. ಇತ್ತೀಚೆಗೆ ದಳಪತಿ ವಿಜಯ್ ಅವರ ಟಿವಿಕೆ ಪಕ್ಷದ ಉದಯವು ರಾಜ್ಯದ ರಾಜಕೀಯವನ್ನು ತ್ರಿಕೋನ ಸ್ಪರ್ಧೆಯತ್ತ ತಳ್ಳಿರುವುದು ಬಿಜೆಪಿಗೆ ಇನ್ನೊಂದು ಚಿಂತೆ. ಬಿಜೆಪಿ ಇಲ್ಲಿ ಸಣ್ಣ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಕನ್ಯಾಕುಮಾರಿ ಮತ್ತು ತೆಂಕಾಸಿಯಂಥ ದಕ್ಷಿಣ ಭಾಗಗಳಲ್ಲಿ ಅಸ್ತಿತ್ವ ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ. ಮೋದಿ ಅವರ ಇಮೇಜ್ ನಗರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದರೂ, ದ್ರಾವಿಡ ಸಿದ್ಧಾಂತದ ಭದ್ರಕೋಟೆಯನ್ನು ಕೆಡವಲು ಬಿಜೆಪಿಗೆ ಹೊಸ ರೂಪಾಂತರದ ಅಗತ್ಯ ಇದ್ದೇ ಇದೆ.

4 ಕರ್ನಾಟಕ

ಮುಂದಿನ ಚುನಾವಣೆ- 2028

ಸವಾಲು: ***ಸಮರ್ಥ ನಾಯಕತ್ವದ ಕೊರತೆ, ಆಂತರಿಕ ಭಿನ್ನಮತ ಮತ್ತು ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳ ಪ್ರಭಾವ.***

ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲಾದ ಕರ್ನಾಟಕ ಸಾಕಷ್ಟು ಅವಕಾಶಗಳನ್ನು ಕೈಗಿಟ್ಟರೂ, ಪಕ್ಷ ತನ್ನದೇ ಪ್ರಮಾದಗಳಿಂದ ಅವುಗಳನ್ನು ಕೈಚೆಲ್ಲಿತ್ತು. ಇಲ್ಲಿನ ಬಿಜೆಪಿ ತಾನಾಗಿಯೇ ಬುದ್ಧಿ ಕಲಿಯುವುದೇ ಲೇಸೆಂದು ಕೇಂದ್ರದ ನಾಯಕರೂ ನಿರ್ಧರಿಸಿದಂತಿದೆ. ಬಿ.ಎಸ್. ಯಡಿಯೂರಪ್ಪ ಅವರ ನಂತರದ ಅವಧಿಯಲ್ಲಿ ಪಕ್ಷವು ಸಮರ್ಥ ನಾಯಕತ್ವದ ಕೊರತೆಯನ್ನು ಎದುರಿಸುತ್ತಿದೆ. 2023ರ ಸೋಲು ಮತ್ತು ಲಿಂಗಾಯತ ಮತಬ್ಯಾಂಕ್‌ನಲ್ಲಾದ ಏರುಪೇರು ಪಕ್ಷವನ್ನು ಚಿಂತೆಗೀಡು ಮಾಡಿದೆ. ಸದ್ಯಕ್ಕೆ ಜೆಡಿಎಸ್ ಜತೆಗಿನ ಮೈತ್ರಿಯು ಹಳೆ ಮೈಸೂರು ಭಾಗದಲ್ಲಿ ಶಕ್ತಿ ನೀಡಿದ್ದರೂ, ಆಡಳಿತಾರೂಢ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳ ಪ್ರಭಾವವನ್ನು ಮೆಟ್ಟಿ ನಿಲ್ಲಲು ಬಿಜೆಪಿಗೆ ಒಗ್ಗಟ್ಟಿನ ಮಂತ್ರ ಮತ್ತು ಜನಪರ ಹೋರಾಟಗಳ ಅನಿವಾರ್ಯತೆಯಂತೂ ಇದ್ದೇ ಇದೆ. ಅಲ್ಲದೆ, ಸರಕಾರದ ವೈಫಲ್ಯವನ್ನು ಜನಾಕ್ರೋಶವಾಗಿ ಪರಿವರ್ತಿಸುವ ದಾರಿಗಳನ್ನು ಬಿಜೆಪಿ ಹುಡುಕಬೇಕಿದೆ.

5 ಹಿಮಾಚಲ ಪ್ರದೇಶ

ಮುಂದಿನ ಚುನಾವಣೆ- 2027

ಸವಾಲು- ಪಕ್ಷದೊಳಗೆ ಒಗ್ಗಟ್ಟು ಮೂಡಿಸುವುದು.

ಹಿಮಾಚಲದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಸರಕಾರ ಬದಲಾಗುವ ಸಂಪ್ರದಾಯವಿದೆ. 2022ರಲ್ಲಿ ಬಿಜೆಪಿ ಈ ಸಂಪ್ರದಾಯ ಮುರಿಯಲು 'ಮಿಷನ್ ರಿಪೀಟ್' ಹಮ್ಮಿಕೊಂಡಿತ್ತಾದರೂ, ಟಿಕೆಟ್ ಹಂಚಿಕೆಯಲ್ಲಾದ ಗೊಂದಲ ಮತ್ತು ಪಕ್ಷದೊಳಗಿನ ಬಂಡಾಯದಿಂದಾಗಿ ಅಧಿಕಾರ ಕಳೆದುಕೊಂಡಿತು. ಹಿಮಾಚಲದ ಮತದಾರರು ಮೂಲಭೂತ ಸೌಕರ್ಯ ಮತ್ತು ಸೇಬಿನ ಬೆಳೆಯ ಬೆಲೆಯಂಥ ಸ್ಥಳೀಯ ವಿಷಯಗಳಿಗೆ ಹೆಚ್ಚು ಒತ್ತು ನೀಡುತ್ತಾರೆ. ಕೇಂದ್ರದ ಯೋಜನೆಗಳಿದ್ದರೂ, ರಾಜ್ಯ ಮಟ್ಟದ ನಾಯಕರ ನಡುವಿನ ಶೀತಲ ಸಮರವು ಬಿಜೆಪಿಗೆ ಇಲ್ಲಿ ದೊಡ್ಡ ಹಿನ್ನಡೆಯಾಗಿದೆ. ಕಾಂಗ್ರೆಸ್‌ನ ಆಂತರಿಕ ಕಲಹದ ಲಾಭ ಪಡೆಯಲು ಬಿಜೆಪಿ ಹೊಂಚು ಹಾಕುತ್ತಿದ್ದರೂ, ತಳಮಟ್ಟದ ಕಾರ್ಯಕರ್ತರನ್ನು ಒಗ್ಗೂಡಿಸುವುದು ದೊಡ್ಡ ಸವಾಲಾಗಿದೆ.

6 ತೆಲಂಗಾಣ

ಮುಂದಿನ ಚುನಾವಣೆ- 2028

ಸವಾಲು- ಪ್ರಾದೇಶಿಕ ಅಸ್ಮಿತೆ, ಕಾಂಗ್ರೆಸ್‌ನ ಪುನಶ್ಚೇತನ

ಒಂದು ಕಾಲದಲ್ಲಿ ಕೆ. ಚಂದ್ರಶೇಖರ್‌ರಾವ್ (ಕೆಸಿಆರ್) ಅವರ ಭದ್ರಕೋಟೆಯಾಗಿದ್ದ ತೆಲಂಗಾಣದಲ್ಲಿ ಬಿಜೆಪಿ ಎರಡನೇ ಶಕ್ತಿಯಾಗಿ ಹೊರಹೊಮ್ಮಲು ಪ್ರಯತ್ನಿಸುತ್ತಿತ್ತು. ಆದರೆ, 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅನಿರೀಕ್ಷಿತವಾಗಿ ಅಧಿಕಾರ ಹಿಡಿದಿದ್ದು ಬಿಜೆಪಿಯ ಲೆಕ್ಕಾಚಾರವನ್ನೆಲ್ಲ ತಲೆಕೆಳಗಾಗಿಸಿದೆ. ಇಲ್ಲಿ ಹೈದರಾಬಾದ್ ಸುತ್ತಮುತ್ತಲಿನ ನಗರ ಪ್ರದೇಶಗಳಲ್ಲಿ ಬಿಜೆಪಿ ಪ್ರಬಲವಾಗಿದ್ದರೂ, ಗ್ರಾಮೀಣ ತೆಲಂಗಾಣದಲ್ಲಿ ಕಮಲ ಇನ್ನೂ ಬೇರು ಬಿಟ್ಟಿಲ್ಲ. ಹಿಂದುತ್ವದ ಅಜೆಂಡಾ ಇಲ್ಲಿ ಕೆಲಸ ಮಾಡುತ್ತದೆಯಾದರೂ, 'ತೆಲಂಗಾಣದ ಅಸ್ಮಿತೆ' ಮತ್ತು ಕೃಷಿ ಆಧಾರಿತ ರಾಜಕೀಯದ ಮುಂದೆ ಬಿಜೆಪಿ ತನ್ನ ಪ್ರಭಾವವನ್ನು ವಿಸ್ತರಿಸಲು ತೀವ್ರ ಹೋರಾಟ ನಡೆಸಬೇಕಿದೆ.

7 ಜಾರ್ಖಂಡ್

ಮುಂದಿನ ಚುನಾವಣೆ- 2029

ಸವಾಲು: ***ಬುಡಕಟ್ಟು ಮತದಾರರ ಧ್ರುವೀಕರಣ, ಪ್ರಾದೇಶಿಕ ನಾಯಕರ ಬಂಧನದಿಂದ ಉಂಟಾದ ಸಹಾನುಭೂತಿ.***

ಬಿಜೆಪಿಗೆ ಜಾರ್ಖಂಡ್ ಒಂದು ಕಾಲದಲ್ಲಿ ಭದ್ರ ನೆಲೆಯಾಗಿತ್ತು. ಆದರೆ, ಹೇಮಂತ್ ಸೊರೆನ್ ಅವರ ಬಂಧನ ಮತ್ತು ನಂತರದ ರಾಜಕೀಯ ಬೆಳವಣಿಗೆಗಳು ಆದಿವಾಸಿ ಮತದಾರರಲ್ಲಿ ಬಿಜೆಪಿ ವಿರುದ್ಧ ಒಂದು ರೀತಿಯ ಅಸಮಾಧಾನ ಮೂಡಿಸಿವೆ. 'ಜಲ್, ಜಂಗಲ್, ಜಮೀನ್' ಘೋಷಣೆಯಡಿ ಸಂಘಟಿತರಾಗಿರುವ ಬುಡಕಟ್ಟು ಸಮುದಾಯವನ್ನು ತಲುಪಲು ಬಿಜೆಪಿಗೆ ಕಷ್ಟವಾಗುತ್ತಿದೆ. ಇಲ್ಲಿ ಬಿಜೆಪಿ ತನ್ನನ್ನು ಕೇವಲ ನಗರವಾಸಿಗಳ ಪಕ್ಷ ಎಂಬ ಹಣೆಪಟ್ಟಿಯಿಂದ ಹೊರಬಂದು, ಬುಡಕಟ್ಟು ನಾಯಕರನ್ನು ಮುನ್ನೆಲೆಗೆ ತರುವ ಅನಿವಾರ್ಯತೆಯಲ್ಲಿದೆ.

8 ಜಮ್ಮು ಮತ್ತು ಕಾಶ್ಮೀರ

ಮುಂದಿನ ಚುನಾವಣೆ- 2029

ಸವಾಲು: ***ಆರ್ಟಿಕಲ್ 370 ರದ್ದತಿಯ ನಂತರದ ರಾಜಕೀಯ ಶೂನ್ಯತೆ ಮತ್ತು ಕಣಿವೆ ರಾಜ್ಯದ ವಿಶ್ವಾಸ ಗಳಿಕೆ.***

370ನೇ ವಿಧಿ ರದ್ದತಿಯ ನಂತರ ಜಮ್ಮು ಭಾಗದಲ್ಲಿ ಬಿಜೆಪಿ ಅತ್ಯಂತ ಪ್ರಬಲವಾಗಿದೆ. ಆದರೆ, ಕಾಶ್ಮೀರ ಕಣಿವೆಯಲ್ಲಿ ಕಮಲ ಅರಳಿಸುವುದು ಇಂದಿಗೂ ಹಿಮಾಲಯವನ್ನು ಹತ್ತುವಷ್ಟೇ ಕಷ್ಟದ ಕೆಲಸ. ಅಲ್ಲಿನ ಸ್ಥಳೀಯ ಪಕ್ಷಗಳಾದ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿಡಿಪಿ ವಿರುದ್ಧ ಜನರಲ್ಲಿ ಅಸಮಾಧಾನವಿದ್ದರೂ, ಬಿಜೆಪಿಯನ್ನು ಸ್ವೀಕರಿಸಲು ಕಣಿವೆಯ ಜನ ಇನ್ನೂ ಸಿದ್ಧರಿಲ್ಲ. ಇಲ್ಲಿ ಅಭಿವೃದ್ಧಿ ಮತ್ತು ಶಾಂತಿಯ ಮಂತ್ರವನ್ನು ಜಪಿಸುತ್ತಿರುವ ಬಿಜೆಪಿ, ಹಿಂದೂ ಬಹುಸಂಖ್ಯಾತ ಜಮ್ಮು ಮತ್ತು ಮುಸ್ಲಿಂ ಬಹುಸಂಖ್ಯಾತ ಕಾಶ್ಮೀರದ ನಡುವೆ ಸಮತೋಲನ ಕಾಯ್ದುಕೊಳ್ಳುವ ದೊಡ್ಡ ಸವಾಲನ್ನು ಎದುರಿಸುತ್ತಿದೆ.

ಪಂಚೇಂದ್ರಿಯಗಳಿಗೆ ಎಐ ಪಂಚ್!

ಟೆಕ್ ನೋಟ

ಟಿ. ಜಿ. ಶ್ರೀನಿಧಿ

ಮೊನ್ನೆ ಗೆಳೆಯರ ಜತೆ ಮಾತನಾಡುತ್ತಿದ್ದಾಗ ಟ್ರಾಫಿಕ್ ದಂಡದ ವಿಷಯ ಬಂತು. ಈ ಹಿಂದೆ ಪೊಲೀಸ್ ಸಿಬ್ಬಂದಿಯ ಕಣ್ಣಿಗೆ ಬೀಳದಿದ್ದರೆ ದಂಡದಿಂದ ಪಾರಾಗಬಹುದಾಗಿತ್ತು. ಆದರೆ, ಈಗ ಎಐ ಕ್ಯಾಮೆರಾಗಳಿಂದ ತಪ್ಪಿಸಿಕೊಳ್ಳುವುದು ಕಷ್ಟ ಎಂದು ಗೆಳೆಯರೊಬ್ಬರು ಗೊಣಗಿದರು.

ಹೌದು, ಮನುಷ್ಯರಷ್ಟೇ ಮಾಡಬಹುದಾಗಿದ್ದ ಎಷ್ಟೋ ಕೆಲಸಗಳಲ್ಲಿ ಈಗ ಎಐ ಕೈವಾಡ ಕಾಣಸುತ್ತಿದೆ. ಮನುಷ್ಯರ ದೃಷ್ಟಿಗೆ ಪೂರಕವಾಗಿ ಕಂಪ್ಯೂಟರ್ ದೃಷ್ಟಿ (ಕಂಪ್ಯೂಟರ್ ವಿಶನ್) ಬಂದಿದೆ. ಛಾಯಾಚಿತ್ರ ಅಥವಾ ವಿಡಿಯೊದಲ್ಲಿರುವ ದೃಶ್ಯರೂಪದ ಮಾಹಿತಿಯನ್ನು ಕಂಪ್ಯೂಟರೇ ಸಂಸ್ಕರಿಸಿ ಗುರುತಿಸುವುದನ್ನು ಇದು ಸಾಧ್ಯವಾಗಿಸುತ್ತಿದೆ. ವೇಗದ ಮಿತಿ ಮೀರಿದರೆ, ಸಿಗ್ನಲ್ ಜಂಪ್ ಮಾಡಿದರೆ ಕಂಪ್ಯೂಟರಿನ ಕಣ್ಣು ಅದನ್ನೆಲ್ಲ ಗುರುತಿಸುತ್ತದೆ. ವಾಹನದ ನಂಬರನ್ನು ಬರೆದಿಟ್ಟುಕೊಳ್ಳುತ್ತದೆ. ದಂಡದ ನೋಟೀಸು ಕಳಿಸಲು ಸಹಾಯ ಮಾಡುತ್ತದೆ.

ಟ್ರಾಫಿಕ್ಕಿನಲ್ಲಿ ಎಐನ ಕೆಲಸ ಇಷ್ಟಕ್ಕೇ ಸೀಮಿತವಲ್ಲ, ತಾವೇ ಡ್ರೈವಿಂಗ್ ಮಾಡುವ ಸ್ವಾಯತ್ತ ವಾಹನಗಳು ತಮ್ಮ ಸುತ್ತಮುತ್ತ ಏನು ನಡೆಯುತ್ತಿದೆಯೆಂದು ತಿಳಿಯುವುದಕ್ಕೂ ಕಂಪ್ಯೂಟರ್ ಕಣ್ಣನ್ನು ಬಳಸಿಕೊಳ್ಳುತ್ತವೆ. ಜನಸಂದಣಿಯಲ್ಲಿ ಸಂಶಯಾಸ್ಪದ ಚಟುವಟಿಕೆಗಳನ್ನು ಗುರುತಿಸುವುದಕ್ಕೂ ಇದರ ಸಹಾಯ ದೊರಕುತ್ತಿದೆ. ಕಾರ್ಖಾನೆಯಲ್ಲಿ ಉತ್ಪನ್ನಗಳ ಗುಣಮಟ್ಟ ಪರೀಕ್ಷಿಸುವುದರಿಂದ ಪ್ರಾರಂಭಿಸಿ ಛಾಯಾಚಿತ್ರಗಳ ಮೂಲಕ ರೋಗಪತ್ತೆ ಮಾಡುವುದರವರೆಗೆ ಹಲವಾರು ಕೆಲಸಗಳನ್ನು ಈ ತಂತ್ರಜ್ಞಾನ ಸಾಧ್ಯವಾಗಿಸುತ್ತಿದೆ. ಇದರ ಅನ್ವಯಗಳ ವ್ಯಾಪ್ತಿ ಎಷ್ಟು ವಿಸ್ತಾರವಾಗಿದೆಯೆಂದರೆ, ಒಂದುಕಡೆ ಅದು ದೃಷ್ಟಿ ಸವಾಲು ಎದುರಿಸುತ್ತಿರುವವರಿಗೆ ತಮ್ಮ ಎದುರಿಗಿರುವ ದೃಶ್ಯವನ್ನು ಗುರುತಿಸಲು ಸಹಾಯ ಮಾಡುತ್ತಿದೆ. ಇನ್ನೊಂದು ಕಡೆ ಯುದ್ಧರಂಗದಲ್ಲಿ ಶತ್ರುಗಳ ನೆಲೆಯನ್ನು ದೂರದಿಂದಲೇ ಪತ್ತೆಮಾಡುವುದಕ್ಕೂ ನೆರವಾಗುತ್ತಿದೆ!

ಕಣ್ಣು ಮಾತ್ರವೇ ಅಲ್ಲ, ಎಐಗೆ ಕಿವಿಯ ಕೆಲಸವೂ ಗೊತ್ತಿದೆ. ನಾವು ಮಾತಾಡುವುದನ್ನು ಅದು ಕೇಳಿಸಿಕೊಳ್ಳುತ್ತದೆ, ಏನು ಹೇಳಿದೆವೆಂದು ಪತ್ತೆಮಾಡುತ್ತದೆ. ಇಲ್ಲಿ ಉಪಯೋಗಕ್ಕೆ ಬರುವುದು ಧ್ವನಿ ಗುರುತಿಸುವಿಕೆಯ (ಸ್ಪೀಚ್ ರೆಕಗ್ನಿಶನ್) ತಂತ್ರಜ್ಞಾನ. ನಮ್ಮ ಮಾತನ್ನು ಆಲಿಸಿ, ನಾವು ಏನು ಹೇಳುತ್ತಿದ್ದೇವೆ ಎಂದು ಗುರುತಿಸಿ, ಅದನ್ನು ಅರ್ಥೈಸಿಕೊಳ್ಳಲು, ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಲು ನೆರವಾಗುವುದು ಇದರ ಹೆಗ್ಗಳಿಕೆ. ಧ್ವನಿಯನ್ನು ಪಠ್ಯಕ್ಕೆ ಬದಲಿಸುವ (ಸ್ಪೀಚ್ ಟು ಟೆಕ್ಸ್ಟ್) ತಂತ್ರಾಂಶಗಳಿಗೆ, ಅಲೆಕ್ಸಾ - ಸಿರಿ ಮುಂತಾದ ಧ್ವನಿ ಸಹಾಯಕ ಸಾಧನಗಳ ಕೆಲಸಕ್ಕೆ ಇದೇ ಆಧಾರ. ಗ್ರಾಹಕ ಸೇವೆಯಲ್ಲೂ ಅಷ್ಟೇ, ಹಲವು ಬಾರಿ ನಮ್ಮ ದೂರುಗಳನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುವುದು ಈ ತಂತ್ರಜ್ಞಾನವೇ. ರೋಗಿಗಳಿಗೆ ವೈದ್ಯರ ಸಲಹೆ ಸೂಚನೆಗಳನ್ನು ದಾಖಲಿಸುವ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ಸೇವೆಗಳೂ ಧ್ವನಿ ಗುರುತಿಸುವಿಕೆಯನ್ನು ಬಳಸುತ್ತವೆ. ಎಐ ಸಹಾಯದಿಂದ ನಕಲಿ ಧ್ವನಿ ಸೃಷ್ಟಿಸಿ ವಂಚಿಸುವ ಪ್ರಯತ್ನಗಳು ನಡೆಯುತ್ತವಲ್ಲ, ಅಂತಹ ಕುತಂತ್ರಗಳನ್ನು ಗುರುತಿಸುವಲ್ಲೂ ಈ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.

ಪಂಚೇಂದ್ರಿಯಗಳ ಪೈಕಿ ಇನ್ನುಳಿದವು ಮೂಗು, ನಾಲಗೆ ಹಾಗೂ ಚರ್ಮ. ಕಣ್ಣು-ಕಿವಿಯ ಕೆಲಸಗಳನ್ನೆಲ್ಲ ಕಲಿತಿರುವ ಎಐ ತಂತ್ರಜ್ಞಾನ ಮಿಕ್ಕ ಇಂದ್ರಿಯಗಳ ಕೆಲಸವನ್ನೂ ಕಲಿಯಬಲ್ಲದೇ? ಅಥವಾ ಈಗಾಗಲೇ ಕಲಿತುಬಿಟ್ಟಿದೆಯೇ?

ನೋಡಲು, ಕೇಳಲು ಕಲಿತಿರುವ ಎಐಗೆ ವಾಸನೆಯನ್ನೂ ರುಚಿಯನ್ನೂ ಗ್ರಹಿಸಲು ಕಲಿಯುವುದು, ಸುಲಭ ಅನ್ನಿಸಬಹುದು. ಆದರೆ, ಅದು ಅಷ್ಟೇನೂ ಸರಳವಲ್ಲ, ದೃಶ್ಯ ಹಾಗೂ ಧ್ವನಿ ಎರಡೂ ಅಲೆಗಳ ರೂಪದಲ್ಲಿರುವುದರಿಂದ ಅವುಗಳನ್ನು ಡಿಜಿಟಲ್ ರೂಪಕ್ಕೆ ಪರಿವರ್ತಿಸುವುದು ತುಲನಾತ್ಮಕವಾಗಿ ಸುಲಭ. ಆದರೆ ವಾಸನೆ ಹಾಗೂ ರುಚಿ ತಿಳಿಯಲು ಅಣುಗಳನ್ನು ಹಿಡಿದು, ಸಂಸ್ಕರಿಸಬೇಕಾಗುತ್ತದೆ. ದೃಶ್ಯ-ಧ್ವನಿಗಳು ಭೌತವಿಜ್ಞಾನವಾದರೆ ಇದು ರಸಾಯನ ವಿಜ್ಞಾನ. ಇದೆಲ್ಲ ಸಂಕೀರ್ಣವಾದ್ದರಿಂದಲೇ ಈ ಕ್ಷೇತ್ರಗಳಲ್ಲಿ ಎಐ ಪ್ರಗತಿ ನಿಧಾನವಾಗಿದೆ. ಅದು ಇನ್ನೂ ಪರಿಣತಿ ಪಡೆಯುವ ಪ್ರಯತ್ನದಲ್ಲೇ ಇದೆ.

ಈಗ, ಅಡುಗೆಮನೆಯ ಕೆಲಸಗಳನ್ನು ನಿಭಾಯಿಸಬಲ್ಲ ಎಐ ಬೇಕಾಗಿದೆ ಎಂದುಕೊಳ್ಳಿ. ಸಾಮಾನ್ಯವಾಗಿ ಅಲ್ಲಿ ಏಕಕಾಲದಲ್ಲೇ ಹಲವು ಕೆಲಸಗಳು ನಡೆಯುತ್ತವೆ. ಸಿದ್ಧವಾಗುತ್ತಿರುವ ಒಗ್ಗರಣೆ ಹದವಾಗಿದೆಯೇ ತಿಳಿಯಬೇಕು, ಹಪ್ಪಳ ಸೀದುಹೋಗದಂತೆ ನೋಡಿಕೊಳ್ಳಬೇಕು. ನಿನ್ನೆಯ ಅಡುಗೆಯೇನಾದರೂ ಮಿಕ್ಕಿದ್ದರೆ ಅದು ಕೆಟ್ಟಿಲ್ಲ ಎನ್ನುವುದನ್ನೂ ಖಚಿತಪಡಿಸಿಕೊಳ್ಳಬೇಕು. ಇದನ್ನೆಲ್ಲ ಒಟ್ಟಿಗೆ ಮಾಡುವುದು ಎಐಗೆ ಕಷ್ಟ, ಹಾಗೆಂದು ಅದಕ್ಕೆ ವಾಸನೆ ಗುರುತಿಸಲು ಗೊತ್ತೇ ಇಲ್ಲ ಎನ್ನುವಂತಿಲ್ಲ. ನಿರ್ದಿಷ್ಟ ಬಗೆಯ ವಾಸನೆಯನ್ನು (ಉದಾ: ಅಡುಗೆ ಅನಿಲದ ಸೋರಿಕೆ) ಪತ್ತೆಹಚ್ಚಿ ಎಚ್ಚರಿಸುವ ಇ-ಮೂಗುಗಳು ಈಗಾಗಲೇ ಬಳಕೆಯಲ್ಲಿವೆ. ಆಹಾರ ಪದಾರ್ಥಗಳನ್ನು ದೊಡ್ಡ ಪ್ರಮಾಣದಲ್ಲಿ ನಿರ್ವಹಿಸುವ ಸ್ಥಳಗಳಲ್ಲಿ ಹಳಸಿದ ವಾಸನೆಯನ್ನು ಗುರುತಿಸುವುದೂ ಸಾಧ್ಯವಾಗಿದೆ. ಆದರೆ, ಅಡುಗೆಮನೆಯಲ್ಲಿ ನಾಲ್ಕಾರು ಕೆಲಸಗಳನ್ನು ಒಟ್ಟಿಗೆ ನಿಭಾಯಿಸುವ, ಹಲವು ವಾಸನೆಗಳನ್ನು ಪ್ರತ್ಯೇಕವಾಗಿ ಗುರುತಿಸುವ ಮನುಷ್ಯ ಪರಿಣತರ ಮಟ್ಟವನ್ನು ಅದು ಇನ್ನೂ ಮುಟ್ಟಿಲ್ಲ, ಅಷ್ಟೇ.

ವಾಸನೆ ಪತ್ತೆಮಾಡಲು ಇ-ಮೂಗು ಇದ್ದಂತೆ ರುಚಿಯನ್ನು ಗ್ರಹಿಸುವ ಇ-ನಾಲಗೆಯೂ ಇದೆ. ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರೀಕ್ಷಿಸುವಲ್ಲಿ ಇದನ್ನು ಬಳಸಬಹುದಂತೆ. ತಿಂಡಿತಿನಿಸುಗಳ ರುಚಿ ಎಲ್ಲ ಬ್ಯಾಚ್‌ಗಳಲ್ಲೂ ಒಂದೇ ರೀತಿ ಇದೆಯೇ, ಉಪ್ಪು-ಖಾರದ ಪ್ರಮಾಣ ಸರಿಯಿದೆಯೇ ಎನ್ನುವುದನ್ನೆಲ್ಲ ಇದು ಪರಿಶೀಲಿಸಬಲ್ಲದು. ಆಕಸ್ಮಾತ್ತಾಗಿ ಏನಾದರೂ ತಪ್ಪುಗಳಾಗಿದ್ದರೆ ಸಮಸ್ಯೆಯಾಗುವ ಮೊದಲೇ ಪತ್ತೆಹಚ್ಚಬಲ್ಲದು. ಅಷ್ಟೇ ಅಲ್ಲ, ಹೊಸರುಚಿಯ ಪರೀಕ್ಷೆಯನ್ನೂ ಮಾಡಬಲ್ಲದು. ಇಂತ ಇ-ನಾಲಗೆ ಎಲ್ಲಕಡೆಯೂ ಸಿಗುವಂತಾದರೆ ಸದ್ಯ ಬಚಾವಾದೆನೆಂದು ನಮ್ಮ ಈ ನಾಲಗೆ ಖುಷಿಪಡಬಹುದೋ ಏನೋ. ಆದರೆ, ಇ-ಮೂಗಿನ ಹಾಗೆ ಈ ತಂತ್ರಜ್ಞಾನವೂ ಇನ್ನೂ ಬೆಳವಣಿಗೆಯ ಹಂತದಲ್ಲೇ ಇದೆ.

ವಾಸನೆ, ರುಚಿ ಆದಮೇಲೆ ಮಿಕ್ಕಿದ್ದು ಸ್ಪರ್ಶ ಒಂದೇ. ಟಚ್‌ಸ್ಕ್ರೀನುಗಳು ಆಧುನಿಕ ತಂತ್ರಜ್ಞಾನದ ಅವಿಭಾಜ್ಯ ಅಂಗಗಳೇ ಇರಬಹುದು. ಆದರೆ, ಅವು ಮನುಷ್ಯನ ಸ್ಪರ್ಶಕ್ಕೆ ಸ್ಪಂದಿಸುತ್ತವೆ, ಅಷ್ಟೇ. ಮನುಷ್ಯನ ಚರ್ಮ ವಿವಿಧ ವಿಷಯಗಳನ್ನು ಸ್ಪರ್ಶದಿಂದಲೇ ಗುರುತಿಸುವಂತೆ ತಂತ್ರಜ್ಞಾನವೂ ಮಾಡಬಲ್ಲದೇ?

ಈ ನಿಟ್ಟಿನಲ್ಲೂ ಪ್ರಯತ್ನಗಳು ನಡೆದಿವೆ. ವಿವಿಧ ವಸ್ತುಗಳ ಮೇಲ್ಮೈ ವೈಶಿಷ್ಟ್ಯಗಳು, ತಾಪಮಾನ ಹಾಗೂ ಒತ್ತಡವನ್ನು ಗುರುತಿಸುವ ಸಾಮರ್ಥ್ಯವನ್ನು ಯಂತ್ರಗಳಿಗೂ ಕೊಡುವುದು ಇಂತಹ ಪ್ರಯತ್ನಗಳ ಉದ್ದೇಶ. ಕೃತಕ ಕೈಕಾಲುಗಳೂ ಸ್ಪರ್ಶದ ಸಾಮರ್ಥ್ಯ ಪಡೆಯುವಂತೆ, ಅತಿಸೂಕ್ಷ್ಮ ವಸ್ತುಗಳನ್ನು ಕೂಡ ರೊಬಾಟುಗಳೇ ನಿರ್ವಹಿಸುವಂತೆಲ್ಲ ಮಾಡುವಲ್ಲಿ ಇದು ನೆರವಾಗಬಹುದು ಎನ್ನಲಾಗಿದೆ. ಈ ತಂತ್ರಜ್ಞಾನ ಇನ್ನಷ್ಟು ಬೆಳೆದರೆ ಮುಂದೆ ಆನ್‌ಲೈನ್ ಅಂಗಡಿಗಳಲ್ಲಿ ಬಟ್ಟೆ ಕೊಳ್ಳುವಾಗ ಫೋಟೊ ನೋಡುವುದರ ಜತೆಗೆ ಅದೆಷ್ಟು ನುಣುಪಾಗಿದೆಯೆಂದು ಮುಟ್ಟಿನೋಡುವುದು, ನಿಜಕ್ಕೂ ರೇಷ್ಮೆಯೋ ಪಾಲಿಯೆಸ್ಟರೋ ಎಂದು ಪರಿಶೀಲಿಸುವುದೂ ಸಾಧ್ಯವಾಗಬಹುದೋ ಏನೋ.

ಪಂಚೇಂದ್ರಿಯಗಳ ಪೈಕಿ ಕಣ್ಣು- ಕಿವಿಗಳ ಕೆಲಸವನ್ನು ಎಐ ಚೆನ್ನಾಗಿಯೇ ಕಲಿತುಬಿಟ್ಟಿದೆ. ಇನ್ನುಳಿದ ಇಂದ್ರಿಯಗಳ ಕೆಲಸವನ್ನೂ ಕಲಿಯುತ್ತಿದೆ. ಒಂದಕ್ಕಿಂತ ಹೆಚ್ಚು ಬಗೆಯ ಮಾಹಿತಿಯನ್ನು ಒಟ್ಟಿಗೆ ನಿಭಾಯಿಸುವ ಎಐ ತಂತ್ರಜ್ಞಾನವೂ (ಮಲ್ಟಿಮೋಡಲ್ ಎಐ) ಬಂದಿದೆ. ಇದನ್ನೆಲ್ಲ ಅದು ನಮ್ಮಷ್ಟು ಸೊಗಸಾಗಿ ಕಲಿತಿಲ್ಲದಿರಬಹುದು, ರುಚಿಗೆ ತಕ್ಕಷ್ಟು ಉಪ್ಪು ಎಂದರೆ ಅದಕ್ಕೆ ಅರ್ಥವಾಗದಿರಬಹುದು. ಆದರೆ, ಈ ಬೆಳವಣಿಗೆಗಳು ತಂತ್ರಜ್ಞಾನದ ಭವಿಷ್ಯದ ಕುರಿತು ಕುತೂಹಲವನ್ನು ಹೆಚ್ಚಿಸುತ್ತಿವೆ. ಮನುಷ್ಯನ ಒಟ್ಟಾರೆ ಸಾಮರ್ಥ್ಯಕ್ಕೆ ಇದೆಲ್ಲ ಹೇಗೆ ಪೂರಕವಾಗಬಹುದು ಎಂಬ ಪ್ರಶ್ನೆಯನ್ನೂ ಮೂಡಿಸಿದೆ.

ವಾಚಕರ ವಿಜಯ

ಕೈ ಸುಡುತ್ತಿರುವ ಬೆಲೆಗಳಿಗೆ ಯಾರು ಹೊಣೆ?

ರಾಜ್ಯಾದ್ಯಂತ ವಿದ್ಯುತ್ ಮತ್ತು ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯ ಸುಳಿಯಲ್ಲಿ ಸಿಲುಕಿರುವ ಸಾಮಾನ್ಯನಿಗೆ ಈಗ ತರಕಾರಿ ಬೆಲೆಗಳ ಏರಿಕೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂಬುದು ಜನಜನಿತ. ತರಕಾರಿ ಮಾರುಕಟ್ಟೆಯಲ್ಲಿ ಬೀನ್ಸ್ ಬೆಲೆ ಕೆ.ಜಿ.ಗೆ 200 ರೂ. ದಾಟಿರುವುದು ಮತ್ತು ಕ್ಯಾರೆಟ್ 90, ಬೆಂಡೆಕಾಯಿ 80 ರೂಪಾಯಿಗೆ ಮಾರಾಟವಾಗುತ್ತಿರುವುದು ಕೇವಲ ಪೂರೈಕೆಯ ಕೊರತೆಯಲ್ಲ ಬದಲಾಗಿ ಸರಕಾರದ ಯೋಜನಾಬದ್ಧ ವೈಫಲ್ಯ. ಕೇವಲ ಬಿಸಿಲು ಮತ್ತು ನೀರಿನ ಅಭಾವದ ನೆಪವೊಡ್ಡಿ ಸರಕಾರವು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ. ಈ ಬೆಲೆ ಏರಿಕೆಯು ಜನರ ಕೊಳ್ಳುವ ಶಕ್ತಿಯನ್ನು ಶೇ. 50ಕ್ಕಿಂತ ಹೆಚ್ಚು ಕುಂದಿಸಿದೆ. ಸರಕಾರವು ತಕ್ಷಣವೇ ದರ ಮಾಫಿಯಾವನ್ನು ಹತ್ತಿಕ್ಕಲು ಕಠಿಣ ಕಾನೂನು ತರಬೇಕು ಮತ್ತು ಶೈತ್ಯಾಗಾರಗಳ ಸಮರ್ಪಕ ಬಳಕೆಯ ಮೂಲಕ ಬೆಲೆ ಸ್ಥಿರೀಕರಣ ಮಾಡಬೇಕು. ಮಧ್ಯವರ್ತಿಗಳ ಹಾವಳಿ ತಡೆದು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವ ವ್ಯವಸ್ಥೆ ಜಾರಿ ಮಾಡಬೇಕು. ಕೂಡಲೇ ತರಕಾರಿ ಸಂತೆಗಳಲ್ಲಿ ಬೆಲೆ ನಿಯಂತ್ರಣಾ ಕ್ರಮ ಕೈಗೊಳ್ಳದಿದ್ದರೆ ಶ್ರೀಸಾಮಾನ್ಯರು ಬದುಕುವುದೇ ಕಷ್ಟವಾಗಲಿದೆ. ಈ ಕುರುಡು ಆಡಳಿತವು ಎಚ್ಚೆತ್ತುಕೊಂಡು ಜನಸಾಮಾನ್ಯರ ಪರವಾಗಿ ನಿಲ್ಲಬೇಕಿದೆ.

- ಡಾ. ವಿಜಯಕುಮಾರ ಎಚ್.ಕೆ., ರಾಯಚೂರು

ಪ್ರಜಾಪ್ರಭುತ್ವದ ಅಣಕ

ಪಶ್ಚಿಮ ಬಂಗಾಳದ ಸದ್ಯದ ರಾಜಕೀಯ ಬೆಳವಣಿಗೆಗಳು ಪ್ರಜಾಪ್ರಭುತ್ವದ ಆಶಯಗಳಿಗೆ ಹಿಡಿದ ಕೈಗನ್ನಡಿಯಂತಿದೆ. ಬಿಜೆಪಿ ಅಲ್ಲಿ ಬಹುಮತದಿಂದ ಗೆದ್ದರೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಅಧಿಕಾರದ ಕುರ್ಚಿಗೆ ಅಂಟಿಕೊಂಡಿರುವ ಹಠಮಾರಿ ಧೋರಣೆ ಖಂಡನೀಯ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದುಬಿದ್ದಿದ್ದರೂ, ಜನರ

ಆಕ್ರೋಶದ ನಡುವೆಯೂ ಸಿಎಂ ಸ್ಥಾನ ತ್ಯಜಿಸದಿರುವುದು ಅವರ ಅಧಿಕಾರ ಲಾಲಸೆಗೆ ಸಾಕ್ಷಿ. ಅಧಿಕಾರ ಎಂಬುದು ಜನರ ಸೇವೆಗೆ ಇರುವ ಅವಕಾಶವೇ ಹೊರತು ವೈಯಕ್ತಿಕ ಆಸ್ತಿಯಲ್ಲ, ನೈತಿಕ ಹೊಣೆ ಹೊತ್ತು ಇಳಿಯಬೇಕಾದವರು ಹಠ ಹಿಡಿಯುತ್ತಿರುವುದು ಮತದಾರರಿಗೆ ಮಾಡುತ್ತಿರುವ ದ್ರೋಹ. ಜನಾಗ್ರಹಕ್ಕೆ ಬೆಲೆ ಇಲ್ಲದಿದ್ದರೆ ಅದು ಸರ್ವಾಧಿಕಾರವೇ ಹೊರತು ಪ್ರಜಾಪ್ರಭುತ್ವವಲ್ಲ. ದೀದಿ ಇನ್ನಾದರೂ ಕುರ್ಚಿಯ ವ್ಯಾಮೋಹ ಬಿಟ್ಟು ಜನತೆಯ ತೀರ್ಪನ್ನು ಗೌರವಿಸಲಿ.

- ಚನ್ನಮಲ್ಲಿಕಾರ್ಜುನ ಹುನಗುಂದ

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಕಚೇರಿ ವಿಳಾಸ:- ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

ಎಲ್ ನಿನೊಗೆ ಹೆದರಲ್ಲ ಕೃಷಿ ವಲಯ

ಹಳ್ಳಿಗಳ ಕೆರೆಗಳಲ್ಲಿ ನೀರಿನ ಸಂಗ್ರಹ ಉತ್ತಮ | ರೈತರ ಆದಾಯ ಮೂಲಗಳಲ್ಲಿಯೂ ಹೆಚ್ಚಳ

ಹೊಸದಿಲ್ಲಿ: ಎಲ್ ನಿನೊ ಪ್ರಭಾವದಿಂದ ಈ ವರ್ಷ ದೇಶದಲ್ಲಿ ಮಳೆ ಪ್ರಮಾಣ ಕಡಿಮೆಯಾಗಬಹುದು ಎಂಬ ಅಂದಾಜಿನ ನಡುವೆಯೇ, ಕೃಷಿ ವಲಯದ ಮೇಲೆ ಅದರ ಪರಿಣಾಮ ಹೆಚ್ಚೇನೂ ಇರದು ಎಂದು ಹೇಳಲಾಗಿದೆ.

ದೇಶದಲ್ಲಿ ನೀರಾವರಿ ವಿಸ್ತರಣೆಯಾಗಿರುವುದು ಮತ್ತು ಕೃಷಿಯಲ್ಲಿ ವೈವಿಧ್ಯಮಯ ಬೆಳೆ ಪದ್ಧತಿ, ರೈತರು ಹೈನುಗಾರಿಕೆಯಂತಹ ಉಪಕಸುಬುಗಳ ಬಗ್ಗೆ ಹೆಚ್ಚು ಗಮನ ಹರಿಸಿರುವುದರಿಂದ ಕೃಷಿ ವಲಯಕ್ಕೆ ಹೆಚ್ಚು ಸಮಸ್ಯೆ ಕಾಣಿಸದು. ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ, ಸುಧಾರಿತ ಸಾಲ ಸೌಲಭ್ಯ, ಕೃಷಿಯೇತರ ಚಟುವಟಿಕೆಗಳಿಂದ ಗಳಿಕೆಯ ವರ್ಧನೆ - ಇದೆಲ್ಲವೂ ಕೃಷಿ ವಲಯಕ್ಕೆ 'ತಾಳಿಕೊಳ್ಳುವ ಸಾಮರ್ಥ್ಯ' ನೀಡಿವೆ. ಪ್ರಮುಖವಾಗಿ, ಎರಡು ವರ್ಷಗಳ ಉತ್ತಮ ಮಳೆಯಿಂದಾಗಿ ಗ್ರಾಮೀಣ ಭಾರತದ ಜಲಾಶಯಗಳಲ್ಲಿ ಸಾಕಷ್ಟು ನೀರಿನ ಸಂಗ್ರಹವಿದ್ದು, ಇದು ಹವಾಮಾನ ಏರುಪೇರುಗಳನ್ನು ಎದುರಿಸಲು ಸಹಕಾರಿಯಾಗಲಿದೆ ಎಂದು ಎಲಾರಾ ಕ್ಯಾಪಿಟಲ್ ಎಂಬ ಹಣಕಾಸು ಸಂಸ್ಥೆಯ ವರದಿ ತಿಳಿಸಿದೆ.

ನ್ಯಾಷನಲ್ ಓಷಿಯಾನಿಕ್ ಅಂಡ್ ಅಟ್ಮಾಸ್ಫಿರಿಯಕ್ ಅಡ್ಮಿನಿಸ್ಟ್ರೇಷನ್ (ಎನ್‌ಒಎಎ) ಪ್ರಕಾರ, ಜೂನ್ ಮತ್ತು ಆಗಸ್ಟ್ ನಡುವೆ ಎಲ್‌ನಿನೊ ಶೇ.70ರಷ್ಟು ಹೆಚ್ಚುವ ಸಾಧ್ಯತೆ ಇದೆ. ಈ ವರ್ಷದ ಕೊನೆ ತನಕ ಉಳಿಯುವ ಅವಕಾಶ ನಾಲ್ಕನೇ ಒಂದರಷ್ಟಿದೆ ಎಂದಿದೆ. ಭಾರತೀಯ ಹವಾಮಾನ ಇಲಾಖೆ ಮುಂಗಾರು ಮಳೆ ಪ್ರಮಾಣವನ್ನು ಶೇ. 92ರಷ್ಟು ಇರಲಿದೆ ಎಂದು ಮುನ್ಸೂಚನೆ ನೀಡಿದೆ.

ಬದಲಾಗುತ್ತಿರುವ ಟ್ರೆಂಡ್: 1982 ಮತ್ತು 2002ರ ನಡುವಿನ ಅವಧಿಯಲ್ಲಿ ಎಲ್ ನಿನೊ ಕೃಷಿ ಮೇಲೆ ನಕಾರಾತ್ಮಕ ಪರಿಣಾಮ ಬೀರಿತ್ತು. ಆದರೆ 2004ರ ನಂತರ ಮಳೆ ಕೊರತೆ ಇರುವ ಋತುಗಳಲ್ಲಿಯೂ ದೊಡ್ಡಮಟ್ಟದ ಪ್ರತಿಕೂಲ ಪರಿಣಾಮಗಳಾಗಿಲ್ಲ. ಗ್ರಾಮೀಣ ಕುಟುಂಬಗಳ ಆದಾಯದಲ್ಲಿ ಕೃಷಿಯ ಪಾಲು ಈಗ ಕೇವಲ ಮೂರನೇ ಒಂದು ಭಾಗದಷ್ಟಿದೆ. ಉಳಿದ ಆದಾಯವು ಪಶುಸಂಗೋಪನೆ, ಕುಟುಂಬದ ಸದಸ್ಯರ ಅನ್ಯ ಉದ್ಯೋಗಗಳಿಂದ ಬರುವ ಸಂಬಳ ಮತ್ತು ಇತರ ವ್ಯವಹಾರಗಳಿಂದ ಹರಿದು ಬರುತ್ತಿದೆ. ಇದಲ್ಲದೆ ಸಂಕಷ್ಟದ ಸಮಯದಲ್ಲಿ ಹಣಕಾಸಿನ ನೆರವಿಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಚಿನ್ನದ ಸಾಲಗಳ ಬಳಕೆಯೂ ಹೆಚ್ಚುತ್ತಿದೆ.

ಎಲ್ ನಿನೊ ಎಂದರೇನು?

ಎಲ್ ನಿನೊ ಎಂಬುದು ಪೆಸಿಫಿಕ್ ಮಹಾಸಾಗರದ ಉಷ್ಣವಲಯದ ಪ್ರದೇಶದಲ್ಲಿ ಸಮುದ್ರದ ಮೇಲ್ಮೈ ನೀರು ಅಸಹಜವಾಗಿ ಬೆಚ್ಚಗಾಗುವ ಒಂದು ಹವಾಮಾನ ಪ್ರಕ್ರಿಯೆಯಾಗಿದೆ. ಸ್ಪ್ಯಾನಿಷ್ ಭಾಷೆಯಲ್ಲಿ 'ಎಲ್ ನಿನೊ' ಎಂದರೆ ಬಾಲಕ ಯೇಸು ಎಂದರ್ಥ. ಸಾಮಾನ್ಯವಾಗಿ ಇದು ಕ್ರಿಸ್ಮಸ್ ಸಮಯದಲ್ಲಿ ಸಂಭವಿಸುವುದರಿಂದ ಈ ಹೆಸರು ಬಂದಿದೆ. ಎಲ್ ನಿನೊ ಉಂಟಾದಾಗ ಸಮುದ್ರದ ಗಾಳಿಯು ಪಶ್ಚಿಮದ ಕಡೆಗೆ ಬೀಸುತ್ತದೆ, ಇದು ಬೆಚ್ಚಗಿನ ನೀರನ್ನು ಏಷ್ಯಾದ ಕಡೆಗೆ ತಳ್ಳುತ್ತದೆ. ಗಾಳಿಯನ್ನು ದುರ್ಬಲಗೊಳಿಸುತ್ತದೆ. ಇದರಿಂದ ಆಗುವ ದೊಡ್ಡ ತೊಂದರೆ ಮುಂಗಾರು ಮಳೆ ಕೊರತೆ. ಇದು ದೇಶದ ಹಲವು ಭಾಗಗಳಲ್ಲಿ ತೀವ್ರ ಬರಗಾಲಕ್ಕೆ ಕಾರಣವಾಗಬಹುದು. ಸಾಮಾನ್ಯವಾಗಿ 7 ವರ್ಷಕ್ಕೊಮ್ಮೆ, ತೀರಾ ಅಪರೂಪದ ಸಂದರ್ಭಗಳಲ್ಲಿ ಎರಡು ವರ್ಷಕ್ಕೊಮ್ಮೆಯೂ ಎಲ್ ನಿನೊ ಸಂಭವಿಸಬಹುದು.

ಎಂಎಸ್ಎಂಇ, ವಿಮಾನಯಾನ ಸಂಸ್ಥೆಗಳಿಗೆ ಕೇಂದ್ರದ ಸಾಲ ಖಾತ್ರಿ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿಮಾನಯಾನ ಸಂಸ್ಥೆಗಳಿಗೆ ಸಾಲ ಸೌಲಭ್ಯ ಖಾತ್ರಿ ನೀಡಲು ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ. ಈ ಯೋಜನೆಯ ಒಟ್ಟು ವೆಚ್ಚ 18,100 ಕೋಟಿ ರೂಪಾಯಿಗಳಾಗುವ ನಿರೀಕ್ಷೆಯಿದೆ ಮತ್ತು ಇದು 2.25 ಲಕ್ಷ ಕೋಟಿ ರೂ. ಮೌಲ್ಯದ ಹೆಚ್ಚುವರಿ ಸಾಲದ ಹರಿವನ್ನು ಸೃಷ್ಟಿಸುವ ನಿರೀಕ್ಷೆಯಿದೆ ಎಂದು ಕೇಂದ್ರ ಸರಕಾರ ತಿಳಿಸಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಉಂಟಾಗಿರುವ ಸವಾಲುಗಳನ್ನು ಎದುರಿಸಲು ಹಾಗೂ ಸುಗಮ ವ್ಯವಹಾರಗಳಿಗೆ ಅನುವು ಮಾಡಿಕೊಡುವುದು ಈ ಯೋಜನೆಯ ಗುರಿಯಾಗಿದೆ.

ಈ ಯೋಜನೆ ಅಡಿಯಲ್ಲಿ 2025-26ರ ನಾಲ್ಕನೇ ತ್ರೈಮಾಸಿಕದಲ್ಲಿ ಬಳಸಲಾದ ಗರಿಷ್ಠ ಚಾಲ್ತಿ ಬಂಡವಾಳದ ಶೇ. 20 ರಷ್ಟು (ಗರಿಷ್ಠ 100 ಕೋಟಿ ರೂ.ಗೆ ಸೀಮಿತಗೊಳಿಸಲಾಗಿದೆ) ಹೆಚ್ಚುವರಿ ಸಾಲಕ್ಕೆ ಎಂಎಸ್‌ಎಂಇ ಎಲ್ಲ ವಲಯಗಳು ಅರ್ಹವಾಗಿರುತ್ತವೆ. ಎಂಎಸ್‌ಎಂಇ ಅಲ್ಲದ ಹಾಗೂ ವಿಮಾನ ಯಾನ ಸಂಸ್ಥೆಗಳ ಪೈಕಿ ಶೇ.90ರಷ್ಟು ಇದರ ವ್ಯಾಪ್ತಿಗೆ ಬರುತ್ತವೆ.

ವಿಮಾನಯಾನ ಸಂಸ್ಥೆಗಳಿಗೆ ನೀಡುವ ಸಾಲ ಅವುಗಳ ಗರಿಷ್ಠ ಚಾಲ್ತಿ ಬಂಡವಾಳದ ಶೇ.100 ರಷ್ಟು ಇರಬಹುದು, ಆದರೆ ಇದು ಪ್ರತಿ ಸಂಸ್ಥೆಗೆ ಗರಿಷ್ಠ 1,500 ಕೋಟಿ ರೂ.ಗೆ ಸೀಮಿತವಾಗಿದೆ ಮತ್ತು ಕೆಲವು ನಿರ್ದಿಷ್ಟ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಹತ್ತಿ ಇಳುವರಿ ಹೆಚ್ಚಳಕ್ಕೆ ₹5,659.22 ಕೋಟಿ

ಮುಂದಿನ ಐದು ವರ್ಷಗಳಲ್ಲಿ ಹತ್ತಿ ಇಳುವರಿಯನ್ನು ಹೆಚ್ಚಿಸುವ ಸಲುವಾಗಿ 5,659.22 ಕೋಟಿ ರೂ. ವೆಚ್ಚ ಮಾಡುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ. ಹತ್ತಿ ವಲಯದಲ್ಲಿನ ಅಡೆತಡೆಗಳು, ಕುಸಿಯುತ್ತಿರುವ ಬೆಳವಣಿಗೆ ಮತ್ತು ಗುಣಮಟ್ಟವನ್ನು ಹೆಚ್ಚಿಸಿ ಉತ್ಪಾದನೆಯನ್ನು ಏರಿಸುವ (2026-27ರಿಂದ 2030-31) ಗುರಿ ಹೊಂದಲಾಗಿದೆ. ಸರಕಾರದ ಇತ್ತೀಚಿನ ಅಂದಾಜಿನ ಪ್ರಕಾರ, 2025-26ರ ಬೆಳೆ ವರ್ಷದಲ್ಲಿ (ಜುಲೈ-ಜೂನ್) ಭಾರತದ ಹತ್ತಿ ಉತ್ಪಾದನೆಯು 291 ಲಕ್ಷ ಬೇಲ್‌ಗಳಷ್ಟಿತ್ತು. ಒಂದು ಬೇಲ್ ಎಂದರೆ 170 ಕೆ.ಜಿ.

ರೋಗ ಮತ್ತು ಕೀಟ ನಿರೋಧಕ ಶಕ್ತಿಯುಳ್ಳ ಅಧಿಕ ಇಳುವರಿ ನೀಡುವ ತಳಿ ಬೀಜಗಳ ಅಭಿವೃದ್ಧಿ, ರಾಜ್ಯ ಸರಕಾರಗಳು , ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಮೂಲಕ ಅಸ್ತಿತ್ವದಲ್ಲಿರುವ ಮತ್ತು ಇತ್ತೀಚಿನ ಬೆಳೆ ಉತ್ಪಾದನಾ ತಂತ್ರಜ್ಞಾನಗಳನ್ನು ವಿಸ್ತರಿಸುವ ಮೂಲಕ ಹತ್ತಿ ಇಳುವರಿಯನ್ನು ಸುಧಾರಿಸಲಾಗುತ್ತದೆ. ಇದರಿಂದ ಸುಮಾರು 32 ಲಕ್ಷ ರೈತರು ಪ್ರಯೋಜನ ಪಡೆಯಲಿದ್ದು, ಸ್ವಾವಲಂಬನೆಗೆ ದಾರಿಯಾಗಲಿದೆ. ಈ ಯೋಜನೆಯನ್ನು ಕೃಷಿ ಸಚಿವಾಲಯ ಮತ್ತು ಜವಳಿ ಸಚಿವಾಲಯ ಜಾರಿಗೆ ತರುತ್ತದೆ.

ನಿಸ್ಸಾನ್‌ನಿಂದ ಸಿಎನ್‌ಜಿ ರಿಟ್ರೋಫಿಟ್‌ಮೆಂಟ್ ಕಿಟ್

ಚಾಲನಾ ವೆಚ್ಚದಲ್ಲಿ ಗಣನೀಯ ಇಳಿಕೆ

ಕಾರುಗಳಲ್ಲಿ ಸ್ಥಳಾವಕಾಶಕ್ಕೆ ಯಾವುದೇ ತೊಂದರೆ ಇಲ್ಲ

ಗುರುಗ್ರಾಮ್(ಹೊಸದಿಲ್ಲಿ): ನಿಸ್ಸಾನ್ ಮೋಟಾರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಎನ್‌ಎಂಐಪಿಎಲ್)- ಆಲ್ ನ್ಯೂ ನಿಸ್ಸಾನ್ ಗ್ರಾವೈಟ್ ಕಾರುಗಳಿಗಾಗಿ ಸಿಎನ್‌ಜಿ ರಿಟ್ರೋಫಿಟ್ ಮೆಂಟ್ ಕಿಟ್ ಬಿಡುಗಡೆ ಮಾಡುತ್ತಿರುವುದಾಗಿ ಘೋಷಿಸಿದೆ. ಇದಕ್ಕೆ ಸರಕಾರದ ಅನುಮೋದನೆ ಕೂಡ ಸಿಕ್ಕಿದೆ. ಇದು ಸ್ಮಾರ್ಟ್ ಟ್ವಿನ್ ಸಿಲಿಂಡರ್ ತಂತ್ರಜ್ಞಾನವನ್ನು ಹೊಂದಿದೆ. ಸ್ಥಳಾವಕಾಶದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ಆರ್ಥಿಕವಾಗಿ ಮತ್ತು ಪರಿಸರ ಸ್ನೇಹಿಯಾದ ಪ್ರಯಾಣದ ಆಯ್ಕೆಯನ್ನು ಒದಗಿಸುವ ರೀತಿಯಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ.

ಇದು 7 ಸೀಟುಗಳಿರುವ ಕಾರ್‌ನ ಸ್ಥಳಾವಕಾಶಕ್ಕೆ ಯಾವುದೇ ತೊಂದರೆಯನ್ನು ಉಂಟು ಮಾಡುವುದಿಲ್ಲ. ಇದು ಚಾಲನಾ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಸುಲಲಿತ ಮತ್ತು ಆರಾಮದಾಯಕ ಪ್ರಯಾಣವನ್ನು ಖಾತ್ರಿಗೊಳಿಸುತ್ತದೆ. ಈ ಸಿಎನ್‌ಜಿ ಕಿಟ್ ಅನ್ನು ಮೋಟಿ ಜೆನ್ ಅಭಿವೃದ್ಧಿಪಡಿಸಿದೆ. ಅಧಿಕೃತ ಡೀಲ್‌ಗಳ ಮೂಲಕ ಕಿಟ್ ಅಳವಡಿಕೆಗೆ ಬೇಡಿಕೆ ಸಲ್ಲಿಸಬಹುದು. ಇದಕ್ಕೆ 3-ವರ್ಷ/ 1,00,000 ಕಿ.ಮೀ ವಾರಂಟಿ ನೀಡಲಾಗುತ್ತದೆ ಎಂದು ಎನ್‌ಎಂಐಪಿಎಲ್ ತಿಳಿಸಿದೆ.



"ಗ್ರಾಹಕರ ಬದಲಾಗುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ನಾವು ಸಾಗುತ್ತಿದ್ದೇವೆ. ಇದರ ಭಾಗವಾಗಿ ಈ ಕಿಟ್ ವಿನ್ಯಾಸಗೊಳಿಸಲಾಗಿದೆ," ಎಂದು ನಿಸ್ಸಾನ್ ಮೋಟಾರ್ ಇಂಡಿಯಾದ ಕೆಎಸ್‌ಎ, ಸಿಐಎಸ್ ಮತ್ತು ಇಂಡಿಯಾ ವಿಭಾಗದ ಉಪಾಧ್ಯಕ್ಷ ಥೆರ್ರಿ ಸಬ್ಬಾಗ್ ಹೇಳಿದ್ದಾರೆ. ನಿಸ್ಸಾನ್ ಮೋಟಾರ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ ಸೌರಭ್ ವತ್ಸ ಅವರು, "ಮ್ಯಾಗ್ನೈಟ್ ಸಿಎನ್‌ಜಿಗೆ ಗ್ರಾಹಕರಿಂದ ದೊರೆತ ಅತ್ಯುತ್ತಮ ಸ್ಪಂದನೆಯಿಂದ ಉತ್ತೇಜನಗೊಂಡು ಈಗ ಟ್ವಿನ್ ಸಿಲಿಂಡರ್‌ಅನ್ನು ಬಿಡುಗಡೆ ಮಾಡುತ್ತಿದ್ದೇವೆ ," ಎಂದಿದ್ದಾರೆ.

ಬೆಂಗಳೂರಿನಲ್ಲಿ ಬೆಳ್ಳಿ ಬೆಲೆ 10 ಸಾವಿರ ರೂ. ಕುಸಿತ

ಹೊಸದಿಲ್ಲಿ: ಬೆಂಗಳೂರಿನಲ್ಲಿ ಮಂಗಳವಾರ ಬೆಳ್ಳಿ ಬೆಲೆ ಕೆ.ಜಿಗೆ 10 ಸಾವಿರ ರೂ. ಇಳಿದು 2,55,000 ರೂ.ಆಗಿದೆ. ಮೇ 1 ಮತ್ತು 2ರಂದು ಕ್ರಮವಾಗಿ 5 ಸಾವಿರ ರೂ. ಹಾಗೂ 10 ಸಾವಿರ ರೂ. ಜಂಪ್ ಆಗಿದ್ದನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಇಳಿಕೆ ಇಲ್ಲವೇ ಸ್ಥಿರತೆಯನ್ನು ಕಾಯ್ದುಕೊಂಡಿದೆ ಎಂಬುದು ಗಮನಾರ್ಹ. ಹೊಸದಿಲ್ಲಿಯಲ್ಲಿ ಮಂಗಳವಾರ ಕೆ.ಜಿ. ಬೆಳ್ಳಿಗೆ 1,500 ರೂ. ಏರಿ, 2,51,000 ರೂ. ಆಗಿದೆ. ಅಪರಂಜಿ ಚಿನ್ನದ ಬೆಲೆಯಲ್ಲಿ ಕೇವಲ 300 ರೂ. ಕಡಿಮೆಯಾಗಿ 10 ಗ್ರಾಂಗೆ 1,52,500 ರೂ.ಆಗಿದೆ. ಬೆಂಗಳೂರಿನಲ್ಲಿ 440 ರೂ. ತಗ್ಗಿ 10 ಗ್ರಾಂ ಅಪರಂಜಿ ಚಿನ್ನದ ಧಾರಣೆ 1,49,180 ರೂ. ಆಗಿದೆ. ಇಷ್ಟೇ ತೂಕದ ಆಭರಣ ಚಿನ್ನದ ಬೆಲೆಯಲ್ಲಿ 400 ರೂ. ಕಡಿಮೆಯಾಗಿ 1,36, 750 ರೂ.ಆಗಿದೆ.

3 ರೈಲ್ವೆ ಯೋಜನೆಗಳಿಗೆ ಅಸ್ತು

ಹೊಸದಿಲ್ಲಿ: ಗುಂತಕಲ್-ವಾಡಿ ನಡುವೆ 3 ಹಾಗೂ 4ನೇ ರೈಲು ಮಾರ್ಗ ನಿರ್ಮಾಣ ಸೇರಿದಂತೆ 3 ರೈಲ್ವೆ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ.

ಈ ಕಾಮಗಾರಿಗಳಿಗೆ 23,437 ಕೋಟಿ ರೂ. ವೆಚ್ಚವಾಗಲಿದ್ದು 2030-31ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಈ ಮಾರ್ಗಗಳು ಕರ್ನಾಟಕ, ಆಂಧ್ರ, ತೆಲಂಗಾಣ, ಉತ್ತರ ಪ್ರದೇಶ, ರಾಜಸ್ಥಾನ ಹಾಗೂ ಮಧ್ಯಪ್ರದೇಶಗಳ 19 ಜಿಲ್ಲೆಗಳ ಮೂಲಕ ಹಾದು ಹೋಗಲಿವೆ. ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಮಠ ಸೇರಿದಂತೆ ಹಲವು ಪ್ರಮುಖ ಯಾತ್ರಾ ಸ್ಥಳಗಳಿಗೆ ರೈಲ ಸಂಪರ್ಕವನ್ನು ಹೆಚ್ಚಿಸುವ ಗುರಿ ಈ ಯೋಜನೆಗಳಿಗಿದೆ.

ಇರಾಕ್‌ನಿಂದ ತೈಲ ಖರೀದಿಗೆ ಭಾರಿ ಆಫರ್

ಬ್ಯಾರೆಲ್‌ಗೆ 33.40 ಡಾಲರ್ ರಿಯಾಯಿತಿ

ಹೊಸದಿಲ್ಲಿ: ಇರಾಕ್‌ನ ಸರಕಾರಿ ತೈಲ ಕಂಪನಿ ಸೊಮೊ (ಎಸ್‌ಒಎಂಒ) ಕಚ್ಚಾ ತೈಲದ ಮೇಲೆ ಬ್ಯಾರೆಲ್‌ಗೆ 33.40 ಡಾಲರ್ ತನಕ ರಿಯಾಯಿತಿ ನೀಡುವುದಾಗಿ ಘೋಷಿಸಿದೆ.

ಮೇ ತಿಂಗಳಿನಲ್ಲಿ ತೈಲ ಖರೀದಿಸುವವರಿಗೆ ಈ ರಿಯಾಯಿತಿ ಅನ್ವಯವಾಗುತ್ತದೆ. ಇರಾಕ್‌ನ ತೈಲ ಕಂಪನಿ ಸೊಮೊ(ಎಸ್‌ಒಎಂಒ) ಪ್ರಕಾರ ಮೇ 1-10ರ ನಡುವೆ ಕಚ್ಚಾ ತೈಲಕ್ಕೆ ಬ್ಯಾರೆಲ್‌ಗೆ 33.40 ಡಾಲರ್ ರಿಯಾಯಿತಿ ಸಿಗಲಿದೆ. ಮೇ 11 ನಂತರ ರಿಯಾಯಿತಿ ಪ್ರಮಾಣ 26 ಡಾಲರ್ ಇಳಿಕೆಯಾಗಲಿದೆ ಎಂದು ಘೋಷಿಸಿದೆ.

ಆದರೆ, ಅಗ್ಗದ ತೈಲವನ್ನು ಖರೀದಿಸುವವರಿಗೆ ಒಂದು ಸಂಭವನೀಯ ಅಪಾಯವೂ ಇದೆ. ತೈಲ ಟ್ಯಾಂಕರ್‌ಗಳು ಹರ್ಮುಜ್ ಜಲಸಂಧಿಯ ಮೂಲಕವೇ ಹಾದು ಹೋಗಬೇಕು. ಈ ರಿಸ್ಕ್ ಖರೀದಿದಾರರಿಗೆ ಸೇರಿದ್ದು ಸ್ಪಷ್ಟಪಡಿಸಿದೆ. ಫೆಬ್ರವರಿ ಅಂತ್ಯದಲ್ಲಿ ಅಮೆರಿಕ-ಇರಾನ್ ಸಂಘರ್ಷ ಆರಂಭವಾಯಿತು. ಅಂದಿನಿಂದ ಹರ್ಮುಜ್ ಮೂಲಕ ಹಡಗುಗಳ ಸಂಚಾರ ಬಹುತೇಕ ನಿಲುಗಡೆಯಾಗಿದೆ. ಇದರಿಂದ ಹತ್ತಾರು ದೇಶಗಳು ಇಂಧನ ಬಿಕ್ಕಟ್ಟಿಗೆ ಸಿಲುಕಿವೆ.

"ಇರಾಕ್‌ನಿಂದ ತೈಲ ಖರೀದಿ ಮಾಡುವವರೇ ಅದನ್ನು ತಮ್ಮ ಬೇಕಾದ ತಾಣಗಳಿಗೆ ಸಾಗಿಸಿಕೊಳ್ಳುವ ಹೊಣೆ ಹೊತ್ತುಕೊಳ್ಳಬೇಕಾಗುತ್ತದೆ. ಹಾದಿಯಲ್ಲಿ ಉಂಟಾಗುವ ಯಾವುದೇ ರೀತಿಯ ಅಡಚಣೆಗಳಿಗೆ ನಾವು ಹೊಣೆಗಾರರಲ್ಲ, ಅನಿರೀಕ್ಷಿತ ಸಂದರ್ಭ ಮತ್ತು ಸನ್ನಿವೇಶಗಳಲ್ಲಿ ಕಂಪನಿಯೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಮುರಿಯುವಂತಿಲ್ಲ," ಎಂದು ಸೊಮೊ ಹೇಳಿದೆ.

ಭಾರತಕ್ಕೆ ಹೆಚ್ಚು ಅನುಕೂಲ

ಭಾರತಕ್ಕೆ ಲಾಭವೇ?

ಕೆಪ್ಲರ್ ಪ್ರಕಾರ ಫೆಬ್ರವರಿ 2026ರಲ್ಲಿ ಭಾರತಕ್ಕೆ ತೈಲ ಪೂರೈಸುವ ಅಗ್ರ 3 ದೇಶಗಳಲ್ಲಿ ಇರಾಕ್ ಕೂಡ ಸೇರಿದೆ.

ರಷ್ಯಾ ಮೊದಲ ಸ್ಥಾನದಲ್ಲಿದ್ದು ಪ್ರತಿದಿನ 1.042 ದಶಲಕ್ಷ ಬ್ಯಾರೆಲ್ ತೈಲವನ್ನು ಪೂರೈಸಿದೆ. ಸೌದಿ ಅರೇಬಿಯಾ ಎರಡನೇ ಸ್ಥಾನದಲ್ಲಿದೆ. ಇದು 1.009 ದಶಲಕ್ಷ ಬ್ಯಾರೆಲ್ ತೈಲವನ್ನು ಪೂರೈಸಿದೆ. ಇರಾಕ್ 0.981 ದಶಲಕ್ಷ ಬ್ಯಾರೆಲ್ ಪೂರೈಕೆಯೊಂದಿಗೆ ಮೂರನೇ ಸ್ಥಾನದಲ್ಲಿದೆ. ತೈಲ ಪೂರೈಸುವ ಇತರ ದೇಶಗಳಲ್ಲಿ ಸಂಯುಕ್ತ ಅರಬ್ ಒಕ್ಕೂಟ (ಯುಎಇ), ಅಮೆರಿಕ, ನೈಜೀರಿಯಾ ಸೇರಿವೆ.

ಷೇರುಪೇಟೆ ಮತ್ತೆ ಚಂಚಲ

ಮುಂಬಯಿ: ಯುಎಇ ತೈಲ ಸಂಸ್ಕರಣಾಗಾರಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿರುವುದು ಭಾರತೀಯ ಷೇರುಪೇಟೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಷೇರುಪೇಟೆ ಇಡೀದಿನ ಚಂಚಲವಾಗಿತ್ತು . ಅಂತಿಮವಾಗಿ ಕುಸಿತದೊಂದಿಗೆ ದಿನದ ವಹಿವಾಟು ಮುಗಿಸಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 251.61 ಅಂಕ ಇಳಿದು 77,017.79ರಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 86.50 ರಷ್ಟು ಕುಗ್ಗಿ 24,032.80ರಲ್ಲಿ ವಹಿವಾಟು ಕೊನೆಗೊಂಡಿತು. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಸೋಮವಾರ ಮಾರಾಟಕ್ಕಿಂತ ಖರೀದಿಯಲ್ಲಿ ಹೆಚ್ಚು ಉತ್ಸಾಹ ತೋರಿದರು. 2,835.62 ಕೋಟಿ ರೂ. ಮೌಲ್ಯದ ಈಕ್ವಿಟಿಗಳನ್ನು ಖರೀದಿಸಿದರು.

ಫುಜೈರಾ ಪೆಟ್ರೋಲಿಯಂ ವಲಯದ ಮೇಲೆ ಇರಾನ್ ದಾಳಿ

ಮೂವರು ಭಾರತೀಯರಿಗೆ ಗಾಯ

ದಾಳಿ ಖಂಡಿಸಿದ ಭಾರತ

ದುಬೈ: ಯುಎಇ (ಸಂಯುಕ್ತ ಅರಬ್ ಎಮಿರೇಟ್ಸ್) ಫುಜೈರಾ ಪೆಟ್ರೋಲಿಯಂ ಕೈಗಾರಿಕಾ ವಲಯದ ಮೇಲೆ ಇರಾನ್ ಸೋಮವಾರ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿದೆ. ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದು, ಇದನ್ನು ಭಾರತ ವಿದೇಶಾಂಗ ವ್ಯವಹಾರಗಳ ಸಚಿವಾಲಯ ದೃಢಪಡಿಸಿದೆ.

ಏ.8ರ ಕದನ ವಿರಾಮದ ನಂತರ ಇರಾನ್ ಸೇನೆ ಐಆರ್‌ಜಿಸಿಯಿಂದ ಕೊಲ್ಲಿ ರಾಷ್ಟ್ರಗಳಲ್ಲಿ ನಡೆದ ಮೊದಲ ದಾಳಿ ಇದಾಗಿದೆ. ಫುಜೈರಾ ಪೆಟ್ರೋಲಿಯಂ ವಲಯ ಗುರಿಯಾಗಿಸಿ 15 ಕ್ಷಿಪಣಿಗಳನ್ನು ಇರಾನ್ ಹಾರಿಸಿದೆ. ತೈಲ ಘಟಕದಲ್ಲಿ ಬೆಂಕಿ ಹೊತ್ತಿಕೊಂಡಿದ್ದು ಅಪಾರ ನಷ್ಟ ಉಂಟಾಗಿದೆ. ವಾಣಿಜ್ಯ ಹಡಗುಗಳ ಸಂಚಾರಕ್ಕೆ ಹರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಅಮೆರಿಕ ಪ್ರಯತ್ನಿಸಿದ ಬೆನ್ನಲ್ಲೇ ಈ ದಾಳಿ ನಡೆದಿದ್ದು, ಇರಾನ್-ಅಮೆರಿಕ ನಡುವಿನ ಸಂಘರ್ಷ ಮತ್ತೆ ಭುಗಿಲೇಳುವಂತೆ ಮಾಡಿದೆ.



"ಫುಜೈರಾ ಪೆಟ್ರೋಲಿಯಂ ಕೈಗಾರಿಕಾ ವಲಯದ ಮೇಲೆ ನಡೆದ ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದು, ಈ ದಾಳಿ ಖಂಡನೀಯ. ನಾಗರಿಕ ಮೂಲಸೌಕರ್ಯ ಮತ್ತು ಮುಗ್ಧ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ದಾಳಿಯನ್ನು ತಕ್ಷಣವೇ ನಿಲ್ಲಿಸಬೇಕು," ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ. ಪಶ್ಚಿಮ ಏಷ್ಯಾದ್ಯಂತ ಶಾಂತಿ ಮತ್ತು ಸ್ಥಿರತೆಯನ್ನು ಪುನಃಸ್ಥಾಪಿಸುವ ನಿಟ್ಟಿನಲ್ಲಿ ಮಾತುಕತೆ ಮತ್ತು ರಾಜತಾಂತ್ರಿಕತೆಗೆ ಭಾರತ ಬೆಂಬಲ ನೀಡುತ್ತಿದೆ ಎಂದು ಸಚಿವಾಲಯ ಹೇಳಿದೆ.

ಪ್ರಾಜೆಕ್ಟ್ ಫ್ರೀಡಂ, 6 ಬೋಟ್ ಧ್ವಂಸ: ಈ ಮಧ್ಯೆ, ಯುಎಸ್ ಧ್ವಜ ಹೊಂದಿರುವ ಎರಡು ವಾಣಿಜ್ಯ ಹಡಗುಗಳು ಯಶಸ್ವಿಯಾಗಿ ಹರ್ಮುಜ್ ಜಲಸಂಧಿಯನ್ನು ದಾಟಿವೆ. ಪ್ರಾಜೆಕ್ಟ್ ಫ್ರೀಡಂ ಹೆಸರಿನ ಈ ಕಾರ್ಯಾಚರಣೆ ವೇಳೆ ಇರಾನ್‌ನ ಆರು ಸಣ್ಣ ಬೋಟ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಅಮೆರಿಕ ಹೇಳಿಕೊಂಡಿದೆ.

ಕ್ರೂಸ್ ಶಿಪ್‌ನಲ್ಲಿ ಹಂಟಾ ವೈರಸ್

ಅಟ್ಲಾಂಟಿಕ್ ಸಾಗರದಲ್ಲಿನ ಐಷಾರಾಮಿ ಕ್ರೂಸ್ ಶಿಪ್‌ನಲ್ಲಿ 'ಹಂಟಾವೈರಸ್' ಹರಡಿರುವ ಶಂಕೆ ವ್ಯಕ್ತವಾಗಿದ್ದು, ಪ್ರಯಾಣಿಕರು ಮತ್ತು ಸಿಬ್ಬಂದಿಗಳಲ್ಲಿ ಸಾವು-ನೋವು ವರದಿಯಾಗಿರುವುದು ಜಾಗತಿಕ ಕಳವಳಕ್ಕೆ ಕಾರಣವಾಗಿದೆ. ತನಿಖೆ ಮುಂದುವರಿಯುತ್ತಿದ್ದು, ಸಾರ್ವಜನಿಕ ಅಪಾಯ ಕಡಿಮೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಪಶ್ಚಿಮ ಆಫ್ರಿಕಾದ ಕೇಪ್ ವರ್ಡೆ ಕರಾವಳಿಯ ಬಳಿ ಇರುವ 'ಎಂವಿ ಹೊಂಡಿಯಸ್' ಎಂಬ ಐಷಾರಾಮಿ ಎಕ್ಸ್‌ಪೆಡಿಶನ್ ಕ್ರೂಸ್ ಹಡಗಿನಲ್ಲಿ ಹಂಟಾ ವೈರಸ್ ಹರಡಿರುವ ಸಾಧ್ಯತೆಯನ್ನು ಆರೋಗ್ಯ ಅಧಿಕಾರಿಗಳು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯು ಏಳು ಪ್ರಕರಣಗಳನ್ನು ದೃಢಪಡಿಸಿದೆ.

ಮೋದಿ ಖಂಡನೆ

"ಯುಎಇ ಮೇಲೆ ಇರಾನ್ ನಡೆಸಿದ ಡ್ರೋನ್ ಹಾಗೂ ಕ್ಷಿಪಣಿ ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿರುವುದು ದುಃಖಕರ. ಈ ದಾಳಿಯನ್ನು ಭಾರತ ಖಂಡಿಸುತ್ತದೆ," ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. "ಇಂಥ ಸಂಕಷ್ಟದ ಸಂದರ್ಭದಲ್ಲಿ ಭಾರತವು ಯುಎಇ ಜತೆ ದೃಢ ಬೆಂಬಲವಾಗಿ ನಿಲ್ಲಲಿದೆ. ಹರ್ಮುಜ್ ಜಲಸಂಧಿಯಲ್ಲಿ ಅಡ್ಡಿಯಿಲ್ಲದೇ ಹಡಗುಗಳ ಸಂಚಾರವು ಪ್ರಾದೇಶಿಕ ಶಾಂತಿ, ಸ್ಥಿರತೆ ಹಾಗೂ ಜಾಗತಿಕ ಇಂಧನ ಭದ್ರತೆಗೆ ಅಗತ್ಯವಾಗಿದೆ," ಎಂದಿದ್ದಾರೆ.

ಚೀನಾ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 21 ಸಾವು

ಬೀಜಿಂಗ್: ಚೀನಾದ ಹುನಾನ್ ಪ್ರಾಂತ್ಯದಲ್ಲಿನ ಪಟಾಕಿ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ 21 ಜನ ಮೃತಪಟ್ಟು, 61 ಮಂದಿ ಗಾಯಗೊಂಡಿದ್ದಾರೆ.

ಘಟನಾ ಸ್ಥಳಕ್ಕೆ ಸುಮಾರು 500 ತುರ್ತು ಸೇವಾ ಸಿಬ್ಬಂದಿಯನ್ನು ನಿಯೋಜಿಸಿ, ರಕ್ಷಣಾ ಕಾರ್ಯ ನಡೆಸಲಾಯಿತು. ಅವಶೇಷಗಳ ಅಡಿಯಲ್ಲಿ ಸಿಲುಕಿರುವವರನ್ನು ಪತ್ತೆಹಚ್ಚಲು ರೋಬೋಟ್‌ಗಳನ್ನು ಬಳಸಲಾಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಕಾರ್ಖಾನೆಯ ಸುತ್ತಲಿನ 3 ಕಿ.ಮೀ. ವ್ಯಾಪ್ತಿಯ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ.

ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಅಪಘಾತದ ಬಗ್ಗೆ ಸಮಗ್ರ ತನಿಖೆಗೆ ಆದೇಶಿಸಿದ್ದಾರೆ. ಪ್ರಮುಖ ಕೈಗಾರಿಕೆಗಳಲ್ಲಿನ ಅಪಾಯಗಳನ್ನು ನಿಯಂತ್ರಿಸಲು ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಕಂಪನಿಯ ಅಧಿಕಾರಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕ-ರೈಡ್
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ಕ-ರೈಡ್ K RIDE
ನೊಂದಣಿ ಕಚೇರಿ : ಸಂಪರ್ಕ ಸೌಧ, 1ನೇ ಮಹಡಿ, ಒರಾಯನ್ ಮಾಲ್ ಎದುರು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು-560010 Email ID- dgm@kride.in
ಸಂಖ್ಯೆ KRIDE/HR/195/ಖಾಲಿ ಹುದ್ದೆಯ ಅಧಿಸೂಚನೆ/06/2026 05.05.2026
ನೇಮಕಾತಿ ಅಧಿಸೂಚನೆ ಸಂಖ್ಯೆ 19/2026
ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮವಾದ ಕೆ-ರೈಡ್, ಬೆಂಗಳೂರು ಉಪನಗರ ರೈಲು ಯೋಜನೆ ಮತ್ತು ರೈಲ್ವೆ ದ್ವಿಪಥೀಕರಣ ಯೋಜನೆಗಳು ಮತ್ತು ಇತರ ರೈಲ್ವೆ ದ್ವಿಪಥೀಕರಣ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದು, ನಿಯೋಜನೆ ಮೇರೆಗೆ (Deputation) ಈ ಕೆಳಗಿನ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೂಚನೆ ಸಂಖ್ಯೆ	ಹುದ್ದೆ	ಹುದ್ದೆಗಳ ಸಂಖ್ಯೆ	ಗ್ರೇಡ್
19/2026	ಜಂಟಿ ಪ್ರಧಾನ ವ್ಯವಸ್ಥಾಪಕರು (ರೋಲಿಂಗ್ ಸ್ಟಾಕ್)	1	E6

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 04/06/2026.
ವಿವರವಾದ ಅರ್ಹತಾ ನಿಯಮಗಳು ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ಭೇಟಿ ನೀಡಿ:
https://kride.in/careers-in-k-ride/.
DIPR/CP/YC/507/2026-27 ಸಹಿ/- ಪ್ರಧಾನ ವ್ಯವಸ್ಥಾಪಕರು/ಮಾನವ ಸಂಪನ್ಮೂಲ (ಐ/ಸಿ)
KridePrm | Kride Bsrp | kride_bsrp | KRIDE,BSRP

ನೈಋತ್ಯ ರೈಲ್ವೆ
ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 17 ಏಪ್ರಿಲ್, 2026
S.O.1931(E)– ರೈಲ್ವೆ ಕಾಯ್ದೆ, 1989 (1989 ರ 24)ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್ 2ರ ಷರತ್ತು 7A ನಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಕೆಳಗಿನ ಕೋಷ್ಟಕದ ಕಾಲಮ್ (4) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ **'ಸಮರ್ಥ ಪ್ರಾಧಿಕಾರ'** ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ **'ಮಧ್ಯಸ್ಥರು'** ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಗಿನ ಕೋಷ್ಟಕದ ಕಾಲಮ್ (3)ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗೆ ಸಂಬಂಧಿಸಿದ ವಿಶೇಷ ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಂತಹ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನ, ನಿರ್ವಹಣೆ, ನಿರ್ವಹಣೆ ಮತ್ತು ಕಾರ್ಯಾಚರಣೆಯ ಸಾರ್ವಜನಿಕ ಉದ್ದೇಶಕ್ಕಾಗಿ.

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರ
1	ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು, ಕೊಪ್ಪ ಗ್ರಾಮ, ತುಮಕೂರು-ಅರಸೀಕೆರೆ (ಟಿಕೆ-ಎಎಸ್‌ಕೆ) ವಿಭಾಗದಲ್ಲಿ ಎಲ್‌ಸಿ ಸಂಖ್ಯೆ 81ರ ಬದಲಿಗೆ ಎಲ್‌ಎಚ್‌ಎಸ್ ಹೊಂದಿರುವ ರಸ್ತೆ ಮೇಲ್ಸೇತುವೆ ನಿರ್ಮಾಣ	ತುಮಕೂರು	ವಿಶೇಷ ಭೂಸ್ವಾಧೀನ ಅಧಿಕಾರಿ, ತುಮಕೂರು ರಾಯದುರ್ಗ ಯೋಜನೆ, ತುಮಕೂರು ರೈಲ್ವೆ	ಪ್ರಾದೇಶಿಕ ಆಯುಕ್ತರು, ಬೆಂಗಳೂರು

[F.No.W.271/CN/BNC/2026-27 Land SRP/1727]
ಹೆಚ್ಚಿನ ಮಾಹಿತಿಗಳಿಗಾಗಿ: https://egazette.gov.in ಲಾಗಿನ್ ಮಾಡಿ
ಪ್ರದೀಪ್ ಪುರಿ
PUB/89/AAD360/PRB/SWR/2026-27 ಮುಖ್ಯ ಅಭಿಯಂತರರು/ನಿರ್ಮಾಣ/ಬೆಂಗಳೂರು ದಂಡು
ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | @SWRAILWAYHQ | @sw_railways

ಕರ್ನಾಟಕ ಸರ್ಕಾರ
ಹುಳದೇನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ
ಮಾಲೂರು ತಾಲ್ಲೂಕು ಕೋಲಾರ ಜಿಲ್ಲೆ
ಇ-ಮೇಲ್ ವಿಳಾಸ: huladenahalligp@gmail.com
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸೇವಾ ಮತ್ತು ಸರಬರಾಜು ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27 ದಿ: 30-04-2026
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KG-1, 2 & K/C-1 ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆ.ಪಿ.ಪಿ.ಪಿ ದ್ವಿ-ಲಕೋಟೆ ಪದ್ಧತಿಯಲ್ಲಿ (Two Cover System) ಸೂಕ್ತ ದರ್ಜೆಯಲ್ಲಿ, ನೊಂದಾಯಿಸಿರುವ ಅಧಿಕೃತ ಸರಬರಾಜುದಾರರಿಂದ ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು ಹುಳದೇನಹಳ್ಳಿ ಗ್ರಾಮ ಪಂಚಾಯ್ತಿಗೆ ಸಂಬಂಧಪಟ್ಟಂತೆ 2 ಸಂಖ್ಯೆ ರೂ 6.00 ಲಕ್ಷಗಳಿಂದ 9.50 ಲಕ್ಷಗಳವರೆಗೆ ಸಾಮಾಗ್ರಿ ಪೂರೈಕೆ ಮಾಡಲು ಸರಬರಾಜು ಮತ್ತು ಪಂಪು ಮೋಟಾರ್ ನಿರ್ವಹಣೆಯ 1 ಸಂಖ್ಯೆ ರೂ 8.00 ಲಕ್ಷಗಳ ಸೇವಾ ಟೆಂಡರುಗಳನ್ನು ಆಹ್ವಾನಿಸುತ್ತಿದ್ದು, ಇ.ಎಂ.ಡಿ. ಮತ್ತು ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ ಮುಂತಾದ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ https://kppp.karnataka.gov.in ಮುಖಾಂತರ ಪಡೆದು ಟೆಂಡರಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಕೆ.ಪಿ.ಪಿ.ಪೋರ್ಟಾಲ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಆರೋಹಿಸಿ ಸಲ್ಲಿಸಲು ಕೊನೆಯ ದಿನಾಂಕ: 01-05-2026 ರಿಂದ 16-05-2026 ರ ಸಂಜೆ 4.00 ಗಂಟೆವರೆಗೆ 2)ಟೆಂಡರಗಳನ್ನು ಕೆ.ಪಿ.ಪಿ.ಪೋರ್ಟಾಲ್‌ನಲ್ಲಿ ತೆರೆಯುವ ದಿನಾಂಕ: 18-05-2026 ರಂದು ಬೆಳ್ಳಗೆ 11.00 ಗಂಟೆಗೆಂದು ನಿಗದಿ ಪಡಿಸಲಾಗಿದೆ. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಸಹಾಯವಾಣಿ ದೂರವಾಣಿ ಸಂಖ್ಯೆ: +91-8046010000, +91-8068948777 ಅನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/- ಆಡಳಿತಾಧಿಕಾರಿಗಳು, ಹುಳದೇನಹಳ್ಳಿ ಗ್ರಾಮ ಪಂಚಾಯಿತಿ ಮಾಲೂರು ತಾಲ್ಲೂಕು.
ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಹುಳದೇನಹಳ್ಳಿ ಗ್ರಾಮ ಪಂಚಾಯಿತಿ ಮಾಲೂರು ತಾಲ್ಲೂಕು.

MSME ತಂತ್ರಜ್ಞಾನ ಅಭಿವೃದ್ಧಿ ಕೇಂದ್ರ
ಪ್ರಕ್ರಿಯೆ ಮತ್ತು ಉತ್ಪನ್ನ ಅಭಿವೃದ್ಧಿ ಕೇಂದ್ರ, ಆಗ್ರಾ
ಭಾರತ ಸರ್ಕಾರದ MSME ಸಚಿವಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆ
ಫೌಂಡ್ರಿ ನಗರ, ಆಗ್ರಾ - 282006 (U.P.)
EFC-ಬೆಂಗಳೂರು
PPDC
02 ದಿನಗಳ ಆಫ್‌ಲೈನ್ ತರಬೇತಿ
ಚಿನ್ನದ ಮೌಲ್ಯಮಾಪನ
ದಿನಾಂಕ ಮತ್ತು ಸಮಯ: ಮೇ 09 ಮತ್ತು 10, 2026 (ಸಮಯ: ಬೆಳಿಗ್ಗೆ 10 - ಸಂಜೆ 04)
ಕೋರ್ಸ್ ಶುಲ್ಕ: 6500/- (ಜಿಎಸ್‌ಟಿ ಸೇರಿದಂತೆ)
ಕೋರ್ಸ್ ವಿವರಗಳು: • ಚಿನ್ನದ ಆಭರಣ ಮೌಲ್ಯಮಾಪಕರು ಅನುಸರಿಸಬೇಕಾದ ನಿಯಮಗಳು. • ಚಿನ್ನದಲ್ಲಿರುವ ಕಲ್ಮಶಗಳನ್ನು ಪತ್ತೆಹಚ್ಚುವ ವಿಧಾನ • ಚಿನ್ನದ ಗುಣಮಟ್ಟವನ್ನು ನಿರ್ಣಯಿಸುವ ವಿಧಾನ.• ಮೂಲ ಲೋಹಶಾಸ್ತ್ರ.• ಚಿನ್ನದ ಆಭರಣಗಳು, ಕಲ್ಲಿನ ಆಭರಣಗಳಿಗೆ ಅವುಗಳ ಸ್ವಭಾವಕ್ಕೆ ಅನುಗುಣವಾಗಿ ಕ್ರೆಡಿಟ್ ನೀಡುವ ವಿಧಾನ.• ಸ್ಪರ್ಶ ಕಲ್ಲಿನಿಂದ ಗುಣಮಟ್ಟವನ್ನು ನಿರ್ಣಯಿಸುವ ವಿಧಾನ.• ಆಭರಣ ಅಂಗಡಿಗಳಲ್ಲಿ ಉದ್ಯೋಗಾವಕಾಶ ಮತ್ತು ವ್ಯವಹಾರವನ್ನು ಪ್ರಾರಂಭಿಸುವುದು.• ಈ ತರಬೇತಿಯು ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳಲ್ಲಿ ಚಿನ್ನದ ಆಭರಣ ಮೌಲ್ಯಮಾಪಕರಾಗಿ ಕೆಲಸ ಮಾಡಲು ಮತ್ತು ಗುಣಮಟ್ಟದ ಆಭರಣಗಳನ್ನು ಖರೀದಿಸಲು ನಿಮಗೆ ಸಹಾಯ ಮಾಡುತ್ತದೆ.
ಸ್ಥಳ: ಹವಾನಾ ಯುಕ್ತಾ ಸೊಲ್ಯೂಶನ್ಸ್, 302, 66ನೇ ಅಡ್ಡರಸ್ತೆ, 5 ಬ್ಲಾಕ್, ರಾಜಾಜಿನಗರ, ಬೆಂಗಳೂರು, ಕರ್ನಾಟಕ-560010.
ಹೆಚ್ಚಿನ ವಿವರಗಳಿಗಾಗಿ
9626516812 / 6363055419 / 9750747571
ವೆಬ್‌ಸೈಟ್: www.ppdcagra.dcmsme.gov.in
ಪ್ರಮಾಣೀಕರಣವನ್ನು ನೀಡಲಾಗುವುದು

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099.
ದೂ.: 080-27835122 ಫ್ಯಾಕ್ಸ್ : 080-27836569 www.anekal.tpa.gov.in www.e-vinyasa.kar.nic.in
ಸಂಖ್ಯೆ: ಆಯೋಪ್ರಾ/ಭೂ.ಬ/96/2025-26 ದಿನಾಂಕ: 02.05.2026
ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)
ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ:03.09.2014ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ-ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೋದಂಡರಾಮಯ್ಯ ಮತ್ತು ಶ್ರೀ ಎಸ್.ಆರ್. ನಾರಾಯಣ	ಆನೇಕಲ್	ಸರ್ಜಾಪುರ	ಸೊಳ್ಳೇಪುರ	46	2-00.12	ಉದ್ಯಾನವನ ಮತ್ತು ಬಯಲು ಜಾಗ	ವಸತಿ

ಸಹಿ/-,
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
ವಾಸಾಸಂಇ/ವಾಪ್ರ/ಎಲ್‌ಸಿ/520/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗೇಪಲ್ಲಿ-561207
E-mail:apmcbagepalli2007@gmail.com
ಕ್ರಮ ಸಂಖ್ಯೆ:ಕೃಮಾಇ:ಕೃಉಮಾಸ(ಬಾಪ):12:2026-27 ದಿನಾಂಕ: 30.04.2026
ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಬಾಗೇಪಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಉಪ-ಮಾರುಕಟ್ಟೆ ಪ್ರಾಂಗಣಗಳಲ್ಲಿ 2026-27 ನೇ ಸಾಲಿಗೆ ಸಮಿತಿಯ ಪ್ರಾಂಗಣಗಳ ಸಂರಕ್ಷಣೆ (ಸ್ಥಿರಾಸ್ತಿ-ಚರಾಸ್ತಿಗಳ ರಕ್ಷಣೆ) ಮತ್ತು ಪ್ರಾಂಗಣದ ಸ್ವಚ್ಛತೆ ನಿರ್ವಹಣೆ ಕಾರ್ಯ ಹಾಗೂ ಇನ್ನಿತರೆ ಸಮಿತಿಯ ಕಛೇರಿ ಕೆಲಸ ಕಾರ್ಯಗಳಿಗೆ 05 ಜನ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಏಜೆನ್ಸಿಯಿಂದ ಕನಿಷ್ಠ ವೇತನ ಕಾಯ್ದೆ ಅನ್ವಯ ಈ ಕೆಳಕಂಡಂತೆ ನಮೂದಿಸಿದ ಸೇವೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಕೆಲಸದ ಆದೇಶದ ದಿನದಿಂದ 11 ತಿಂಗಳ ಅವಧಿಗೆ ಕರೆದಿರುವ ಟೆಂಡರ್‌ಗೆ ಅರ್ಹ ಸಂಸ್ಥೆ/ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್‌ನ್ನು ವೆಬ್‌ಸೈಟ್ http://kppp.karnataka.gov.in ನಲ್ಲಿ ಆಹ್ವಾನಿಸಲಾಗಿದೆ.

ಕ್ರ. ಸಂ	ಭದ್ರತಾ ಸಿಬ್ಬಂದಿಗಳ ವಿವರ	ಇ.ಎಂ.ಡಿ. (ರೂಗಳಲ್ಲಿ)
1	1) ಕಂಪ್ಯೂಟರ್ ಆಪರೇಟರ್ಸ್ - 01 , 2) ವಾಹನ ಚಾಲಕರು - 01 3) ಭದ್ರತಾ ಗಾರ್ಡ್‌ಗಳು - 03, ಟೆಂಡರ್ ನಂ. APMC/2025-26/SE0838	20,000=00
2	ಬಾಗೇಪಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಉಪ-ಮಾರುಕಟ್ಟೆ ಪ್ರಾಂಗಣಗಳಲ್ಲಿ "ಎಲ್ಲಾ ಕಡೆ ಬೀಳುವ ಕಸಕಡ್ಡಿಗಳು, ತರಕಾರಿ ತ್ಯಾಜ್ಯಗಳು ಹಾಗೂ ರಸ್ತೆಗಳು ಮತ್ತು ಚರಂಡಿಗಳನ್ನು ಗುಡಿಸಿ, ಆಡಳಿತ ಕಛೇರಿ, ರೈತಭವನ, ನೀರಿನ ಘಟಕವನ್ನು ಸ್ವಚ್ಛ ಮಾಡಿ ತ್ಯಾಜ್ಯವನ್ನು ಪ್ರಾಂಗಣದಿಂದ ಹೊರಗೆ ಸಾಗಿಸಿ ವಿಲೆ ಮಾಡಲು", ಟೆಂಡರ್ ನಂ. APMC/2025-26/SE0848	20,000=00

(1) ಇ-ಟೆಂಡರ್ ಫಾರಂನ್ನು ವೆಬ್‌ಸೈಟಿನಲ್ಲಿಯೇ ತುಂಬಿ ಸಲ್ಲಿಸಲು ಕೊನೆಯ ದಿನಾಂಕ: 30.05.2026 ಸಾಯಂಕಾಲ 04.00 ಗಂಟೆಯವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.06.2026 ಬೆಳಿಗ್ಗೆ 11.00 ಗಂಟೆಗೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 08.06.2026 ಬೆಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋಧನೆಯ ನಂತರ) (4) ಷರತ್ತು & ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ https://kppp.karnataka.gov.in/ ನಲ್ಲಿ ಪಡೆಯಬಹುದು.
ಸಹಿ/- ಕಾರ್ಯದರ್ಶಿ ಕೃಉಮಾಸ, ಬಾಗೇಪಲ್ಲಿ
ಸಹಿ/- ಆಡಳಿತಾಧಿಕಾರಿಗಳು ಕೃಉಮಾಸ, ಬಾಗೇಪಲ್ಲಿ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:50/ಕೆಎಸ್‌ಎಂಸಿಎ/2026-27

ಚುನಾವಣಾ ಆಯೋಗದಿಂದ 100 ಕ್ಷೇತ್ರಗಳಲ್ಲಿ ಮತಗಳ್ಳತನಕ್ಕೆ ಬಿಜೆಪಿಗೆ ನೆರವು ಆರೋಪ

ನೈತಿಕವಾಗಿ ನಮ್ಮದೇ ವಿಜಯ, ಹೀಗಾಗಿ ರಾಜೀನಾಮೆ ನೀಡಲ್ಲವೆಂದು ಮಮತಾ ಹಠ

ಸೋತರೂ ಕುರ್ಚಿ ಬಿಡಲು ದೀದಿ ನಕಾರ

ಕೋಲ್ಕೊತಾ: ''ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗ, ಕೇಂದ್ರ ಸರಕಾರ ಹಾಗೂ ಬಿಜೆಪಿ ಪಿತೂರಿಯಿಂದ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಸೋಲಾಗಿದೆ. 100ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮತಗಳ್ಳತನದ ಮೂಲಕ ಬಿಜೆಪಿ ಗೆಲುವು ಸಾಧಿಸಿದೆ. ಅಕ್ರಮವಾಗಿ ನಡೆದ ಚುನಾವಣೆಯ ಸೋಲನ್ನು ನಾನು ಒಪ್ಪಿಕೊಳ್ಳುವುದಿಲ್ಲ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ,'' ಎಂದು ಸಿಎಂ ಮಮತಾ ಬ್ಯಾನರ್ಜಿ ಘೋಷಣೆ ಮಾಡಿದ್ದಾರೆ.

ಚುನಾವಣಾ ಫಲಿತಾಂಶದ ಬಳಿಕ ಕೋಲ್ಕೊತಾದ ಪಕ್ಷದ ಕಚೇರಿಯಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಮಮತಾ ಬ್ಯಾನರ್ಜಿ, ''ಬಿಜೆಪಿ ಪರವಾಗಿ ಕೆಲಸ ಮಾಡಿದ ಆಯೋಗದ ಕುತಂತ್ರದಿಂದ ಟಿಎಂಸಿಗೆ ಸೋಲಾಗಿದೆ. ಬಲ ಪ್ರಯೋಗದ ಮೂಲಕ ಗೆಲುವನ್ನು ಕಿತ್ತುಕೊಳ್ಳಲಾಗಿದೆ. ಫಲಿತಾಂಶದ ಬಳಿಕ ಬರಲಿ, ಟಿಎಂಸಿ ನೈತಿಕವಾಗಿ ಜಯ ಗಳಿಸಿದೆ,'' ಎಂದು ಸ್ವಂಯ ಬೆನ್ನು ತಟ್ಟಿಕೊಂಡರು.

- ಬಂಗಾಳ ಹಾಗೂ ಅಸ್ಸಾಂ ಸಿಎಂ ಆಯ್ಕೆ ಕ್ರಮವಾಗಿ ವೀಕ್ಷಕರಾಗಿ ಸಚಿವ ಅಮಿತ್ ಶಾ, ನಡ್ಡಾ ನೇಮಕ

''ಚುನಾವಣೆಯಲ್ಲಿ ಸಹಜ ಸೋಲು ಅನುಭವಿಸಿದ್ದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೆ. ಆದರೆ, ಮತಗಳ್ಳತನದ ಮೂಲಕ ಬಿಜೆಪಿಯವರು ಗೆದ್ದಿಸಲಾಗಿದೆ. ನಾನು ಚುನಾವಣೆ ಸೋತಿಲ್ಲ, ಹೀಗಾಗಿ ರಾಜೀನಾಮೆ ನೀಡುವುದಿಲ್ಲ. ಬಲವಂತವಾಗಿ ರಾಜೀನಾಮೆ ಪಡೆದುಕೊಂಡರೆ ನಮಗೆ ನೈತಿಕ ಜಯವಾಗಲಿದೆ,'' ಎಂದು ಬ್ಯಾನರ್ಜಿ ಹೇಳಿದರು.

ಆಯೋಗವೇ ವಿರೋಧಿ: ''ಚುನಾವಣೆಯಲ್ಲಿ ಟಿಎಂಸಿಗೆ ಎದುರಾಳಿ ಯಾಗಿದ್ದು ಬಿಜೆಪಿಯಲ್ಲ, ಚುನಾವಣಾ ಆಯೋಗ. ಮತ ಎಣಿಕೆಯಲ್ಲಿ ದೊಡ್ಡಮಟ್ಟದ ಅಕ್ರಮ ನಡೆಸುವ ಮೂಲಕ ಬಿಜೆಪಿ ಗೆಲುವಿಗೆ ದಾರಿ ಮಾಡಿಕೊಟ್ಟಿದೆ. 100ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮತಗಳ್ಳತನ ಮಾಡಲಾಗಿದೆ. ಜನಾದೇಶವನ್ನು ತಿರುಚಲಾಗಿದೆ,'' ಎಂದು ಬ್ಯಾನರ್ಜಿ ಆರೋಪಿಸಿದರು.

''ದೇಶದ ಸಂಸದೀಯ ಚುನಾವಣಾ ವ್ಯವಸ್ಥೆಗೆ ಸೋಮವಾರ ಕರಾಳ ದಿನವಾಗಿ ದಾಖಲಾಗಿದೆ. ಪಕ್ಷಪಾತವಾಗಿ ವರ್ತಿಸಿದ ಆಯೋಗದ ನಡೆ ಖಂಡನೆಗೆ ಅರ್ಹವಾಗಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಟಿಎಂಸಿ ಪಾಲಿಗೆ ವಿಲನ್ ಆಗಿದ್ದಾರೆ. ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಂಡು ಚುನಾವಣೆ ನಡೆಸಿದರು. ಅರೆಸೇನಾ ಪಡೆ ನಿಯೋಜಿಸಿ ಮತದಾರರನ್ನು ಬೆದರಿಸಿದರು. ಅನೈತಿಕ ಮಾರ್ಗದಲ್ಲಿ ಕೆಲಸ ನಿರ್ವಹಿಸುವ ಮೂಲಕ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ದುರ್ಬಲಗೊಳಿಸಿದರು,'' ಎಂದು ಬ್ಯಾನರ್ಜಿ ದೂರಿದರು.

ಕೋಲ್ಕೊತಾದ ಟಿಎಂಸಿ ಕೇಂದ್ರ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಮಮತಾ ಬ್ಯಾನರ್ಜಿ ಹಾಗೂ ಪಕ್ಷದ ಮುಖಂಡರು.

ಮೇ 9ಕ್ಕೆ ಬಿಜೆಪಿ ಸರಕಾರ

ಪಶ್ಚಿಮ ಬಂಗಾಳದಲ್ಲಿ ಭಾರಿ ಗೆಲುವು ಸಾಧಿಸಿರುವ ಬಿಜೆಪಿ ಮೇ 9 ರಂದು ಹೊಸ ಸರಕಾರ ರಚನೆಗೆ ಮುಂದಾಗಿದೆ. ''ನೊಬೆಲ್ ಪ್ರಶಸ್ತಿ ಪುರಸ್ಕೃತ ರವೀಂದ್ರನಾಥ್ ಠಾಗೋರ್ ಜನ್ಮದಿನದಂದು ರಾಜ್ಯದ ಮೊದಲ ಬಿಜೆಪಿ ಸರಕಾರ ರಚನೆಯಾಗಲಿದೆ,'' ಎಂದು ಬಿಜೆಪಿ ರಾಜ್ಯಾಧ್ಯಕ್ಷ ಶಮಿಕ್ ಭಟ್ಟಾಚಾರ್ಯ ಹೇಳಿದ್ದಾರೆ. ದಿಲ್ಲಿಗೆ ಆಗಮಿಸಿರುವ ಬಂಗಾಳ ಬಿಜೆಪಿ ನಾಯಕರು ಹೊಸ ಸರಕಾರ ರಚನೆ ಸಂಬಂಧ ವರಿಷ್ಠರ ಜತೆ ಸಮಾಲೋಚನೆ ನಡೆಸಿದ್ದಾರೆ.

''ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಬಂಗಾಳ ಮುಖ್ಯಮಂತ್ರಿ ಆಯ್ಕೆ ನಡೆಯಲಿದೆ. ರಾಜ್ಯಕ್ಕೆ ಆಗಮಿಸಲಿರುವ ಪಕ್ಷದ ವೀಕ್ಷಕರು ನೂತನ ಶಾಸಕಾಂಗ ಪಕ್ಷದ ನಾಯಕರನ್ನು ಆಯ್ಕೆ ಮಾಡಲಿದ್ದಾರೆ. ನೂತನ ಶಾಸಕಾಂಗ ನಾಯಕರು ಸರಕಾರ ರಚನೆಗೆ ಹಕ್ಕು ಮಂಡಿಸಲಿದ್ದಾರೆ,'' ಎಂದು ಭಟ್ಟಾಚಾರ್ಯ ಮಾಹಿತಿ ನೀಡಿದ್ದಾರೆ.

ದೀದಿ ಆರೋಪಗಳು

- ಟಿಎಂಸಿ ಬೆಂಬಲಿಗರು, ಕಾರ್ಯಕರ್ತರಿಗೆ ಮತದಾನ ಮಾಡದಂತೆ ಬೆದರಿಸಲಾಗಿದೆ
- ಫಲಿತಾಂಶ ಬಳಿಕ ಟಿಎಂಸಿ ಕಾರ್ಯಕರ್ತರ ಮೇಲೆ ದೊಡ್ಡ ಮಟ್ಟದ ದಾಳಿ ಮಾಡಲಾಗಿದೆ
- ರಾಜ್ಯದಲ್ಲಿ ಕಂಡು ಕೇಳರಿಯದ ರೀತಿಯಲ್ಲಿ ಜನರ ಮೇಲೆ ದೌರ್ಜನ್ಯ ಮಾಡಲಾಗಿದೆ
- ಮತ ಎಣಿಕೆ ಕೇಂದ್ರಕ್ಕೆ ಆಗಮಿಸಿದ ವೇಳೆ ನನ್ನ ಮೇಲೂ ದೈಹಿಕವಾಗಿ ಹಲ್ಲೆ ನಡೆಸಲಾಗಿದೆ
- ನಾನು ಹೆದರುವುದಿಲ್ಲ, ಹುಲಿಯಂತೆ ಹೋರಾಡುವೆ, ಫಿನಿಕ್ಸ್ ಹಕ್ಕಿಯಂತೆ ಮೇಲೆ ಬರುವೆ
- ಬಿಜೆಪಿ-ಆಯೋಗದ ವಿರುದ್ಧದ ಹೋರಾಟಕ್ಕೆ ಐಎನ್‌ಡಿಐಎ ಪಕ್ಷಗಳು ನಮ್ಮ ಬೆನ್ನಿಗೆ ನಿಂತಿವೆ

ಕಾನೂನು ಹೇಳುವುದೇನು?

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡದಿದ್ದರೆ ಏನು ಮಾಡಬಹುದು ಎಂಬ ಪ್ರಶ್ನೆ ಹುಟ್ಟಿಕೊಂಡಿದೆ. ಸಂವಿಧಾನಿಕ ಬಿಕ್ಕಟ್ಟಿಗೆ ದಾರಿ ಮಾಡಿಕೊಡಬಹುದು ಎಂದು ವಿಶ್ಲೇಷಿಸಲಾಗಿದೆ. ಬಹುಮತ ಇಲ್ಲದೆ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಲು ಸಾಧ್ಯವೆ ಎಂಬ ಪ್ರಶ್ನೆ ಹುಟ್ಟುಹಾಕಿದೆ. ಆದರೆ, ಇಂತಹ ಸನ್ನಿವೇಶದಲ್ಲಿ ಎದುರಾಗುವುದಾದ ಬಿಕ್ಕಟ್ಟಿಗೆ ಸಂವಿಧಾನದಲ್ಲಿ ಉತ್ತರ ಇದೆ.

01 ಪಶ್ಚಿಮ ಬಂಗಾಳ ವಿಧಾನಸಭೆ ಅವಧಿ ಮೇ 7ಕ್ಕೆ ಅಂತ್ಯವಾಗಲಿದೆ. ಹಾಲಿ ವಿಧಾನಸಭೆ ವಿಸರ್ಜನೆಗೊಂಡ ಬಳಿಕ ರಾಜೀನಾಮೆ ನೀಡದಿದ್ದರೂ ಮುಖ್ಯಮಂತ್ರಿ, ಸಚಿವರು, ಶಾಸಕರ ಅವಧಿ ಸ್ವಯಂ ರದ್ದಾಗುತ್ತದೆ. ಸಂವಿಧಾನದ ಕಲಂ 172ರ ಅಡಿಯಲ್ಲಿ ವಿಸರ್ಜಿತ ವಿಧಾನಸಭೆ ರದ್ದಾದ ಮೇಲೆ ಮುಖ್ಯಮಂತ್ರಿ ಹುದ್ದೆಗೆ ಮಾನ್ಯತೆ ಇರುವುದಿಲ್ಲ

02 ಬಹುಮತ ಕಳೆದುಕೊಂಡ ಮುಖ್ಯಮಂತ್ರಿ ರಾಜೀನಾಮೆ ನೀಡದಿದ್ದರೆ ಸಂವಿಧಾನದ ಕಲಂ 164ರ ಅಡಿಯಲ್ಲಿ ರಾಜ್ಯಪಾಲರು ಕಾನೂನು ಪ್ರಕಾರ ಕ್ರಮ ಕೈಗೊಳ್ಳಬಹುದು. ಹೊಸ ವಿಧಾನಸಭೆ ರಚನೆ ಅಧಿಕೃತವಾಗಿ ಘೋಷಣೆಯಾಗುತ್ತಿದ್ದಂತೆ ಮುಖ್ಯಮಂತ್ರಿಯನ್ನು ವಜಾಗೊಳಿಸುವ ಅಧಿಕಾರವನ್ನು ರಾಜ್ಯಪಾಲರು ಹೊಂದಿದ್ದಾರೆ.

03 ಮುಖ್ಯಮಂತ್ರಿ ರಾಜೀನಾಮೆ ನೀಡದಿದ್ದರೂ ಶಾಶ್ವತ ಸಾಂವಿಧಾನಿಕ ಬಿಕ್ಕಟ್ಟಿಗೆ ದಾರಿಯಾಗುವುದಿಲ್ಲ. ಸಾಂವಿಧಾನಿಕ ಅಧಿಕಾರ ಬಳಸಿಕೊಂಡು ರಾಜ್ಯಪಾಲರು ಬಹುಮತ ಪಡೆದ ಪಕ್ಷಕ್ಕೆ ಅಧಿಕಾರ ಹಸ್ತಾಂತರ ಮಾಡಬಹುದು.

ಪ. ಬಂಗಾಳ ಜನಾದೇಶ ಗೌರವಿಸೋಣ: ಓವೈಸಿ

ಹೈದರಾಬಾದ್: ''ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಜನರು ಅಧಿಕಾರ ನೀಡಿದ್ದಾರೆ. ನಾವು ಆ ನಿರ್ಧಾರವನ್ನು ಗೌರವಿಸಬೇಕು. ಇದು ಜನರ ತೀರ್ಪು,'' ಎಂದು ಸಂಸದ ಅಸಾದುದ್ದೀನ್ ಓವೈಸಿ ಹೇಳಿದ್ದಾರೆ. ಇದೇ ವೇಳೆ ಅವರು, ''ಜಾತ್ಯತೀತ ಪಕ್ಷಗಳು ಎಂದು ಕರೆಸಿಕೊಳ್ಳುವವರಿಂದ ಬಿಜೆಪಿಯ ವಿಸ್ತರಣೆಯನ್ನು ತಡೆಯಲು ಸಾಧ್ಯವಿಲ್ಲ ಎಂಬುದು ಈ ಫಲಿತಾಂಶದಿಂದ ಮತ್ತೊಮ್ಮೆ ಸಾಬೀತಾಗಿದೆ,'' ಎಂದು ಅಭಿಪ್ರಾಯಪಟ್ಟಿದ್ದಾರೆ. ಆಮ್ ಆದ್ಮಿ ಪಕ್ಷ, ಉದ್ಧವ್ ಬಣದ ಶಿವಸೇನೆ ಮತ್ತು ಎನ್‌ಸಿಪಿ ಹಾಗೂ ಟಿಎಂಸಿಯ ಈ ಹಿಂದೆ 'ಸಾಫ್ಟ್ ಹಿಂದುತ್ವ' ರಾಜಕಾರಣ ಮಾಡಲು ಪ್ರಯತ್ನಿಸಿವೆ ಎಂದು ಆರೋಪಿಸಿದ ಅವರು, ಮುಸ್ಲಿಂ ಸಮುದಾಯವು ತಮ್ಮದೇ ಆದ ಸ್ವತಂತ್ರ ರಾಜಕೀಯ ನಾಯಕತ್ವವನ್ನು ಸ್ಥಾಪಿಸಲು ಪ್ರಯತ್ನಿಸಬೇಕು ಎಂದಿದ್ದಾರೆ.

ಚುನಾವಣೋತ್ತರ ಹಿಂಸಾಚಾರಕ್ಕೆ 4 ಮಂದಿ ಬಲಿ

ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರಕ್ಕೆ 4 ಮಂದಿ ಬಲಿಯಾಗಿರುವುದು ವರದಿಯಾಗಿದೆ. ಟೋಲಿಗಂಜ್, ಬಾರಾನಗರ, ಬಹರಂಪುರ, ಹೌರಾ ಸೇರಿ ಹಲವೆಡೆ ಬಿಜೆಪಿ ಗೂಂಡಾಗಳು ನಮ್ಮ ಪಕ್ಷದ ಕಚೇರಿಗಳಿಗೆ ಬೆಂಕಿ ಹಚ್ಚಿ ಧ್ವಂಸಗೊಳಿಸಿದ್ದಾರೆ ಎಂದು ಟಿಎಂಸಿ ಆರೋಪಿಸಿದೆ. ಉತ್ತರ 24 ಪರಗಣ ಹಾಗೂ ಹೌರಾದ ಉದಯನಾರಾಯಣಪುರದಲ್ಲಿ ಟಿಎಂಸಿ ಕಾರ್ಯಕರ್ತರು ನಡೆಸಿದ ಗಲಭೆಗೆ ನಮ್ಮ ಪಕ್ಷದ ಇಬ್ಬರು ಕಾರ್ಯಕರ್ತರು ಬಲಿಯಾಗಿದ್ದಾರೆ ಎಂದು ಬಿಜೆಪಿ ವಕ್ತಾರರು ಹೇಳಿದ್ದಾರೆ. ಇದೇ ವೇಳೆ ಕೋಲ್ಕೊತಾ ಮತ್ತು ಬರ್ಧಮಾನ್‌ನಲ್ಲಿ ಚುನಾವಣೋತ್ತರ ಹಿಂಸಾಚಾರಕ್ಕೆ ನಮ್ಮ ಪಕ್ಷದ ಇಬ್ಬರು ಕಾರ್ಯಕರ್ತರು ಮೃತಪಟ್ಟಿದ್ದಾರೆ ಎಂದು ಟಿಎಂಸಿ ವಕ್ತಾರರು ಹೇಳಿದ್ದಾರೆ.

ಮನೆ ಕೆಲಸದಾಕೆ ಈಗ ಶಾಸಕಿ!

ಹಿಂದೊಮ್ಮೆ ಮನೆಗೆಲಸ ಮಾಡಿಕೊಂಡು ತಿಂಗಳಿಗೆ 2,500 ರೂ. ಸಂಪಾದಿಸುತ್ತಿದ್ದ ಮಹಿಳೆ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಅದ್ಭುತ ಜಯಗಳಿಸಿದ್ದಾರೆ. ಶ್ರೀಮಂತನನ್ನೂ ಚುನಾವಣೆ ನಿಂತು ಗೆಲ್ಲಬಹುದು ಎಂಬ ಪ್ರಜಾಪ್ರಭುತ್ವವ್ಯವಸ್ಥೆಯ ಸೊಬಗಿಗೆ ಇದುವೇ ಸಾಕ್ಷಿಯಾಗಿದೆ. ಬಡಕುಟುಂಬದಿಂದ ಬಂದ ಕಲಿತಾ ಮಾಝಿ ಅವರು ಬಿಜೆಪಿ

ಅಭ್ಯರ್ಥಿಯಾಗಿ ಪಶ್ಚಿಮ ಬಂಗಾಳದ ಔಸ್‌ಗ್ರಾಮ್ ಕ್ಷೇತ್ರದಿಂದ ಕಣಕ್ಕಿಳಿದಿದ್ದರು. 12,535 ಮತಗಳ ಅಂತರದಿಂದ ತಮ್ಮ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಶ್ಯಾಮ ಪ್ರಸನ್ನ ಲೋಹರ್ ಅವರನ್ನು ಸೋಲಿಸಿ ಗಮನ ಸೆಳೆದಿದ್ದಾರೆ. ರಾಜಕೀಯ ಪ್ರವೇಶಿಸುವ ಮುನ್ನ ಕಲಿತಾ ಮಾಝಿ ಆರ್ಥಿಕ ಸಂಕಷ್ಟದಿಂದಾಗಿ ಕುಟುಂಬವನ್ನು ಪೋಷಿಸಲು ನಾಲ್ಕಾರು ಮನೆಗಳಲ್ಲಿ ಮನೆಗೆಲಸ ಮಾಡಿಕೊಂಡಿದ್ದರು. ಗುಸ್ಕಾರಾ ಪುರಸಭೆಯ ನಿವಾಸಿಯಾದ ಕಲಿತಾ ಮಾಝಿ 2021ರ ವಿಧಾನಸಭೆ ಚುನಾವಣೆಯಲ್ಲೂ ಸ್ಪರ್ಧಿಸಿ ಟಿಎಂಸಿ ಅಭ್ಯರ್ಥಿ ಎದುರು ಪರಾಜಯಗೊಂಡಿದ್ದರು. ಅದರೂ ಛಲಬಿಡದೆ ಜನರೊಂದಿಗೆ ಒಡನಾಟ ಹೊಂದಿದ್ದನ್ನು ಗಮನಿಸಿದ ಬಿಜೆಪಿ ಈ ಬಾರಿಯೂ ಟಿಕೆಟ್ ನೀಡಿತ್ತು.

ನಾಳೆ ದಳಪತಿ ವಿಜಯ್ ಪದಗ್ರಹಣ?

» ಮೊದಲ ಪುಟದಿಂದ

ಶಾಸಕರ ಜತೆ ಸಭೆ: ಈ ಮಧ್ಯೆ, ಸರಕಾರ ರಚನೆ ಸಂಬಂಧ ಚರ್ಚಿಸಲು ಶಾಸಕರ ಸಭೆ ನಡೆಸಿದ ವಿಜಯ್, ಸರಕಾರ ರಚನೆಗೆ ಅಗತ್ಯವಿರುವ ಸಂಖ್ಯಾಬಲ ಹೊಂದಿಸಲು ಪ್ರಾದೇಶಿಕ ಪಕ್ಷಗಳ ಬೆಂಬಲ ಪಡೆಯುವ ಬಗ್ಗೆಯೂ ಚರ್ಚೆ ನಡೆಸಿದ್ದಾರೆ.

ವಿಜಯ್ ಶಾಸಕಾಂಗ ನಾಯಕ: ಚೆನ್ನೈನಲ್ಲಿ ಮಂಗಳವಾರ ನಡೆದ ಟಿವಿಕೆ ಶಾಸಕರ ಸಭೆಯಲ್ಲಿ ವಿಜಯ್ ಅವರನ್ನು ಪಕ್ಷದ ಶಾಸಕಾಂಗ ನಾಯಕರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಇದಕ್ಕೂ ಮೊದಲು ಪಕ್ಷದ ಕಚೇರಿಗೆ ಆಗಮಿಸಿದ ವಿಜಯ್ ಅವರನ್ನು ಅದ್ದೂರಿಯಾಗಿ ಬರ ಮಾಡಿಕೊಳ್ಳಲಾಯಿತು.

ಕೇಂದ್ರದ ಸಹಕಾರಕ್ಕೆ ಮನವಿ: ತಮಿಳುನಾಡಿನಲ್ಲಿ ಟಿವಿಕೆ ಗೆಲುವಿಗಾಗಿ ಅಭಿನಂದಿಸಿದ ಪ್ರಧಾನಿ ಮೋದಿ ಹಾಗೂ ರಾಹುಲ್ ಗಾಂಧಿಗೆ ವಿಜಯ್ ಧನ್ಯವಾದ ಅರ್ಪಿಸಿದ್ದಾರೆ. ಇದೇವೇಳೆ, ತಮಿಳುನಾಡಿನ ಜನರ ಹಿತಾಸಕ್ತಿಯೇ ತಮ್ಮ ಪರಮೋಚ್ಚ ಗುರಿ ಎಂದಿರುವ ವಿಜಯ್, ಕೇಂದ್ರದ ಸಹಕಾರವನ್ನು ಯಾಚಿಸಿದ್ದಾರೆ.

ಒಂದು ಮತದಲ್ಲಿ ಗೆದ್ದ ಟಿವಿಕೆ ಅಭ್ಯರ್ಥಿ: ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಟಿವಿಕೆ ಅಭ್ಯರ್ಥಿ ಕೇವಲ ಒಂದು ಮತದ ಅಂತರದಿಂದ ಗೆಲುವು ಸಾಧಿಸಿದ್ದಾರೆ. ತಿರುಪತ್ತೂರು ಕ್ಷೇತ್ರದಲ್ಲಿ ಟಿವಿಕೆಯ ಸೀನಿವಾಸ ಸೇತುಪತಿ ಅವರು ಡಿಎಂಕೆಯ ಕೆ.ಆರ್.ಪೆರಿಯಕರುಪ್ಪನ್ ಒಂದು ಮತದ ಅಂತರದಿಂದ ಸೋಲಿಸಿ, ವಿಧಾನಸಭೆ ಪ್ರವೇಶಿಸಿದ್ದಾರೆ.

ಗೆಲುವು ನೀಡಿತೆ ಮಸ್ಕತ್ ವ್ಯಕ್ತಿ ಮತ?: ತಿರುಪತ್ತೂರು ಕ್ಷೇತ್ರದಲ್ಲಿ ಒಂದು ಮತದಿಂದ ಗೆದ್ದ ಟಿವಿಕೆ ಅಭ್ಯರ್ಥಿ ಗೆಲುವಿನಲ್ಲಿ ಒಮನ್‌ನ ಮಸ್ಕತ್‌ನಿಂದ ಆಗಮಿಸಿ ಮತ ಚಲಾಯಿಸಿದ ಅನಿವಾಸಿ ಭಾರತೀಯ ವ್ಯಕ್ತಿಯ ಮತ ಮುಖ್ಯ ಪಾತ್ರವಹಿಸಿದೆ ಎಂದು ಹೇಳಲಾಗುತ್ತಿದೆ. ಮಣಿಕಂದನ್ ಶಿವಾನಂದಮ್ ಅವರು ಟಿವಿಕೆ ಪಕ್ಷಕ್ಕೆ ಮತ ನೀಡಲು 3 ಸಾವಿರ ಕಿ.ಮೀ ದೂರದ ಮಸ್ಕತ್‌ನಿಂದ ತಿರುಪತ್ತೂರಿಗೆ ಆಗಮಿಸಿದ್ದರು. ''ಟಿವಿಕೆಗೆ ಮತ ಹಾಕಲೆಂದೇ ಒಮನ್‌ನಿಂದ ಆಗಮಿಸಿದ್ದೆ. ನನ್ನ ಒಂದು ಮತ ಗೆಲುವಿಗೆ ಕಾರಣವಾಗಿರುವುದು ಮತದ ಶಕ್ತಿಯನ್ನು ಎತ್ತಿ ತೋರಿಸಿದೆ,'' ಎಂದು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಕಾಂಗ್ರೆಸ್‌ನಲ್ಲಿ ಗೆದ್ದ ಬಹುತೇಕರು ಮುಸ್ಲಿಮರು!

ಹೊಸದಿಲ್ಲಿ: ಅಸ್ಸಾಂ ಮತ್ತು ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಸಿದ 390 ಕ್ಷೇತ್ರಗಳ ಪೈಕಿ ಕೇವಲ 21 ಸ್ಥಾನಗಳನ್ನು ಮಾತ್ರ ಗೆದ್ದಿದೆ. ಈ 21 ವಿಜೇತರಲ್ಲಿ 20 ಮಂದಿ ಮುಸ್ಲಿಂ ಅಭ್ಯರ್ಥಿಗಳೇ ಆಗಿದ್ದಾರೆ. ಇದನ್ನು ಬಿಜೆಪಿ, 'ಕಾಂಗ್ರೆಸ್ ಹೊಸ ಮುಸ್ಲಿಂ ಲೀಗ್' ಎಂದು ಟೀಕಿಸಿದೆ.

ಅಸ್ಸಾಂನಲ್ಲಿ ಕಾಂಗ್ರೆಸ್ ಮೈತ್ರಿಕೂಟದೊಂದಿಗೆ 126 ಸ್ಥಾನಗಳ ಪೈಕಿ 99 ರಲ್ಲಿ ಸ್ಪರ್ಧಿಸಿ ಕೇವಲ 19 ಸ್ಥಾನಗಳನ್ನು ಗೆದ್ದಿದೆ. ಇವರಲ್ಲಿ 18 ಶಾಸಕರು ಮುಸ್ಲಿಮರು.

ಪಶ್ಚಿಮ ಬಂಗಾಳದಲ್ಲಿ ಸ್ಪರ್ಧಿಸಿದ್ದ 292 ಸ್ಥಾನಗಳ ಪೈಕಿ ಕಾಂಗ್ರೆಸ್ ಕೇವಲ ಎರಡರಲ್ಲಿ ಗೆದ್ದಿದೆ. ಈ ಇಬ್ಬರೂ ಶಾಸಕರು ಮುಸ್ಲಿಮರೇ ಆಗಿದ್ದಾರೆ. ಇಲ್ಲಿ ಕಾಂಗ್ರೆಸ್ 63 ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿತ್ತು. ಈಗ 'ಕಾಂಗ್ರೆಸ್ ಹೊಸ ಮುಸ್ಲಿಂ ಲೀಗ್ ಆಗಿದೆಯೇ?' ಎಂಬ ಪ್ರಶ್ನೆ ಕೇಳಿ ಬರುತ್ತಿದೆ. 2026ರ ವಿಧಾನಸಭಾ ಚುನಾವಣೆಯಲ್ಲಿ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಎರಡೂ ರಾಜ್ಯಗಳಲ್ಲಿ ಹಿಂದೂ ಮತಗಳ ಧ್ರುವೀಕರಣ ಕಂಡುಬಂದಿದೆ.

ಇನ್ನು ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟ 102 ಸ್ಥಾನಗಳನ್ನು ಗೆಲ್ಲುವ ಮೂಲಕ ಅಧಿಕಾರಕ್ಕೆ ಬಂದಿದೆ. ಈ 102 ಶಾಸಕರಲ್ಲಿ 30 ಮಂದಿ ಮುಸ್ಲಿಮರು. ಇದರಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಪ್ರಮುಖ ಪಾಲು ಹೊಂದಿದೆ.

ಒಂದು ಕಾಲದಲ್ಲಿ ಎಲ್ಲಾ ಸಿದ್ಧಾಂತಗಳು ಮತ್ತು ಸರ್ವ ಸಮುದಾಯದ ನಾಯಕರನ್ನು ಒಳಗೊಂಡಿದ್ದ ಗ್ರ್ಯಾಂಡ್ ಓಲ್ಡ್ ಪಾರ್ಟಿಯಾದ ಕಾಂಗ್ರೆಸ್, ಈಗ ಅಲ್ಪಸಂಖ್ಯಾತರೊಂದಿಗೆ ನಿಕಟವಾಗಿ ಗುರುತಿಸಿಕೊಳ್ಳುತ್ತಿದೆ. ಬಿಜೆಪಿ ತನ್ನ ಹಿಂದೂ ಮತಬ್ಯಾಂಕ್ ಅನ್ನು ಗಟ್ಟಿಗೊಳಿಸುತ್ತಿದ್ದರೆ, ಕಾಂಗ್ರೆಸ್ ತನ್ನ ಅಸ್ತಿತ್ವದ ಉಳಿವಿಗಾಗಿ ಆಯ್ದುಕೊಂಡ ಮಿತ್ರಪಕ್ಷಗಳು ಮತ್ತು ಕಾರ್ಯತಂತ್ರಗಳಿಂದಾಗಿ ಮುಸ್ಲಿಂ ಮತದಾರರ ಕಡೆಗೆ ಹೆಚ್ಚು ವಾಲಿರುವಂತೆ ಕಾಣುತ್ತಿದೆ. ಬಿಜೆಪಿಯು ಕಾಂಗ್ರೆಸ್ ಅನ್ನು 'ಅಲ್ಪಸಂಖ್ಯಾತರ ಓಲೈಕೆ' ಮಾಡುವ ಪಕ್ಷ ಎಂದು ಬಿಂಬಿಸುತ್ತಿರುವುದು 2014ರಿಂದಲೇ ಮತದಾರರ ಮೇಲೆ ಪರಿಣಾಮ ಬೀರಲು ಪ್ರಾರಂಭಿಸಿದೆ.

ಅಸ್ಸಾಂನಲ್ಲಿ ಬಿಜೆಪಿ ತನ್ನ ಮಿತ್ರಪಕ್ಷಗಳಿಗೆ ಮುಸ್ಲಿಂ ಪ್ರಾಬಲ್ಯದ ಪ್ರದೇಶಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡುವ ಮೂಲಕ ಚಾಣಾಕ್ಷತನ ಪ್ರದರ್ಶಿಸಿದೆ. ಆದರೆ ಕಾಂಗ್ರೆಸ್ ಹೆಚ್ಚಿನ ಟಿಕೆಟ್ ಗಳನ್ನು ಮುಸ್ಲಿಂ ಅಭ್ಯರ್ಥಿಗಳಿಗೆ ನೀಡಿದೆ.

ಬ್ರೀಫ್ ಕಾರ್ನರ್

ಬಂಗಾಳದಲ್ಲಿ ವರ್ಷಗಳಿಂದ ಮುಚ್ಚಿದ್ದ ದುರ್ಗಾ ದೇವಸ್ಥಾನ ಬಾಗಿಲು ಓಪನ್

ಕೋಲ್ಕೊತಾ: ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವಿನ ನಂತರ ಪಶ್ಚಿಮ ಬಂಗಾಳದಲ್ಲಿ ಹಲವು ವರ್ಷಗಳಿಂದ ಮುಚ್ಚಲಾಗಿದ್ದ ದುರ್ಗಾ ಮಂದಿರವು ಭಕ್ತರಿಗಾಗಿ ಮತ್ತೆ ಬಾಗಿಲು ತೆರೆದಿದೆ. ಅಸಾನ್‌ಸೋಲ್‌ನಲ್ಲಿರುವ ದುರ್ಗಾ ದೇವಾಲಯವು ಸ್ಥಳೀಯ ಉದ್ವಿಗ್ನತೆಯಿಂದಾಗಿ ಹಲವು ವರ್ಷಗಳಿಂದ ಬಂದ್ ಆಗಿತ್ತು. ದುರ್ಗಾಮಾತಾ ಚಾರಿಟೆಬಲ್ ಟ್ರಸ್ಟ್‌ನಿಂದ ದೇವಾಲಯ ನಿರ್ವಹಣೆ ಆಗುತ್ತಿತ್ತು. ದುರ್ಗಾ ಪೂಜೆ ಮತ್ತು ಲಕ್ಷ್ಮಿ ಪೂಜೆಯಂತಹ ಹಬ್ಬಗಳಲ್ಲಿ ಮಾತ್ರ ದೇವಾಲಯ ತೆರೆಯುತ್ತಿತ್ತು. ಆದರೆ, ಸ್ಥಳೀಯ ಗಲಾಟೆ ಮತ್ತು ಆಡಳಿತಾತ್ಮಕ ನಿರ್ಬಂಧಗಳಿಂದಾಗಿ ದೇವಾಲಯ ಬಾಗಿಲು ಮುಚ್ಚಿತ್ತು. ಪಶ್ಚಿಮ ಬರ್ಧಮಾನ್ ಜಿಲ್ಲೆಯ ಎಲ್ಲಾ ಒಂಬತ್ತು ವಿಧಾನಸಭಾ ಸ್ಥಾನಗಳನ್ನು ಬಿಜೆಪಿ ಗೆದ್ದ ನಂತರ ದೇವಾಲಯವನ್ನು ಪುನಃ ತೆರೆಯಲಾಗಿದೆ.

8-9 ವರ್ಷದ ಬಳಿಕವೇ ಶ್ವೇತಭವನ ತೊರೆಯುವೆ ಎಂದ ಟ್ರಂಪ್!

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮತ್ತೊಮ್ಮೆ ಅಧಿಕಾರದಲ್ಲಿ ಮುಂದುವರಿಯುವ ತಮ್ಮ ಆಸೆಯನ್ನು ಬಹಿರಂಗವಾಗಿ ವ್ಯಕ್ತಪಡಿಸಿದ್ದಾರೆ. ಶ್ವೇತಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಟ್ರಂಪ್, ''ನಾನು 8-9 ವರ್ಷಗಳ ನಂತರವೇ ಅಧ್ಯಕ್ಷರ ಕಚೇರಿಯನ್ನು ತೊರೆಯುತ್ತೇನೆ,'' ಎಂದಿದ್ದಾರೆ. ಈ ಮಾತನ್ನು ಕೇಳಿ ಕಾರ್ಯಕ್ರಮದಲ್ಲಿದ್ದವರು ನಗೆಗಡಲಲ್ಲಿ ತೇಲಿದಾಗ, ''ನಾನು ತಮಾಷೆ ಮಾಡುತ್ತಿಲ್ಲ, ಮುಂದಿನ ತಿಂಗಳು ನನಗೆ 80 ಆದರೂ ನಾನಿನ್ನೂ ಹುರುಪಿನಿಂದ ಕೆಲಸ ಮಾಡುವ ಉದ್ದೇಶ ಹೊಂದಿದ್ದೇನೆ. ಮಾಡಬೇಕಾದ ಕೆಲಸ ಇನ್ನೂ ಬಹಳಷ್ಟಿದೆ,'' ಎಂದು ಹೇಳಿದ್ದಾರೆ. ಅಮೆರಿಕದ ಸಂವಿಧಾನದಲ್ಲಿ ಒಬ್ಬ ವ್ಯಕ್ತಿ ಎರಡು ಬಾರಿ ಮಾತ್ರ ಅಧ್ಯಕ್ಷರಾಗಲು ಅವಕಾಶವಿದೆ.

ಭಯೋತ್ಪಾದನೆ ಪ್ರಾಯೋಜಕ ರಾಷ್ಟ್ರ ಇರಾನ್‌ಗೆ ಚೀನಾದಿಂದ ಧನಸಹಾಯ

ವಾಷಿಂಗ್ಟನ್: ಭಯೋತ್ಪಾದನೆಯ ಅತಿದೊಡ್ಡ ಪ್ರಾಯೋಜಕ ರಾಷ್ಟ್ರ ಇರಾನ್‌ಗೆ ಚೀನಾ ಧನ ಸಹಾಯ ಮಾಡುತ್ತಿದೆ ಎಂದು ಅಮೆರಿಕ ಖಜಾನೆ ಸಚಿವ ಸ್ಕಾಟ್ ಬೆಸೆಂಟ್ ಆರೋಪಿಸಿದ್ದಾರೆ. ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಅವರು, ''ಇರಾನ್-ಅಮೆರಿಕ ಸಂಘರ್ಷದ ಮಧ್ಯೆಯೂ ಟೆಹ್ರಾನ್ ಜತೆ ಚೀನಾ ಇಂಧನ ಖರೀದಿ ವ್ಯವಹಾರ ಮುಂದುವರಿಸಿದೆ. ಇರಾನ್‌ನಿಂದ ತೈಲ ಆಮದು ಮುಂದುವರಿಸುವ ಮೂಲಕ ಬೀಜಿಂಗ್



ಭಯೋತ್ಪಾದನೆಯ ಅತಿದೊಡ್ಡ ಪ್ರಾಯೋಜಕ ರಾಷ್ಟ್ರಕ್ಕೆ ಧನಸಹಾಯ ಮಾಡುತ್ತಿದೆ,'' ಎಂದು ವಾಗ್ದಾಳಿ ನಡೆಸಿದ್ದಾರೆ. ಚೀನಾವು ತನ್ನ ಇಂಧನ ಅಗತ್ಯದಲ್ಲಿ ಶೇ.90ರಷ್ಟನ್ನು ಇರಾನ್‌ನಿಂದ ಖರೀದಿಸುತ್ತಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜತೆ ಮಾತುಕತೆ ನಡೆಸಲು ಬೀಜಿಂಗ್‌ಗೆ ಭೇಟಿ ನೀಡುವ ಕೆಲವೇ ದಿನಗಳ ಮೊದಲು ಈ ಹೇಳಿಕೆಗಳು ಹೊರಬಂದಿವೆ. ಬೀಜಿಂಗ್ ವಿರುದ್ಧದ ತೀಕ್ಷ್ಣ ಟೀಕೆಗಳ ನಡುವೆಯೂ ಬೆಸೆಂಟ್, ''ಇರಾನ್‌ನ ಕ್ರಮಗಳಿಂದ ಅಸ್ತವ್ಯಸ್ತಗೊಂಡಿರುವ ಜಾಗತಿಕ ಹಡಗು ಮಾರ್ಗವಾದ ಹರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಅಮೆರಿಕದ ಪ್ರಯತ್ನಗಳನ್ನು ಬೆಂಬಲಿಸಬೇಕು,'' ಎಂದು ಚೀನಾಕ್ಕೆ ಒತ್ತಾಯಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
KPTCL
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ:ಬಿ31/ಅಇಂ(ಐಟಿ)/ಕಾನಿಇಂ(ಐಟಿ-4)/76452/2026-27 ದಿನಾಂಕ:04.05.2026
ಅಧಿಸೂಚನೆ
ಕವಿಪ್ರನಿನಿಯಲ್ಲಿ ವಿವಿಧ ವೋಲ್ಟೇಜ್ ಸಾಮರ್ಥ್ಯದ ಪ್ರಸರಣ ಮಾರ್ಗಗಳನ್ನು ಡ್ರೋನ್ (Drone) ಮೂಲಕ ತಪಾಸಣೆ ನಡೆಸಿ, ಅದಕ್ಕೆ ಸಂಬಂಧಿಸಿದ ದತ್ತಾಂಶ ಮತ್ತು ವರದಿಗಳನ್ನು ಕವಿಪ್ರನಿನಿಗೆ ಸಲ್ಲಿಸಲು ಅರ್ಹ ಏಜೆನ್ಸಿಗಳಿಂದ ಎಂಪ್ಯಾನಲ್‌ಮೆಂಟ್ ನೋಂದಣಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಎಂಪ್ಯಾನಲ್‌ಮೆಂಟ್ ಆದ ಏಜೆನ್ಸಿಗಳು ಕವಿಪ್ರನಿನಿನಲ್ಲಿ ಪ್ರಸರಣ ಮಾರ್ಗಗಳ ತಪಾಸಣೆ ನಡೆಸಲು ಅರ್ಹರಾಗಿರುತ್ತಾರೆ. ನೋಂದಣಿಗೆ ಸಂಬಂಧಿಸಿದಂತೆ ಅರ್ಜಿ ನಮೂನೆ, ನೋಂದಣಿ ಶುಲ್ಕ, ವಿಧಾನ, ನಿಯಮಗಳು ಮತ್ತು ನಿಬಂಧನೆಗಳನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ನ "Empanelment of agencies for Inspection using Drone" ಹೈಪರ್‌ಲಿಂಕ್‌ನಲ್ಲಿ ನೀಡಲಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿ ಅಥವಾ ವಿವರಗಳಿಗಾಗಿ ಕಛೇರಿಯ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಬಹುದು. ಈ ನೋಂದಣಿಯು 03(ಮೂರು) ವರ್ಷಗಳ ಅವಧಿಗೆ ಚಾಲ್ತಿಯಲ್ಲಿರುತ್ತದೆ.
ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ನಿಗಮ ಕಛೇರಿ, 11ನೇ ಮಹಡಿ, ಇಂಧನ ಭವನ,
ಆನಂದ್‌ರಾವ್ ವೃತ್ತ, ಬೆಂಗಳೂರು-560009.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
MESCOM
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು-575004
ದೂರವಾಣಿ: 0824-2885796 CIN: U40109 KA 2002 SGC 030425
ಸಂಖ್ಯೆ: ಮ.ವಿ.ಸ.ಕಂ/ ಅ.ಇಂ(ಯೋ)/ಕಾನಿಇಂ(ಕಾ)/ಸಕಾನಿಇಂ/I/549 ದಿನಾಂಕ: 05.05.2026
ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮಾದರಿಯಲ್ಲಿ ಮಾತ್ರ)
ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ವ್ಯಾಪ್ತಿಯಲ್ಲಿನ ಈ ಕೆಳಕಂಡ ಪರಿವರ್ತಕ ದುರಸ್ತಿ ಕೇಂದ್ರಗಳಲ್ಲಿ ವಿಫಲವಾದ ವಿವಿಧ ಸಾಮರ್ಥ್ಯಗಳ ಕನ್‌ವೆನ್ಷನಲ್ (ಅಲ್ಯೂಮಿನಿಯಂ) ಮತ್ತು 3/4/5-ಸ್ಟಾರ್ ರೇಟೆಡ್ ವಿತರಣಾ ಪರಿವರ್ತಕಗಳನ್ನು ದುರಸ್ತಿ ಮತ್ತು ರೀಕಂಡಿಷನಿಂಗ್ ಮಾಡುವ ಹಾಗೂ ಸಿ.ಎಸ್.ಪಿ ಪರಿವರ್ತಕಗಳನ್ನು ಕನ್‌ವೆನ್ಷನಲ್ ಬೋಲ್ಟ್ ಮತ್ತು ನಟ್ ಪ್ರಕಾರಕ್ಕೆ ಪರಿವರ್ತನೆ ಮಾಡಲು ಒಟ್ಟು ಶೇಕಡವಾರು (%) (ಸಾಮಾಗ್ರಿ, ಕಾರ್ಮಿಕ ಮತ್ತು ಸಾಲ್ವೇಜ್) ಆಧಾರದ ಮೇಲೆ ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸುತ್ತದೆ;

Sl. No.	Name of the distribution transformer repair centre	Bid Enquiry No.
1.	Mangaluru	MESCOM/2026-27/SE0180
2.	Bantwal	MESCOM/2026-27/SE0182
3.	Udupi	MESCOM/2026-27/SE0181
4.	Chikkmagaluru	MESCOM/2026-27/SE0183
5.	Kadur	MESCOM/2026-27/SE0184
6.	Tarikere	MESCOM/2026-27/SE0185
7.	Birur	MESCOM/2026-27/SE0186
8.	Shivamogga	MESCOM/2026-27/SE0187
9.	Thirtahalli	MESCOM/2026-27/SE0192
10.	Sagara	MESCOM/2026-27/SE0188
11.	Hosanagara	MESCOM/2026-27/SE0189
12.	Soraba	MESCOM/2026-27/SE0190
13.	Shikaripura	MESCOM/2026-27/SE0191
14.	Bhadravati	MESCOM/2026-27/SE0193

ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ವೆಬ್‌ಸೈಟ್ https://kppp.karnataka.gov.in ಗೆ ದಿನಾಂಕ 12.05.2026. ಅಥವಾ ನಂತರ ಲಾಗ್ ಆನ್ ಮಾಡಬಹುದು.
ಸಹಿ/-,
ಅಧೀಕ್ಷಕ ಇಂಜಿನಿಯರ್(ವಿ)(ಯೋಜನೆಗಳು)
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಸಂಪರ್ಕಿಸಿ:
ಮೆಸ್ಕಾಂ ಸಹಾಯವಾಣಿ: 1912
9483041912 mescom_official mescom_official
DIPR/DK/KSMCA/173/26-27 dt: 05.05.2026

Quick ನ್ಯೂಸ್

- ಪಾತಕಿ ಮುಖ್ತಾರ್ ಅನ್ಸಾರಿ ಪತ್ನಿ ಅಫ್ಶಾಗಾಗಿ 61 ಕಡೆಗಳಲ್ಲಿ ದಾಳಿ ನಡೆಸಿ ಶೋಧ ಕೈಗೊಂಡ ಉತ್ತರ ಪ್ರದೇಶ ಪೊಲೀಸರು
- ಮದ್ಯ ಹಗರಣ ಕೇಸ್‌ನಲ್ಲಿ ಆರೋಪಿ ಅರವಿಂದ್ ಕೇಜ್ರಿವಾಲ್ ಪರವಾಗಿ ಅಮಿಕಸ್ ಕ್ಯೂರಿ ನೇಮಿಸಲು ದಿಲ್ಲಿ ಹೈಕೋರ್ಟ್ ನಿರ್ಧಾರ
- ರಾಹುಲ್ ಗಾಂಧಿ ಖಾಸಗಿ ಕಾರ್ಯದರ್ಶಿ ಎಂದು ಹೇಳಿಕೊಂಡು ಕಾಂಗ್ರೆಸ್ ಟಿಕೆಟ್ ಕೊಡಿಸುವುದಾಗಿ 25 ಲಕ್ಷ ವಂಚಿಸಿದ್ದ ಕನಿಷ್ಕ್ ಸಿಂಗ್ ಬಂಧನ
- ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾದ ಪಂಜಾಬ್ ಸಿಎಂ ಭಗವಂತ್ ಮಾನ್; ಆಪ್ ತೊರೆದ 7 ಸಂಸದರ ವಾಪಸಾತಿಗೆ ಸೂಚಿಸಲು ಮನವಿ
- ರಾಜಸ್ಥಾನದ ಬನ್ಸವಾರಾದಲ್ಲಿರುವ ಮಾಹಿ ನದಿಯಲ್ಲಿ ದೋಣಿ ಮಗುಚಿ ಒಬ್ಬ ಬಾಲಕ ಸೇರಿದಂತೆ ಮೂವರು ನಾಪತ್ತೆ
- ಬುಧವಾರ ಕೋಲ್ಕೊತಾದಲ್ಲಿ ಮಮತಾ ಭೇಟಿ ಮಾಡಲಿರುವ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್, ಮತದಾನ ವೇಳೆ ಇವಿಎಂ ಸಮಸ್ಯೆಗಳ ಕುರಿತು ಚರ್ಚೆ
- 'ಲಾಟರಿ ಕಿಂಗ್' ಸ್ಯಾಂಟಿಯಾಗೊ ಮಾರ್ಟಿನ್ ಅವರ ಕುಟುಂಬದ ಮೂವರು ತಮಿಳುನಾಡು, ಪುದುಚೇರಿ ವಿಧಾನಸಭೆಯಲ್ಲಿ ಗೆದ್ದು ಶಾಸಕರಾಗಿದ್ದಾರೆ. ಮಾರ್ಟಿನ್ ಪುತ್ರ ಚಾರ್ಲ್ಸ್ ಸ್ವಂತ ಪಕ್ಷ ಸ್ಥಾಪಿಸಿ ಎನ್‌ಡಿಎ ಜತೆಗೂಡಿದ್ದರು.

ನೀವೇನು ದೇಶದ ಪ್ರಧಾನ ಅರ್ಚಕರೇ?

ಹೊಸದಿಲ್ಲಿ: ಶಬರಿಮಲೆ ದೇಗುಲದಲ್ಲಿ ಮಹಿಳೆಯರ ಪ್ರವೇಶ ನಿರ್ಬಂಧಿಸಿದ 2018ರ ಆದೇಶ ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಭಾರತೀಯ ಯುವ ವಕೀಲರ ಸಂಘವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ವಕೀಲರ ಸಂಘ ಸಲ್ಲಿಸಿದ್ದ ಪಿಐಎಲ್ ವಿಚಾರಣೆ ನಡೆಸಿದ ಸಿಜೆಐ ಸೂರ್ಯಕಾಂತ್, ನ್ಯಾ.ಬಿ.ವಿ.ನಾಗರತ್ನ, ನ್ಯಾ.ಎಂ.ಎಂ. ಸುಂದರೇಶ್, ನ್ಯಾ.ಅರವಿಂದ್ ಕುಮಾರ್, ನ್ಯಾ.ಅಗಸ್ಟಿನ್ ಜಾರ್ಜ್ ಮಸಿಹ್, ನ್ಯಾ.ಪ್ರಸನ್ನ ಬಿ.ವರಲೆ. ನ್ಯಾ. ಆರ್.ಮಹಾದೇವನ್, ನ್ಯಾ. ಜೋಯ್ಮಲ್ಯ ಬಾಗ್ಚಿ, ನ್ಯಾ.ಅಹ್ಸನುದ್ದೀನ್ ಅಮಾನುಲ್ಲಾ ಅವರಿದ್ದ ಸಾಂವಿಧಾನಿಕ ಪೀಠ, ದೇವಾಲಯದೊಳಗೆ ಮಹಿಳಾ ಪ್ರವೇಶ ಕುರಿತು ವಕೀಲರ ಸಂಘವೇಕೆ ಅರ್ಜಿ ಸಲ್ಲಿಸಿದೆ. ವಕೀಲರ ಸಂಘಕ್ಕೂ ದೇಗುಲ, ಮಹಿಳೆಯರ ಪ್ರವೇಶ, ಸಾಂಪ್ರದಾಯಿಕ ಕಟ್ಟಳೆಗಳ ವಿಚಾರ ನಿಮಗೇಕೆ ಎಂದು ಪ್ರಶ್ನಿಸಿತು.

''ಅರ್ಜಿ ಸಲ್ಲಿಸಲು ನೀವು ಯಾರು. ನಿಮಗೆ ಇದರ ಕಾಳಜಿ ಏಕೆ ಎಂಬುದನ್ನು ತಿಳಿಸುವಿರಾ,'' ಎಂದು ಅರ್ಜಿದಾರರ ಪರ ವಕೀಲರನ್ನು ನ್ಯಾ.ನಾಗರತ್ನ ಪ್ರಶ್ನಿಸಿದರು. ನ್ಯಾಯಮೂರ್ತಿ ಪ್ರಶ್ನೆಗೆ ''ದೇವರ ಮೇಲಿನ ನಂಬಿಕೆಯುಳ್ಳ ವ್ಯಕ್ತಿಯಾಗಿ ಅರ್ಜಿ ಸಲ್ಲಿಸಿರುವೆ. ಅಯ್ಯಪ್ಪ ದೇವರು ಯುವತಿಯರು ದೇಗುಲ ಪ್ರವೇಶ ಇಷ್ಟಪಡುವುದಿಲ್ಲ, ಅದು ಕೇವಲ ನಂಬಿಕೆಯಲ್ಲ, ಅದೊಂದು ಸಂಪ್ರದಾಯ,'' ಎಂದು ವಕೀಲರು ಉತ್ತರ ನೀಡಿದರು. ವಕೀಲರ ಮಾತಿಗೆ ಗರಂ ಆದ ಸಿಜೆಐ ಸೂರ್ಯಕಾಂತ್, ''ನೀವೇನು ದೇಶದ ಪ್ರಧಾನ ಅರ್ಚಕರೆ,'' ಎಂದು ಪ್ರಶ್ನೆ ಮಾಡಿದರು. ''ನಿಮಗೆ ಏಕೆ ಈ ಕಾಳಜಿ, ನಿಮ್ಮ ಕೆಲಸ ನೀವು ನೋಡಿಕೊಳ್ಳಿ,'' ಎಂದು ನ್ಯಾ.ನಾಗರತ್ನ ತಾಕೀತು ಮಾಡಿದರು.

''ವಕೀಲರ ಸಂಘದ ಪರವಾಗಿ ಕೆಲಸ ಮಾಡಿ. ಯುವ ವಕೀಲರ ಶ್ರೇಯೋಭಿವೃದ್ಧಿಗೆ ಶ್ರಮಿಸಿ. ಗ್ರಾಮೀಣ ಪ್ರದೇಶದಲ್ಲಿರುವ ಯುವ ವಕೀಲರನ್ನು ಸಬಲಗೊಳಿಸಿ. ಅದನ್ನು ಬಿಟ್ಟು ಸಲ್ಲದ ವಿಚಾರಕ್ಕೆ ಮೂಗು ತೂರಿಸಬೇಡಿ,'' ಎಂದು ನಾಗರತ್ನ ಸಲಹೆ ನೀಡಿದರು.

ಭಾರತೀಯ ಪತ್ರಕರ್ತರಿಗೆ ಪುಲಿಟ್ಜರ್ ಪ್ರಶಸ್ತಿ

ನ್ಯೂಯಾರ್ಕ್: ಭಾರತೀಯ ಪತ್ರಕರ್ತರಾದ ಆನಂದ್ ಆರ್.ಕೆ ಮತ್ತು ಸುಪರ್ಣಾ ಶರ್ಮಾ ಅವರು ಡಿಜಿಟಲ್ ಕಣ್ಗಾವಲು ಮತ್ತು ಸೈಬರ್ ವಂಚನೆಯನ್ನು ಬೆಳಕಿಗೆ ತಂದಿದ್ದಕ್ಕಾಗಿ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಇಲ್ಲಸ್ಟ್ರೇಟೆಡ್ ರಿಪೋರ್ಟಿಂಗ್ ಮತ್ತು ಕಾಮೆಂಟರಿ ವಿಭಾಗದಲ್ಲಿ ಘೋಷಿಸಲಾದ ಈ

ಪ್ರಶಸ್ತಿಯನ್ನು ಆನಂದ್ ಮತ್ತು ಶರ್ಮಾ ಗೆದ್ದಿದ್ದಾರೆ. ಬ್ಲೂಮ್‌ಬರ್ಗ್‌ನ ನಟಾಲಿ ಒಬಿಕೊ ಪಿಯರ್ಸನ್ ಅವರೊಂದಿಗೆ ಭಾರತೀಯ ಪತ್ರಕರ್ತರು ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ಪುಲಿಟ್ಜರ್ ಬಹುಮಾನಗಳ ವೆಬ್ ಸೈಟ್ ಪ್ರಕಾರ, ಬ್ಲೂಮ್ ಬರ್ಗ್‌ಗಾಗಿ ನಿರ್ಮಿಸಲಾದ 'ಟ್ರ್ಯಾಪ್ಡ್' ಎಂಬ ಪ್ರಶಸ್ತಿ ವಿಜೇತ ಕೃತಿಯು, ಕಣ್ಗಾವಲು ಮತ್ತು ಡಿಜಿಟಲ್ ವಂಚನೆಗಳಿಂದ ಎದುರಾಗುತ್ತಿರುವ ಜಾಗತಿಕ ಸವಾಲುಗಳನ್ನು ಒತ್ತಿಹೇಳುತ್ತದೆ. ದೃಶ್ಯಗಳು ಮತ್ತು ಪದಗಳ ಮಿಶ್ರಣವನ್ನು ಬಳಸಿಕೊಂಡು ಫೋನ್ ಮೂಲಕ ಡಿಜಿಟಲ್ ಬಂಧನದಡಿಯಲ್ಲಿ ಸಿಲುಕಿರುವ ಭಾರತದ ನರವಿಜ್ಞಾನಿಯ ಸಂಕಟವನ್ನು ವಿವರಿಸುತ್ತದೆ. ಕೊಲಂಬಿಯಾ ವಿಶ್ವವಿದ್ಯಾಲಯವು ನಿರ್ವಹಿಸುವ ಪುಲಿಟ್ಜರ್ ಪ್ರಶಸ್ತಿಗಳನ್ನು ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತ ಸಂಯೋಜನೆಯಲ್ಲಿ ಅತ್ಯುನ್ನತ ಗೌರವಗಳ ಪೈಕಿ ಪ್ರಮುಖವಾಗಿದೆ.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ-1,2&3/ಇ-ಟೆಂಡರ್ ಪ್ರಕಟಣೆ/2026-27/283, ದಿನಾಂಕ: 04.05.2026
ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ
1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-3 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ ಸಿಎಂಐಡಿಪಿ ಯೋಜನೆ ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಯಾದಗಿರಿ ತಾಲೂಕಿನ (1)35522 ಮತ್ತು ಶಹಾಪೂರ ತಾಲೂಕಿನ (1)35360 ಹಾಗೂ ಸುರಪೂರ ತಾಲೂಕಿನ (1)34047/2ನೇ ಕರೆ ಒಟ್ಟು 03 (ಮೂರು) ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 2) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ.100.00 ಲಕ್ಷಗಳು ಹಾಗೂ ಗರಿಷ್ಠ ರೂ:200.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ:ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) ಪ್ರೀ ಬಿಡ್ ಮೀಟಿಂಗ್ ದಿನಾಂಕ: 14.05.2026 (11.30 ಗಂಟೆ ನಂತರ) 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:16.05.2026 (13.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 19.05.2026 (16.00 ಗಂಟೆವರೆಗೆ) 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 20.05.2026 (16.30 ಗಂಟೆ ನಂತರ) 9) ಆರ್ಥಿಕ ಬಿಡ್ ತೆರೆಯುವ ದಿನಾಂಕ:22.05.2026 (11.30 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ:https://kppp.karnataka.gov.in
ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ವಾ.ಸಾ.ಸಂ.ಇ/ಯಾದಗಿರಿ/51/ಕೆ.ಎಸ್.ಎಂ.ಸಿ.&ಎ/2026-27 ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಿಮಾನದೊಳಗೆ ಪವರ್ ಬ್ಯಾಂಕ್‌ಗೆ ಬೆಂಕಿ: ಪ್ರಯಾಣಿಕರ ಸುರಕ್ಷಿತ ಸ್ಥಳಾಂತರ

ಹೈದರಾಬಾದ್: ನಗರದಿಂದ ಚಂಡೀಗಢಕ್ಕೆ ತೆರಳುತ್ತಿದ್ದ ಇಂಡಿಗೊ ವಿಮಾನದಲ್ಲಿ ಪ್ರಯಾಣಿಕರೊಬ್ಬರ ಪವರ್ ಬ್ಯಾಂಕ್‌ನಲ್ಲಿ ಬೆಂಕಿ ಹತ್ತಿಕೊಂಡ ಘಟನೆ ಮಂಗಳವಾರ ನಡೆದಿದೆ. ಇಂಡಿಗೊ ವಿಮಾನ (6ಇ 108) ಚಂಡೀಗಢದಲ್ಲಿ ಇಳಿದು ರನ್‌ವೇನಲ್ಲಿ ನಿಂತಿದ್ದಾಗ ಈ ಘಟನೆ ಸಂಭವಿಸಿದೆ. ತಕ್ಷಣ ವಿಮಾನದ ಸಿಬ್ಬಂದಿ ಸಮಯಪ್ರಜ್ಞೆ ಮೆರೆದು ಬೆಂಕಿ ನಂದಿಸಿದರು.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹಂಚಿಕೊಳ್ಳಲಾದ ದೃಶ್ಯಗಳ ಪ್ರಕಾರ, ಬೆಂಕಿಯಿಂದಾಗಿ ವಿಮಾನದ ಒಳಗಡೆ ಹೊಗೆ ತುಂಬಿಕೊಂಡಿತ್ತು. ಕೂಡಲೇ ಎಲ್ಲಾ ಪ್ರಯಾಣಿಕರನ್ನು ತುರ್ತು

ನಿರ್ಗಮನದ ಮೂಲಕ ವಿಮಾನದಿಂದ ಕೆಳಗಿಳಿಸಿ ಟರ್ಮಿನಲ್‌ಗೆ ಕರೆದೊಯ್ಯಲಾಯಿತು. ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದು, ಯಾವುದೇ ಗಾಯಗಳಾದ ಬಗ್ಗೆ ವರದಿಯಾಗಿಲ್ಲ.

ಘಟನೆಯ ಬಗ್ಗೆ ಪ್ರತಿಕ್ರಿಯಿಸಿರುವ ಇಂಡಿಗೊ ವಕ್ತಾರರು, ''ವಿಮಾನ ಇಳಿದ ನಂತರ ಪ್ರಯಾಣಿಕರೊಬ್ಬರ ವೈಯಕ್ತಿಕ ಎಲೆಕ್ಟ್ರಾನಿಕ್ ಸಾಧನದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ,'' ಎಂದು ತಿಳಿಸಿದ್ದಾರೆ.

ವಿಮಾನ ಪ್ರಯಾಣದಲ್ಲಿ ಪವರ್ ಬ್ಯಾಂಕ್‌ಗಳ ಬಳಕೆಗೆ ಸಂಬಂಧಿಸಿದಂತೆ ಪ್ರಮುಖ ನಿಯಮಗಳಿವೆ. ಪವರ್ ಬ್ಯಾಂಕ್‌ಗಳನ್ನು ಹ್ಯಾಂಡ್ ಲಗೇಜ್‌ನಲ್ಲಿ ಮಾತ್ರ ಕೊಂಡೊಯ್ಯಲು ಅವಕಾಶವಿದೆ. ಆದರೆ ಪ್ರಯಾಣದ ಅವಧಿಯಲ್ಲಿ ಫೋನ್ ಅಥವಾ ಇತರ ಸಾಧನಗಳನ್ನು ಚಾರ್ಜ್ ಮಾಡಲು ಪವರ್ ಬ್ಯಾಂಕ್‌ಗಳನ್ನು ಬಳಸುವಂತಿಲ್ಲ.

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಬುಧವಾರ,6 ಮೇ 2026
ಇಂದಿನ ತಾಪಮಾನ 23° ಕನಿಷ್ಠ 33° ಗರಿಷ್ಠ
X.com /vijaykarnataka facebook.com/vijaykarnataka www.vijaykarnataka.com

ನಗರದಲ್ಲಿ ಮಂಗಳವಾರ ಸಂಜೆ ಸಾಧಾರಣ ಮಳೆ ಸುರಿಯಿತು.

ನಾಳೆ ಚುನಾವಣಾ ಆಯೋಗದ ಮಹತ್ವದ ಸಭೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ಚುನಾವಣಾ ದಿನಾಂಕ ನಿಗದಿಪಡಿಸುವ ಸಂಬಂಧ ರಾಜ್ಯ ಚುನಾವಣಾ ಆಯೋಗ ಮೇ 7ರಂದು ಮಹತ್ವದ ಸಭೆ ಕರೆದಿದೆ.

5 ನಗರ ಪಾಲಿಕೆಗಳಿಗೆ ಚುನಾವಣೆ ದಿನಾಂಕ ನಿಗದಿ ಉದ್ದೇಶ

ಅಂದು ಬೆಳಗ್ಗೆ 11 ಗಂಟೆಗೆ ವಿಧಾನಸೌಧದ 3ನೇ ಮಹಡಿಯ ಕೊಠಡಿ ಸಂಖ್ಯೆ 334ರಲ್ಲಿ ನಡೆಯಲಿರುವ ಈ ಸಭೆಯಲ್ಲಿ ಜಿಬಿಎ ಪದನಿಮಿತ್ತ ಅಧ್ಯಕ್ಷರೂ ಆಗಿರುವ ಸಿಎಂ ಸಿದ್ದರಾಮಯ್ಯ, ಉಪಾಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಸದಸ್ಯರು ಪಾಲ್ಗೊಳ್ಳಲಿದ್ದಾರೆ.

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ-2024ರ ಅಧಿನಿಯಮ 34(4)ರ ಅನ್ವಯ ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಚುನಾವಣಾ ದಿನಾಂಕ ನಿಗದಿಪಡಿಸಲು ಉದ್ದೇಶಿಸಿದೆ. ಈ ನಡುವೆ, ಜಿಬಿಎ ವ್ಯಾಪ್ತಿಯ 5 ನಗರ ಪಾಲಿಕೆಗಳ ಚುನಾವಣೆಗೆ ಕಾಲಮಿತಿಯನ್ನು ಸೆ. 30ರವರೆಗೆ ವಿಸ್ತರಿಸುವಂತೆ ರಾಜ್ಯ ಸರಕಾರವೇ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ. ಜನಗಣತಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಜತೆಗೆ, ಮೇ-ಜೂನ್‌ನಲ್ಲಿ ನಡೆಯಲಿರುವ ಪರೀಕ್ಷೆಗಳಿಗೆ ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ಹೀಗಾಗಿ, ಚುನಾವಣಾ ಕರ್ತವ್ಯಕ್ಕೆ ಸಿಬ್ಬಂದಿ ಒದಗಿಸುವುದು ಕಷ್ಟ ಎಂದು ಸರಕಾರ ಆಯೋಗಕ್ಕೆ ಮನವರಿಕೆ ಮಾಡಿಕೊಟ್ಟಿದೆ.

ಈ ಮಧ್ಯೆ, 5 ಪಾಲಿಕೆಗಳಿಗೆ ಚುನಾವಣೆ ನಡೆಸಲು ಸಿದ್ಧವಿದ್ದರೂ ಸರಕಾರ ಹಣವನ್ನೂ ನೀಡುತ್ತಿಲ್ಲ, ಸಿಬ್ಬಂದಿಯನ್ನೂ ಒದಗಿಸುತ್ತಿಲ್ಲ ಎಂದು ಆಯೋಗ ಸುಪ್ರೀಂಕೋರ್ಟ್‌ಗೆ ತಿಳಿಸಿದೆ. ನಗರ ಪಾಲಿಕೆಗಳಿಗೆ ಜೂನ್ 30ರೊಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಸಿಇಐಆರ್ ನೆರವು: 692 ಮೊಬೈಲ್ ಜಪ್ತಿ

ಬೆಂಗಳೂರು: ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ನೆರವಿನಿಂದ ಈಶಾನ್ಯ ವಿಭಾಗದ ಪೊಲೀಸರು, ಕಳವಾಗಿದ್ದ 1.75 ಕೋಟಿ ರೂ. ಮೌಲ್ಯದ 692 ಮೊಬೈಲ್‌ಗಳನ್ನು ಪತ್ತೆ ಹಚ್ಚಿ ಮಾಲೀಕರಿಗೆ ಹಿಂದಿರುಗಿಸಿದ್ದಾರೆ.

ಈಶಾನ್ಯ ವಿಭಾಗದ 14 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮೊಬೈಲ್ ಕಳೆದುಕೊಂಡವರು ಪೊಲೀಸರಿಗೆ ದೂರು ನೀಡಿದ್ದರು. ಇ-ಲಾಸ್ಟ್ ಹಾಗೂ ಸಿಇಐಆರ್‌ನಲ್ಲಿ ದೂರು ನಮೂದಿಸಿದ್ದರು. ಸಿಇಐಆರ್ ವೆಬ್‌ಸೈಟ್‌ನಲ್ಲಿ ನಿರಂತರವಾಗಿ ನಿಗಾ ವಹಿಸಿದ್ದ ಪೊಲೀಸರು, 692 ಮೊಬೈಲ್ ಪುನಃ ಸಕ್ರಿಯವಾಗಿರುವುದು ಗೊತ್ತಾದ ಕೂಡಲೇ ಕಾರ್ಯಪ್ರವೃತ್ತರಾಗಿ ವಶಕ್ಕೆ ಪಡೆದಿದ್ದಾರೆ.

ಈ ಪೈಕಿ ಯಲಹಂಕ-83, ಯಲಹಂಕ ನ್ಯೂ ಟೌನ್-76, ಕೊಡಿಗೇಹಳ್ಳಿ-66, ವಿದ್ಯಾರಣ್ಯಪುರ-86, ಸಂಪಿಗೆಹಳ್ಳಿ -107, ಕೊತ್ತನೂರು-70, ಬಾಗಲೂರು-85, ಅಮೃತಹಳ್ಳಿ-66, ಚಿಕ್ಕಜಾಲ-34, ದೇವನಹಳ್ಳಿ-12 ಹಾಗೂ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ 7 ಮೊಬೈಲ್ ಸೇರಿವೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ತಿಳಿಸಿದರು. ''ಸಾರ್ವಜನಿಕರು ಮೊಬೈಲ್ ಕಳೆದುಕೊಂಡ ಕೂಡಲೇ ಸಿಇಐಆರ್ ಪೋರ್ಟಲ್ ಅಥವಾ ಪೊಲೀಸರಿಗೆ ದೂರು ನೀಡಿದರೆ ಮೊಬೈಲ್ ಪತ್ತೆ ಮಾಡಲು ಅನುಕೂಲವಾಗುತ್ತದೆ,'' ಎಂದು ಆಯುಕ್ತರು ಸಲಹೆ ಮಾಡಿದರು.

ನಟ ದಳಪತಿ ವಿಜಯ್ ಅವರ ಟಿವಿಕೆ ಪಕ್ಷದ ಜಯಭೇರಿಯ ಹಿನ್ನೆಲೆಯಲ್ಲಿ ನಗರದ ಅಭಿಮಾನಿಗಳು ವಿಜಯ್ ಅವರ ಕಟೌಟ್ ಅಳವಡಿಸಿ ಸಂಭ್ರಮಿಸಿದರು.

ನಗರದಲ್ಲಿ ನಿತ್ಯ 6500 ಟನ್ ತ್ಯಾಜ್ಯ ಉತ್ಪತ್ತಿ | 29 ಲಕ್ಷ ಮನೆ, 5 ಲಕ್ಷ ವಾಣಿಜ್ಯ ಮಳಿಗೆಗಳಿಂದ ತ್ಯಾಜ್ಯ ಸಂಗ್ರಹ

ಏರದ ಕಸ ವಿಂಗಡಣೆ ಪ್ರಮಾಣ, ತಪ್ಪದ ಬವಣೆ

■ **ನಾಗಪ್ಪ ನಾಗನಾಯಕನಹಳ್ಳಿ** ಬೆಂಗಳೂರು
nagappa.narayanappa@timesofindia.com

ಮಹಾನಗರವನ್ನು ತೀವ್ರವಾಗಿ ಕಾಡುತ್ತಿರುವ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತವು (ಬಿಎಸ್‌ಡಬ್ಲ್ಯುಎಂಎಲ್) ಹೆಣಗಾಡುತ್ತಿದ್ದರೂ, ತ್ಯಾಜ್ಯ ವಿಂಗಡಣೆಯಲ್ಲಿ ನಿರೀಕ್ಷಿತ ಪ್ರಗತಿ ಕಾಣುತ್ತಿಲ್ಲ. ಹೀಗಾಗಿಯೇ, ಕಸದ ಸಮಸ್ಯೆ ಆಗಾಗ್ಗೆ ಉಲ್ಬಣಗೊಳ್ಳುತ್ತಿದೆ.

ನಗರದ 714 ಚ.ಕಿ.ಮೀ. ಪ್ರದೇಶದ 29 ಲಕ್ಷ ಮನೆಗಳು ಹಾಗೂ 5 ಲಕ್ಷದಷ್ಟು ವಾಣಿಜ್ಯ ಮಳಿಗೆಗಳಿಂದ ಪ್ರತಿನಿತ್ಯ 6500 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಈ ಹಿಂದಿನ ಬಿಬಿಎಂಪಿಯು 2017ರ ಫೆ.1ರಿಂದಲೇ ಕಸ ವಿಂಗಡಣೆ ಕಡ್ಡಾಯಗೊಳಿಸಿತ್ತು. ಆರಂಭದಲ್ಲಿ ಶೇ. 50ಕ್ಕೆ ಏರಿದ್ದ ತ್ಯಾಜ್ಯ ವಿಂಗಡಣೆ ಪ್ರಮಾಣವು ಕ್ರಮೇಣ ಕ್ಷೀಣಿಸಿತು.

ಗುತ್ತಿಗೆದಾರರ ಅಸಹಕಾರ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ತ್ಯಾಜ್ಯ ವಿಂಗಡಣೆ ನಿಯಮವು ಹಳ್ಳ ಹಿಡಿಯಿತು. ಕಸ ವಿಂಗಡಣೆ ಕಡ್ಡಾಯಗೊಳಿಸಿ ದಶಕ ಉರುಳಿದರೂ, ಅದು ಬಿಡಿಸಲಾಗದ ಕಗ್ಗಂಟಾಗಿಯೇ ಉಳಿದಿದೆ. ಪರಿಣಾಮ, ಕೋಟ್ಯಂತರ ರೂ. ವೆಚ್ಚ ಮಾಡಿ ನಿರ್ಮಿಸಿದ್ದ 7 ತ್ಯಾಜ್ಯ ಸಂಸ್ಕರಣಾ ಘಟಕಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಕೆಪಿಟಿಸಿಎಲ್‌ನ ಬಿಡದಿ ಘಟಕ ಹೊರತುಪಡಿಸಿ, ಉಳಿದ ಯಾವುದೇ ಘಟಕಗಳಲ್ಲಿ ಹಸಿ ಕಸದಿಂದ ವಿದ್ಯುತ್ ಉತ್ಪಾದಿಸುವ ಕಾರ್ಯ ಆರಂಭವಾಗಿಲ್ಲ.

ಹೊಸ ನಿಯಮಕ್ಕೂ ಏರದ ವಿಂಗಡಣೆ: ಘನತ್ಯಾಜ್ಯ ನಿರ್ವಹಣೆಯನ್ನು ಹೆಚ್ಚು ಸುಗಮ, ವೈಜ್ಞಾನಿಕ ಹಾಗೂ ಪರಿಣಾಮಕಾರಿಯಾಗಿಸಲು 2016ರ ನಿಯಮಗಳನ್ನು ಪರಿಷ್ಕರಿಸಿ ನೂತನ ಘನತ್ಯಾಜ್ಯ ನಿರ್ವಹಣಾ ನಿಯಮಗಳು-2026 ಜಾರಿಗೆ ತರಲಾಗಿದೆ. ರಸ್ತೆ ಬದಿ ಹಾಗೂ ಖಾಲಿ ಜಾಗಗಳಲ್ಲಿ ಕಸ ಬಿಸಾಡದೆ, ಮನೆ-ಮನೆಗೆ ಭೇಟಿ ನೀಡುವ ಆಟೊ ಟಿಪ್ಪರ್‌ಗಳಿಗೆ ತ್ಯಾಜ್ಯ ನೀಡಬೇಕು. ಮಿಶ್ರ ತ್ಯಾಜ್ಯ ನೀಡದೆ, ಹಸಿ, ಒಣ, ನೈರ್ಮಲ್ಯ ಮತ್ತು ವಿಶೇಷ ಕಾಳಜಿಯ ಕಸವನ್ನು ಪ್ರತ್ಯೇಕಿಸಿ ನೀಡಬೇಕೆಂದು ಬಿಎಸ್‌ಡಬ್ಲ್ಯುಎಂಎಲ್ ಮನವಿ ಮಾಡಿಕೊಂಡಿತ್ತು.

ಸಂಸ್ಕರಣಾ ಘಟಕಗಳ ನಿರ್ವಹಣೆಗೆ ವಾರ್ಷಿಕ ಅಂದಾಜು 50 ಕೋಟಿ ರೂ. ವೆಚ್ಚ

ಪ್ರತಿದಿನ ಭೂಭರ್ತಿ ಘಟಕ ಸೇರುತ್ತಿರುವ ಕಸದ ಪ್ರಮಾಣ 2800 ಟನ್

ಕಸ ಸಂಗ್ರಹ, ವಿಲೇವಾರಿಗೆ ಸುಮಾರು 1000 ಕೋಟಿ ರೂ. ಖರ್ಚು

ತ್ಯಾಜ್ಯ ವಿಂಗಡಣೆಯಲ್ಲಿ ಪುಲಕೇಶಿನಗರ, ಸರ್ವಜ್ಞನಗರ ವಿಭಾಗ ಲಾಸ್ಟ್

ಅಲ್ಲದೆ, ಏ.1ರಿಂದ ಕಸ ವಿಂಗಡಣೆ ಕಡ್ಡಾಯಗೊಳಿಸಿ, ಪ್ರತ್ಯೇಕಿಸಿ ಕೊಡದ ಮನೆಗಳಿಂದ ಕಸ ಪಡೆಯುವುದಿಲ್ಲ ಎಂಬ ಎಚ್ಚರಿಕೆ ನೀಡಲಾಗಿತ್ತು. ಆದರೂ, ನಗರದ ಬಹುತೇಕ ಪ್ರದೇಶಗಳಲ್ಲಿ ತ್ಯಾಜ್ಯ ವಿಂಗಡಣೆ ಪ್ರಕ್ರಿಯೆ ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲ.

ತಗ್ಗದ ಮಿಶ್ರ ತ್ಯಾಜ್ಯದ ಪ್ರಮಾಣ: ಬಹುತೇಕ ನಿವಾಸಿಗಳು ಮೂಲದಲ್ಲೇ ಕಸ ವಿಂಗಡಿಸಿ ಕೊಟ್ಟರೂ ಗುತ್ತಿಗೆದಾರರ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಆಟೊ ಟಿಪ್ಪರ್ ಚಾಲಕರು, ಸಹಾಯಕರು ಅದನ್ನು ಮಿಶ್ರ ಮಾಡಿ ಕಾಂಪ್ಯಾಕ್ಟರ್‌ಗಳಿಗೆ ವರ್ಗಾಯಿಸುತ್ತಿದ್ದಾರೆ.

ಬಹುತೇಕರ ಪಾಲಿಗೆ 'ಕಸವೇ ರಸ'ವಾಗಿರುವ ಹಿನ್ನೆಲೆಯಲ್ಲಿ ತ್ಯಾಜ್ಯ ಸಮಸ್ಯೆ ಬಗೆಹರಿಯುವುದು ಇಷ್ಟವಿಲ್ಲ. ಹೀಗಾಗಿ, ಸಮರ್ಪಕ ತ್ಯಾಜ್ಯ ವಿಲೇವಾರಿ ಕಾರ್ಯಕ್ಕೆ ಅಡ್ಡಿಪಡಿಸುತ್ತಲೇ ಬರುತ್ತಿದ್ದಾರೆ. ಪರಿಣಾಮ, ತ್ಯಾಜ್ಯ ವಿಂಗಡಣೆ ಪ್ರಮಾಣ ಹೆಚ್ಚಳವಾಗುತ್ತಿಲ್ಲ.

ಹಸಿ ಕಸದಿಂದ ಕಾಂಪೋಸ್ಟ್ ಗೊಬ್ಬರ ತಯಾರಿಸಿ, ಉದ್ಯಾನ, ಕೈತೋಟಕ್ಕೆ ಬಳಸುವವರ ಸಂಖ್ಯೆಯೂ ಬೆರಳೆಣಿಕೆಯಷ್ಟು ಮಾತ್ರ. ಕಸ ಸಂಗ್ರಹ, ವಿಲೇವಾರಿ ಮತ್ತು ಸಂಸ್ಕರಣಾ ಘಟಕಗಳ ನಿರ್ವಹಣೆಗೆ ಪ್ರತಿ ವರ್ಷವೂ ಒಂದು ಸಾವಿರ ಕೋಟಿ ರೂ.ಗಿಂತ ಹೆಚ್ಚು ಖರ್ಚು ಮಾಡಲಾಗುತ್ತಿದೆ. ಆದರೂ, ಕಸದ ಸಮಸ್ಯೆ ಪದೇ ಪದೆ ಬಿಗಡಾಯಿಸುತ್ತಲೇ ಇದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ 7 ಸಂಸ್ಕರಣಾ ಘಟಕಗಳ ಪೈಕಿ 1 ಸ್ಥಗಿತಗೊಂಡಿದೆ. ಉಳಿದವು ಕೂಡ ತಮ್ಮ ಸಾಮರ್ಥ್ಯಕ್ಕೆ ತಕ್ಕಷ್ಟು ಕಸ ಪಡೆಯುತ್ತಿಲ್ಲ. 7 ಘಟಕಗಳು ಪ್ರತಿದಿನ 2020 ಟನ್‌ನಷ್ಟು ಸಂಸ್ಕರಣಾ ಸಾಮರ್ಥ್ಯ ಹೊಂದಿವೆ. ಆದರೆ, ಅಲ್ಲಿ ವಿಲೇವಾರಿಯಾಗುತ್ತಿರುವುದು 1700 ಟನ್ ಮಾತ್ರ.

ಗುತ್ತಿಗೆದಾರರ ಅಸಹಕಾರದ ಆರೋಪ: ಜಿಬಿಎ ವ್ಯಾಪ್ತಿಯಲ್ಲಿರುವ 28 ವಿಧಾನಸಭೆ ಕ್ಷೇತ್ರಗಳಲ್ಲಿ ಪ್ರಾಥಮಿಕ ತ್ಯಾಜ್ಯ ಸಂಗ್ರಹ, ಎರಡನೇ ಹಂತದ ತ್ಯಾಜ್ಯ ವರ್ಗಾವಣೆ, ರಸ್ತೆ ಗುಡಿಸಿದ ಕಸ ಸಂಗ್ರಹಿಸಲು 544.91 ಕೋಟಿ ರೂ. ವೆಚ್ಚದಲ್ಲಿ ಬಿಎಸ್‌ಡಬ್ಲ್ಯುಎಂಎಲ್‌ನಿಂದ 33 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದು ಅಂತಿಮಗೊಳಿಸಲಾಗಿದೆ. ಈ ಟೆಂಡರ್ ಪದ್ಧತಿಯಲ್ಲಿ ವಿಂಗಡಿಸಿದ ಕಸವನ್ನಷ್ಟೇ ಸಂಗ್ರಹಿಸುವ ಕುರಿತು ಹಲವು ಷರತ್ತುಗಳನ್ನು ವಿಧಿಸಲಾಗಿದೆ.

ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಹೀಗಾಗಿ, ಟೆಂಡರ್ ಪದ್ಧತಿ ಜಾರಿಯಾಗಿಲ್ಲ. ನಗರದಲ್ಲಿ ಶೇ. 50ರಷ್ಟು ಕಸ ವಿಂಗಡಣೆಯಾಗುತ್ತಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಹೇಳುತ್ತಿದೆ. ಆದರೆ, ಹಸಿ ಕಸ ಲಭ್ಯವಾಗುತ್ತಿರುವುದು ಕೇವಲ 2200 ಟನ್ ಅಷ್ಟೇ. ಮಹಾಲಕ್ಷ್ಮಿ ಲೇಔಟ್, ಗೋವಿಂದರಾಜನಗರ, ದಾಸರಹಳ್ಳಿ ವಿಭಾಗದಲ್ಲಿ ಶೇ 100ರಷ್ಟು ತ್ಯಾಜ್ಯ ವಿಂಗಡಣೆಯಾಗುತ್ತಿದೆ. ಸರ್ವಜ್ಞನಗರ, ಪುಲಕೇಶಿನಗರ, ಬಸವನಗುಡಿ, ಬ್ಯಾಟರಾಯನಪುರ ವಿಭಾಗಗಳಲ್ಲಿ ವಿಂಗಡಣೆ ಪ್ರಮಾಣವು ಶೇ. 30ರ ಗಡಿ ದಾಟುತ್ತಿಲ್ಲ.

ನೂರಾರು ಕೋಟಿ ರೂ. ವ್ಯಯ

ಮಿಶ್ರ ಕಸವನ್ನು ಭೂಭರ್ತಿ ಮಾಡಲು ಜಾಗವಿಲ್ಲದೆ ಬಿಎಸ್‌ಡಬ್ಲ್ಯುಎಂಎಲ್ ಒದ್ದಾಡುತ್ತಿದೆ. ನಗರದಲ್ಲಿ ಉತ್ಪತ್ತಿಯಾಗುವ ಶೇ. 50ರಷ್ಟು ಕಸ ಭೂಭರ್ತಿ ಘಟಕಗಳನ್ನು ಸೇರುತ್ತಿದೆ. ಇದರಿಂದ ಸುತ್ತಮುತ್ತಲಿನ ಪ್ರದೇಶಗಳ ವಾತಾವರಣವೂ ಕಲುಷಿತಗೊಳ್ಳುತ್ತಿದೆ. ಜತೆಗೆ, ಅಭಿವೃದ್ಧಿಯ ಹೆಸರಿನಲ್ಲಿ ನೂರಾರು ಕೋಟಿ ವ್ಯಯಿಸಲಾಗುತ್ತಿದ್ದು, ಬಹುಪಾಲು ಅನುದಾನವು ಲೂಟಿಯಾಗುತ್ತಿದೆ. ಹಸಿ ಮತ್ತು ಒಣ ಕಸ ವಿಂಗಡಣೆ ಪ್ರಮಾಣದ ಕುರಿತು ಬಿಎಸ್‌ಡಬ್ಲ್ಯುಎಂಎಲ್ ಬಳಿ ನಿಖರವಾದ ಮಾಹಿತಿಯೇ ಇಲ್ಲ, ಕೇವಲ ಅಂದಾಜಿನ ಮೇಲೆ ವಿಂಗಡಣೆ ಪ್ರಮಾಣವನ್ನು ಹೇಳಲಾಗುತ್ತಿದೆ. ಎಷ್ಟು ಮನೆಗಳು, ವಾಣಿಜ್ಯ ಮಳಿಗೆಗಳು ಕಸ ವಿಂಗಡಿಸಿ ಕೊಡುತ್ತಿವೆ, ಯಾರು ಕೊಡುತ್ತಿಲ್ಲ ಎಂಬುದನ್ನು ಪತ್ತೆ ಮಾಡಿಲ್ಲ. ವಿಂಗಡಿಸಿ ಕೊಡಲು ನಿರಾಕರಿಸುತ್ತಿರುವವರು ಯಾರು, ಮಿಶ್ರ ಕಸ ನೀಡುತ್ತಿರುವವರು ಯಾರು ಎಂಬ ವಿವರ ಸಂಗ್ರಹಿಸಿ ಕ್ರಮ ಕೈಗೊಳ್ಳುತ್ತಿಲ್ಲ.

ಗುತ್ತಿಗೆದಾರರ ಅಸಹಕಾರದಿಂದ ತ್ಯಾಜ್ಯ ವಿಂಗಡಣೆಯಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಲಾಗುತ್ತಿಲ್ಲ. ನಿತ್ಯ 780 ಟನ್‌ನಷ್ಟು ಪ್ಲಾಸ್ಟಿಕ್ ಅನ್ನು ಕಸದಿಂದ ಪ್ರತ್ಯೇಕಿಸಲಾಗುತ್ತಿತ್ತು. ಗುತ್ತಿಗೆದಾರರ ಪ್ರತಿಭಟನೆ ಬಳಿಕ ಆ ಪ್ರಮಾಣ ಕುಸಿದಿದೆ. ಹೊಸ ಟೆಂಡರ್ ಪ್ರಕ್ರಿಯೆ ಜಾರಿಯಾಗಲು ಬಿಡುತ್ತಿಲ್ಲ. 2005ರಲ್ಲಿ ನೀಡಿದ್ದ ಕಾರ್ಯಾದೇಶದಂತೆ ಹಳೆಯ ಆಟೊ ಟಿಪ್ಪರ್‌ಗಳೇ ಕಸ ಸಂಗ್ರಹಿಸುತ್ತಿವೆ. ಈ ವಾಹನಗಳ ಸಂಗ್ರಹ ಸಾಮರ್ಥ್ಯ 500 ಕೆ.ಜಿ ಮಾತ್ರ ಇದೆ. ಈ ಎಲ್ಲ ಕಾರಣಗಳಿಂದಾಗಿ ಕಸ ವಿಂಗಡಣೆ ಪ್ರಮಾಣ ಜಾಸ್ತಿ ಮಾಡಲಾಗುತ್ತಿಲ್ಲ.

-ಕರೀಗೌಡ ಸಿಇಒ, ಬಿಎಸ್‌ಡಬ್ಲ್ಯುಎಂಎಲ್

ಬೆಂಗಳೂರಿಗೆ ಆರ್ಥಿಕ ಮಾಸ್ಟರ್‌ಪ್ಲಾನ್

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರನ್ನು ವಿಶ್ವದರ್ಜೆಯ ಪ್ರಗತಿಯ ಹಬ್ ಆಗಿ ಪರಿವರ್ತಿಸಲು ಮುಂದಾಗಿರುವ ರಾಜ್ಯ ಸರಕಾರ, ಇದಕ್ಕಾಗಿ 'ಆರ್ಥಿಕ ಮಹಾ ಯೋಜನೆ (ಮಾಸ್ಟರ್ ಪ್ಲಾನ್)' ರೂಪಿಸಲು ಸುಸ್ಥಿರ ಉದ್ಯೋಗ ಮತ್ತು ಅಭಿವೃದ್ಧಿ ದತ್ತಿ (ಐಎಸ್‌ಇಜಿ) ಸಂಸ್ಥೆಯೊಂದಿಗೆ ಉದ್ದೇಶ ಪತ್ರ (ಜಾಯಿಂಟ್ ಸ್ಟೇಟ್‌ಮೆಂಟ್ ಆಫ್ ಇನ್‌ಟೆಂಟ್)ಗೆ ಸಹಿ ಹಾಕಿದೆ.

ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಹಾಗೂ ಐಎಸ್‌ಇಜಿ ನಿರ್ದೇಶಕ ಡಾ. ಶಿರೀಶ್ ಸಂಖೆ ಪರಸ್ಪರ ಸಹಿ ಹಾಕಿ ಪತ್ರ ವಿನಿಮಯ ಮಾಡಿಕೊಂಡರು.

ಒಡಂಬಡಿಕೆಯ ಉದ್ದೇಶ ವಿವರಿಸಿದ ಡಿ.ಕೆ. ಶಿವಕುಮಾರ್, ''ಬೆಂಗಳೂರನ್ನು ವಿಶ್ವದರ್ಜೆಯ ಪ್ರಗತಿ ಹಬ್ ಮಾಡಲು ಕಳೆದ ಮೂರು ವರ್ಷಗಳಿಂದ ಪ್ರಯತ್ನ ಮಾಡುತ್ತಲೇ ಇದ್ದೇವೆ. ಆ ಮೂಲಕ ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಕ್ಕೆ ದಾಖಲೆ ಪ್ರಮಾಣದಲ್ಲಿ ಆರ್ಥಿಕ ಶಕ್ತಿ ನೀಡಿದ್ದೇವೆ. ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶದಲ್ಲಿ ತಲಾದಾಯ 8.850 ಡಾಲರ್‌ನಷ್ಟಿದೆ. ಇದು ರಾಜ್ಯದ ಸರಾಸರಿಗಿಂತ ದುಪ್ಪಟ್ಟಾಗಿದೆ,'' ಎಂದರು.

''8 ಸಾವಿರ ಚದರ ಕಿ.ಮೀ.ಗಿಂತ ಹೆಚ್ಚು ಪ್ರದೇಶದಲ್ಲಿ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ದಕ್ಷಿಣ ಜಿಲ್ಲೆಗಳು ಹರಡಿದ್ದು, 1.6 ಕೋಟಿ ಜನ ಇಲ್ಲಿದ್ದಾರೆ. ಭಾರತದ ಸಾಫ್ಟ್‌ವೇರ್ ರಫ್ತಿನಲ್ಲಿ ಬೆಂಗಳೂರು ಶೇ.42ರಷ್ಟು ಕೊಡುಗೆ ನೀಡುತ್ತಿದೆ. ಬೆಂಗಳೂರು ನಗರಕ್ಕೆ 500 ವರ್ಷಗಳು ಪೂರ್ಣಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ 2032ರಿಂದ 2037ರ ಅವಧಿಯಲ್ಲಿ ಕೈಗೊಳ್ಳಬೇಕಾದ ಆರ್ಥಿಕ ಮಾಸ್ಟರ್ ಪ್ಲಾನ್ ರೂಪಿಸಲು ಚಿಂತನೆ ನಡೆಸಿದ್ದೇವೆ. ಹೀಗಾಗಿ, ಬೆಂಗಳೂರಿಗೆ ಹೊಸ ರೂಪ, ಶಕ್ತಿ ನೀಡಲು ತೀರ್ಮಾನಿಸಿದ್ದೇವೆ,'' ಎಂದರು. »12

ಪೀಣ್ಯ ಫ್ಲೈಓವರ್ ಬಂದ್‌ನಿಂದ ವಾಹನ ಸವಾರರು ಕಂಗಾಲು

ಪೀಣ್ಯದಾಸರಹಳ್ಳಿ: ಪೀಣ್ಯ ಎಲಿವೇಟೆಡ್ ಫ್ಲೈಓವರ್‌ನಲ್ಲಿ ನಾಲ್ಕು ದಿನಗಳ ಕಾಲ ವಾಹನ ಸಂಚಾರಕ್ಕೆ ನಿರ್ಬಂಧ ಹೇರಿರುವುದರಿಂದ ಈ ಭಾಗದಲ್ಲಿ ತೀವ್ರ ದಟ್ಟಣೆ ಉಂಟಾಗಿ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಡಾ. ಶಿವಕುಮಾರ ಸ್ವಾಮೀಜಿ ಫ್ಲೈಓವರ್‌ನಲ್ಲಿ ಮೇ 8ರ ಬೆಳಗ್ಗೆ 11 ಗಂಟೆವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಫ್ಲೈಓವರ್‌ನಲ್ಲಿರುವ 1422 ಕೇಬಲ್‌ಗಳ ದುರಸ್ತಿ ಮತ್ತು ಲೋಡ್ ಪರೀಕ್ಷೆಗಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಸಾಮಾನ್ಯವಾಗಿ 15-20 ನಿಮಿಷಗಳಲ್ಲಿ ಸಂಚರಿಸಬಹುದಾದ ಮಾರ್ಗವನ್ನು ಈಗ ಕೆಳರಸ್ತೆಯಲ್ಲಿ ಸಂಚರಿಸಲು ಸುಮಾರು ಒಂದೂವರೆ ಗಂಟೆ ಬೇಕಾಗುತ್ತಿದೆ ಎಂದು ವಾಹನ ಸವಾರರು ಅಳಲು ತೋಡಿಕೊಂಡಿದ್ದಾರೆ. ಇದರಿಂದ ಗೊರಗುಂಟೆಪಾಳ್ಯ, ಜಾಲಹಳ್ಳಿ, ದಾಸರಹಳ್ಳಿ, ಎಂಟನೇ ಮೈಲಿ ಮತ್ತು ಜಂಕ್ಷನ್‌ಗಳ ಸುತ್ತಮುತ್ತ ವ್ಯಾಪಕ ಟ್ರಾಫಿಕ್ ಜಾಮ್ ಉಂಟಾಗಿತ್ತು. ಮಾದಾವರದವರೆಗೂ ವಾಹನಗಳು ನಿಂತಲ್ಲೇ ನಿಂತಿದ್ದ ದೃಶ್ಯ ಕಣ್ಣಿಗೆ ಕಾಣುತ್ತಿತ್ತು. ಕೇಬಲ್ ಅಳವಡಿಕೆ ಮತ್ತು ಲೋಡ್ ಟೆಸ್ಟಿಂಗ್‌ಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದುರಸ್ತಿ ಕಾರ್ಯ ಕೈಗೊಂಡಿರುವ ಹಿನ್ನೆಲೆಯಲ್ಲಿ ಪೀಣ್ಯ ಮತ್ತು ಚಿಕ್ಕಬಾಣಾವರ ಸಂಚಾರ ಪೊಲೀಸರು ಫ್ಲೈಓವರ್ ಬಂದ್ ಮಾಡಿದ್ದಾರೆ. ಇದರಿಂದ ಮುಂದಿನ ಮೂರು ದಿನ ತುಮಕೂರು ರಸ್ತೆಯಲ್ಲಿ ಸವಾರರಿಗೆ ಭಾರೀ ಟ್ರಾಫಿಕ್ ಬಿಸಿ ತಟ್ಟಲಿದೆ.

20ಕ್ಕೂ ಹೆಚ್ಚು ಜಿಲ್ಲೆ, ಹೊರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದ್ದು, ಸಾವಿರಾರು ವಾಹನಗಳು ಮೇಲ್ಸೇತುವೆ ಪಕ್ಕದ ಎನ್‌ಎಚ್-4 ರಸ್ತೆ, ಸರ್ವೀಸ್ ರಸ್ತೆಯಲ್ಲೇ ನಗರಕ್ಕೆ ಬರಬೇಕಾಗಿದೆ. ಆಂಬ್ಯುಲೆನ್ಸ್‌ಗಳು ದಟ್ಟಣೆಯಲ್ಲಿ ಸಿಲುಕಿ ರೋಗಿಗಳು ಪರದಾಡುತ್ತಿದ್ದಾರೆ. ನಗರದಿಂದ ನೆಲಮಂಗಲ, ಹಾಸನ, ಮಂಗಳೂರು, ಚಿಕ್ಕಮಗಳೂರು, ಹುಬ್ಬಳ್ಳಿ, ದಾವಣಗೆರೆ, ತುಮಕೂರು ಕಡೆಗೆ ತೆರಳುವ ವಾಹನ ಸವಾರರು ಮಂಗಳವಾರ ತೊಂದರೆಗೆ ಸಿಲುಕಿದ್ದರು.

ಸದ್ಯ ಫ್ಲೈಓವರ್‌ನಲ್ಲಿ ಎಲ್ಲಾ ಬಗೆಯ ವಾಹನಗಳ ಓಡಾಟ ಬಂದ್ ಆಗಿದ್ದು, ಮೇ 8ರಂದು ಬೆಳಗ್ಗೆ 11 ಗಂಟೆ ಬಳಿಕ ವಾಹನ ಸಂಚಾರಕ್ಕೆ ಮುಕ್ತವಾಗಲಿದೆ.

ಭಾರ ಪರೀಕ್ಷೆ ಅಗತ್ಯ

ಮೇಲ್ಸೇತುವೆಯ 1,422 'ಪ್ರಿಸ್ಟ್ರೆಸ್ಸಿಂಗ್ ಕೇಬಲ್' ಬದಲಿಸಲಾಗಿದೆ. ಮೇಲ್ಸೇತುವೆಯಲ್ಲಿ 32 ಕೋಟಿ ರೂ. ವೆಚ್ಚದಲ್ಲಿ ಹೊಸ ಕೇಬಲ್‌ಗಳನ್ನು ಅಳವಡಿಸಿದ ಬಳಿಕ ಸೇತುವೆಯ ಸಾಮರ್ಥ್ಯ ಮತ್ತು ಸುರಕ್ಷತೆ ಖಚಿತಪಡಿಸಿಕೊಳ್ಳಲು ಭಾರ ಪರೀಕ್ಷೆ ಅಗತ್ಯವಾಗಿದೆ ಎಂದು ಎನ್‌ಎಚ್‌ಎಐ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ತಲಾ 32 ಟನ್ ಭಾರ ಹೊತ್ತ ಎಂಟು ಟ್ರಕ್‌ಗಳನ್ನು ಆಯ್ಕೆ ಮಾಡಲಾದ ನಾಲ್ಕು ನಿರ್ದಿಷ್ಟ ಸ್ಪ್ಯಾನ್‌ಗಳ ಮೇಲೆ ನಿಲ್ಲಿಸಿ ಪರೀಕ್ಷೆ ಮಾಡಲಾಗುತ್ತಿದೆ. ಈ ವೇಳೆ ಸೇತುವೆಯ ರಚನಾತ್ಮಕ ಬದಲಾವಣೆಗಳನ್ನು ಗೇಜ್‌ಗಳ ಮೂಲಕ ಅಳೆಯಲಾಗುತ್ತಿದೆ. ಈ ರೀತಿ ನಾಲ್ಕು ದಿನ ಪರೀಕ್ಷೆ ನಡೆಸಲಾಗುವುದು. ಬಳಿಕ ಮೇಲ್ಸೇತುವೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಉಪಶಮನ ಆರೈಕೆ ಕೇಂದ್ರ

■ **ವಿಕ ಸುದ್ದಿಲೋಕ** ಬೆಂಗಳೂರು

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನಿರ್ಮಿಸಿರುವ ಉಪಶಮನ ಆರೈಕೆ ಕೇಂದ್ರವು ಚಿಕಿತ್ಸೆಗೆ ಸ್ಪಂದಿಸದೇ ಇರುವ ರೋಗಿಗಳು ಮತ್ತು ಅವರನ್ನು ಆರೈಕೆ ಮಾಡುವ ಕುಟುಂಬ ವರ್ಗದವರಿಗೆ ವರದಾನವಾಗಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸರನಂ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಮಲ್ಲೇಶ್ವರಂನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನಿರ್ಮಿಸಿರುವ ಉಪಶಮನ ಆರೈಕೆ ಕೇಂದ್ರ (ಪ್ಯಾಲಿಯೇಟಿವ್ ಕೇರ್ ಯುನಿಟ್)ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಈಗಾಗಲೇ ಬೆಂಗಳೂರಿನ ನಾಲ್ಕೈದು ಕಡೆ ಇಂತಹ ಕೇಂದ್ರಗಳನ್ನು ತೆರೆಯಲಾಗಿದ್ದು, ರಾಜ್ಯಾದ್ಯಂತ ಪ್ರಾರಂಭಿಸುವ ಗುರಿಯಿದೆ. ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಪ್ರಾಥಮಿಕವಾಗಿ ಐದು ಬೆಡ್‌ಗಳ ಒಂದು ವಾರ್ಡ್ ನಿರ್ಮಾಣ ಮಾಡಲಾಗಿದೆ. ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತಾ ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಇದು ವಿಶೇಷ ಯೂನಿಟ್ ಆಗಿದೆ. ಕ್ಯಾನ್ಸರ್, ಕಿಡ್ನಿ ವೈಫಲ್ಯ ಸೇರಿದಂತೆ ಇತರ ರೋಗಿಗಳ ಆರೈಕೆಗೆ ಈ ವಾರ್ಡ್ ಸಹಾಯಕವಾಗಲಿದೆ,'' ಎಂದರು.

ಸರನಂ ಸಂಸ್ಥೆಯ ಸಹಕಾರದೊಂದಿಗೆ ಉದ್ಘಾಟನೆಗೊಂಡ ಈ ಕೇಂದ್ರದಲ್ಲಿ ತಜ್ಞರ ತಂಡದಿಂದ ಹೊರರೋಗಿ ವಿಭಾಗ, ಡೇ ಕೇರ್ ವಿಭಾಗ (ಅತಿಯಾದ ನೋವು ಮತ್ತು ವೈಯಕ್ತಿಕ ಸಮಾಲೋಚನೆ), ಸುಸಜ್ಜಿತ ಒಳ ರೋಗಿ ವಿಭಾಗ ಮತ್ತು ಕೆ.ಸಿ. ಜನರಲ್ ಆಸ್ಪತ್ರೆಯಿಂದ 5-8 ಕಿ.ಮೀ. ವ್ಯಾಪ್ತಿಯ ಮನೆಗೆ ತೆರಳಿ ಆರೈಕೆ ಮಾಡುವ ಮತ್ತು ಆರೈಕೆಗೆ ಪೂರಕ ತರಬೇತಿ ನೀಡುವ ಮೊಬೈಲ್ ಯೂನಿಟ್ ಸಹ ಇರಲಿದೆ. ಮಾನವೀಯ ದೃಷ್ಟಿಯಿಂದ ಈ ಸೇವೆ ನೀಡಲಾಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಕೆ.ಸಿ. ಜನರಲ್ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿಗಳು, ಸರನಂ ಇಂಡಿಯಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ರೈತರಿಂದ ಗ್ರಾಹಕರಿಗೆ ತಾಜಾ ಹಣ್ಣಿನ ಮಾರಾಟ | ಉತ್ತರಕನ್ನಡ ಜಿಲ್ಲೆಯ ಕರಿ ಇಶಾಡ್ ವಿಶೇಷ ಆಕರ್ಷಣೆ

8ರಿಂದ ಕಬ್ಬನ್‌ಪಾರ್ಕ್‌ನಲ್ಲಿ ಮಾವು-ಹಲಸು ಮೇಳ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು ಮೇ 8ರಿಂದ 17ರವರೆಗೆ ಕಬ್ಬನ್‌ಪಾರ್ಕ್‌ನಲ್ಲಿ ಮಾವು ಮತ್ತು ಹಲಸು ಮೇಳ ಆಯೋಜಿಸಿದೆ.

ಮೇ 8ರಂದು ಬೆಳಗ್ಗೆ ಮೇಳಕ್ಕೆ ಚಾಲನೆ ದೊರೆಯಲಿದೆ. ರಾಮನಗರ, ಮಂಡ್ಯ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ರೈತರು ಈ ಮೇಳದಲ್ಲಿ ಭಾಗವಹಿಸಲಿದ್ದು, 50ಕ್ಕೂ ಹೆಚ್ಚು ಮಾವು ಮಾರಾಟ ಮಳಿಗೆಗಳು ಹಾಗೂ 7 ಹಲಸು ಮಳಿಗೆಗಳನ್ನು ತೆರೆಯಲಾಗುವುದು. ಕಾರ್ಬೈಡ್‌ಮುಕ್ತ, ಸಹಜವಾಗಿ ಮಾಗಿದ ಹಣ್ಣುಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವುದು ಈ ಮೇಳದ ಉದ್ದೇಶವಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್. ವೇದಮೂರ್ತಿ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

''ಮಾವು ಮತ್ತು ಹಲಸು ಬೆಳೆಗಾರರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸಿ, ಗ್ರಾಹಕರಿಗೆ ರುಚಿಯಾದ ತಾಜಾ ಹಣ್ಣುಗಳನ್ನು ಯೋಗ್ಯ ಬೆಲೆಗೆ ದೊರಕಿಸಲಾಗುವುದು. ಮಾವು ಮತ್ತು ಹಲಸಿನಲ್ಲಿರುವ ಉತ್ತಮ ತಳಿಗಳನ್ನು ವೀಕ್ಷಿಸುವ ಮತ್ತು ಸವಿಯುವ ಅವಕಾಶ ಮೇಳದ ಮೂಲಕ ಸಿಗಲಿದೆ,'' ಎಂದರು.

ಮೇಳದಲ್ಲಿ ಮಾವು-ಹಲಸಿನ ಬಗೆಗಳು: ''ಜಿಐ ಮಾನ್ಯತೆ ಪಡೆದಿರುವ ಉತ್ತರ ಕನ್ನಡ ಜಿಲ್ಲೆಯ ಕರಿ ಇಶಾಡ್, ಚಾಲ್ತಿ ಮಾವು ಈ ಬಾರಿಯ ವಿಶೇಷ. ಮೇಳದಲ್ಲಿ ಬಾದಾಮಿ, ಮಲ್ಲಿಕಾ, ಸೇಂಧೂರ, ರಸಪುರಿ, ಕರಿ ಇಶಾಡ್, ಚಾಲ್ತಿ ಮತ್ತಿತರ ಮಾವಿನ ತಳಿಗಳು, ರುದ್ರಾಕ್ಷಿ, ಶಿವರಾತ್ರಿ, ಏಕಾದಶಿ ಮತ್ತು ತೂಬುಗೆರೆ, ಲಾಲ್‌ಬಾಗ್ ಮಧುರ ಮತ್ತಿತರ ಹಲಸಿನ ತಳಿಗಳನ್ನು ಮಾರಾಟ ಮಾಡಲಾಗುವುದು. ಹಣ್ಣಿನ ಗುಣಮಟ್ಟ, ಪೂರೈಕೆ ಹಾಗೂ ಬೇಡಿಕೆ ಆಧಾರದಲ್ಲಿ ಮಾರಾಟಗಾರರೇ ದರ ನಿಗದಿಪಡಿಸಲಿದ್ದಾರೆ,'' ಎಂದು ವಿವರಿಸಿದರು.

11 ಟನ್ ಮಾವು ರಫ್ತು: ''ಮಾಡಿಕೆರೆ ಮಾವು ಅಭಿವೃದ್ಧಿ ಕೇಂದ್ರದ ಪ್ಯಾಕ್‌ಹೌಸ್ ಮೂಲಕ ಪ್ರಸಕ್ತ ಸಾಲಿನಲ್ಲಿ 11 ಟನ್ ಮಾವಿನ ಹಣ್ಣನ್ನು ಉಪಚರಿಸಿ ಯುಎಸ್‌ಎ, ಜರ್ಮನಿ ಮತ್ತು ಲಂಡನ್‌ಗೆ ರಫ್ತು ಮಾಡಲಾಗಿದೆ. ಈ ವರ್ಷ ಮಾವು ಉತ್ಪಾದನೆ ಇಳಿಕೆಯಾಗಿದ್ದು, ಒಟ್ಟಾರೆ ಉತ್ಪಾದನೆಯೂ ಕುಂಠಿತಗೊಂಡಿದೆ. ಇತ್ತೀಚೆಗೆ ಮಳೆ ಬೀಳುತ್ತಿರುವುದರಿಂದ ಮಾವು ಬೆಳೆಗೆ ಮತ್ತಷ್ಟು ತೊಂದರೆ ಉಂಟಾಗುತ್ತಿದೆ. ಹೀಗಾಗಿ, ಈ ಬಾರಿ ರಫ್ತು ಪ್ರಮಾಣದಲ್ಲಿ ಇಳಿಕೆಯಾಗಿದೆ,'' ಎಂದರು.

ಲಾಲ್‌ಬಾಗ್‌ನಲ್ಲಿ ಮೇ ಅಂತ್ಯಕ್ಕೆ ಮೇಳ

''ರಾಮನಗರದ ಹಣ್ಣು ಮಾರುಕಟ್ಟೆಗೆ ಬಂದಿದ್ದು, ತಿಂಗಳಾಂತ್ಯದಲ್ಲಿ ಕೋಲಾರ ಜಿಲ್ಲೆಯ ಹಣ್ಣು ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಬರಲಿದೆ. ಹೀಗಾಗಿ, ಈ ಭಾಗದ ರೈತರಿಗೆ ಲಾಲ್‌ಬಾಗ್‌ನಲ್ಲಿ ಮೇ ಅಂತ್ಯದಲ್ಲಿ ಒಂದು ತಿಂಗಳ ಕಾಲ ಮೇಳ ಆಯೋಜಿಸಲಾಗುವುದು. ಜತೆಗೆ, ನಗರದ ಮೆಟ್ರೊ ರೈಲು ನಿಲ್ದಾಣಗಳು, ಆಟದ ಮೈದಾನಗಳು, ಬಹುರಾಷ್ಟ್ರೀಯ ಕಂಪನಿಗಳ ಆವರಣ ಮತ್ತಿತರ ಸ್ಥಳಗಳಲ್ಲಿ ಮಾವು ಮೇಳ ಆಯೋಜಿಸಲು ತೀರ್ಮಾನಿಸಲಾಗಿದೆ,'' ಎಂದು ವೇದಮೂರ್ತಿ ತಿಳಿಸಿದರು.

ಮಾವು ನಷ್ಟಕ್ಕೆ ಪರಿಹಾರ

ಈ ವರ್ಷ ಅಂದಾಜು ಶೇ.60ರಿಂದ 70 ಬೆಳೆ ನಷ್ಟವಾಗಿದ್ದು, ಉಳಿದ ಹಣ್ಣಿನ ಮೇಲೂ ಇತ್ತೀಚಿನ ಮಳೆಯಿಂದ ಶೇ. 8ರಿಂದ 10ರಷ್ಟು ಹಾನಿ ಉಂಟಾಗಿದೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನೆಲೆಯಲ್ಲಿ ತುರ್ತಾಗಿ ಸಭೆ ನಡೆಸಿದ ಅಧಿಕಾರಿಗಳು, ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ಒದಗಿಸಲು ಕ್ರಮ ಕೈಗೊಂಡಿದ್ದಾರೆ. ಶೇ.33ಕ್ಕಿಂತ ಹೆಚ್ಚು ನಷ್ಟವಾದ ಬೆಳೆಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಮೂಲಕ ನೆರವು ನೀಡುವಂತೆ ಸೂಚಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಮುದ್ದುಗಂಗಾಧರ ತಿಳಿಸಿದರು.

ಜಮೀರ್ ಮನೆಯಲ್ಲಿ ಚಿನ್ನಾಭರಣ ಕಳವು

ಇಬ್ಬರು ಸಂಬಂಧಿಕರ ಬಂಧನ | ಕುಶಲೋಪರಿ ವಿಚಾರಣೆ ನೆಪದಲ್ಲಿ ಆಗಮಿಸಿ ಕಳ್ಳತನ

ಬೆಂಗಳೂರು: ವಸತಿ ಸಚಿವ ಜಮೀರ್ ಅಹಮದ್ ಅವರ ನಿವಾಸದಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಅವರ ಇಬ್ಬರು ಸಂಬಂಧಿಕರನ್ನು ಶಿವಾಜಿನಗರ ಪೊಲೀಸರು ಬಂಧಿಸಿದ್ದಾರೆ.

ಗೋವಿಂದಪುರದ ಅಮೀರ್ ಅಹ್ಮದ್ (48) ಹಾಗೂ ಸೈಯದ್ ಅಮೀನ್ ಅಹ್ಮದ್ (48) ಬಂಧಿತರು. ಆರೋಪಿಗಳು ಕದ್ದಿದ್ದ 1.13 ಕೋಟಿ ರೂ. ಮೌಲ್ಯದ 759 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಚಿವ ಜಮೀರ್ ಅವರಿಗೆ ಅಮೀರ್ ಹಾಗೂ ಸೈಯದ್ ಸೋದರ ಸಂಬಂಧಿಗಳಾಗಿದ್ದಾರೆ. ಅಮೀರ್ ಅಹ್ಮದ್ ಟ್ರಾವೆಲ್ಸ್ ಏಜೆನ್ಸಿ ನಡೆಸುತ್ತಿದ್ದ. ಅಮೀನ್ ಇಸ್ತ್ರಿ ಅಂಗಡಿ ಇಟ್ಟುಕೊಂಡಿದ್ದ.

ಇತ್ತೀಚೆಗೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಇಬ್ಬರೂ ಶಿವಾಜಿನಗರದ ಸ್ಟೇಷನ್ ರಸ್ತೆಯಲ್ಲಿರುವ ಸಚಿವರ ಮನೆಗೆ ಕನ್ನ ಹಾಕಲು ನಿರ್ಧರಿಸಿದ್ದರು.

ಜ.15 ರಂದು ಕುಶಲೋಪರಿ ವಿಚಾರಿಸುವ ನೆಪದಲ್ಲಿ ಸಚಿವರ ಮನೆಗೆ ಆರೋಪಿಗಳು ಆಗಮಿಸಿದ್ದರು. ಜಮೀರ್ ಅವರ ವೃದ್ಧ ತಾಯಿಯ ಜತೆ ಸ್ವಲ್ಪ ಕಾಲ ಮಾತುಕತೆ ನಡೆಸಿದ್ದರು. ಬಳಿಕ ಕಬೋರ್ಡ್‌ನಲ್ಲಿಟ್ಟಿದ್ದ ಒಂದು ಕೆ.ಜಿ. 200 ಗ್ರಾಂ ಚಿನ್ನಾಭರಣ ದೋಚಿಕೊಂಡು ಹೋಗಿದ್ದರು. ಕೆಲದಿನಗಳ ಬಳಿಕ ಮನೆಯಲ್ಲಿ ಆಭರಣ ಕಳವಾಗಿರುವುದು ಗೊತ್ತಾಗಿ ಇಡೀ ಕುಟುಂಬ ಕಂಗಾಲಾಗಿತ್ತು. ಅಂತಿಮವಾಗಿ ಸಚಿವರ ತಾಯಿಯು ಪೊಲೀಸರಿಗೆ ದೂರು ನೀಡಿದ್ದರು. ಹಲವು ಆಯಾಮಗಳಲ್ಲಿ ತನಿಖೆ ನಡೆಸಿದಾಗ ಅಮೀರ್ ಹಾಗೂ ಅಮೀನ್ ಮೇಲೆ ಅನುಮಾನ ಬಂದು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನದ ಕೃತ್ಯ ಒಪ್ಪಿಕೊಂಡಿದ್ದರು.

ಆರೋಪಿಗಳು ಕಳವು ಮಾಡಿದ ಆಭರಣಗಳನ್ನು ಮತ್ತಿಕೆರೆ ಹಾಗೂ ಕೆ.ಜಿ.ಹಳ್ಳಿ ಸಮೀಪದ ಚಿನ್ನಾಭರಣ ಮಳಿಗೆಯಲ್ಲಿ ಅಡಮಾನವಿಟ್ಟು ಹಣ ಪಡೆದು ಖರ್ಚು ಮಾಡಿದ್ದರು ಎಂದು ಪೊಲೀಸರು ವಿವರಿಸಿದರು.

ಹೈಡ್ರೊಗಾಂಜಾ ಮಾರುತ್ತಿದ್ದ ಇಬ್ಬರು ಕೇರಳೀಯರ ಸೆರೆ | ಕಾಲಿಗೆ ಗುಂಡೇಟು ಬಿದ್ದರೂ ದಂಧೆ ಬಿಡದ ಪೆಡ್ಲರ್

ನಗರದಲ್ಲಿ ಮತ್ತೆ ₹20 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಡ್ರಗ್ಸ್ ದಂಧೆಕೋರರ ವಿರುದ್ಧ ಭರ್ಜರಿ ಕಾರ್ಯಾಚರಣೆ ನಡೆಸಿರುವ ಯಶವಂತಪುರ ಹಾಗೂ ನಂದಿನಿ ಲೇಔಟ್ ಠಾಣೆ ಪೊಲೀಸರು, ಬಿಬಿಎಂ ಪದವೀಧರ ಸೇರಿದಂತೆ ಆರು ಮಂದಿಯನ್ನು ಬಂಧಿಸಿ ಬರೋಬ್ಬರಿ 20.10 ಕೋಟಿ ರೂ. ಮೌಲ್ಯದ ಗಾಂಜಾ ಜಪ್ತಿ ಮಾಡಿದ್ದಾರೆ.

ಪೊಲೀಸ್ ಗುಂಡೇಟಿನ ರುಚಿ ಕಂಡ ಬಳಿಕವೂ ಪುನಃ ಡ್ರಗ್ಸ್ ದಂಧೆಯಲ್ಲಿ ಸಕ್ರಿಯನಾಗಿದ್ದ ಯಾರಬ್ ನಗರದ ಸೈಯದ್ ಸೊಹೇಲ್, ಆತನ ಬಾಮೈದ ಮೊಹಮದ್ ಸಮೀರ್, ಸಂಬಂಧಿ ಸಾದಿಕ್ ಪಾಷಾ ಯಶವಂತಪುರ ಪೊಲೀಸರಿಗೆ ಸೆರೆ ಸಿಕ್ಕಿದ್ದಾರೆ.

ಹಲವು ವರ್ಷಗಳಿಂದ ಡ್ರಗ್ಸ್ ದಂಧೆಯನ್ನೇ ವೃತ್ತಿ ಮಾಡಿಕೊಂಡಿರುವ ಸೊಹೇಲ್ ವಿರುದ್ಧ ನಗರದ ಐದು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. 2024ರಲ್ಲಿ ಹೊಸಕೋಟೆ ಪೊಲೀಸರು ಸೊಹೇಲ್ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದರು. ಜೈಲಿಂದ ಬಿಡುಗಡೆಯಾದ ಬಳಿಕ ಪುನಃ ದಂಧೆಯ ಜಾಲ ಸೇರಿಕೊಂಡಿದ್ದ ಸೊಹೇಲ್, ಬಾಮೈದ ಹಾಗೂ ಸಂಬಂಧಿಕನ ಜತೆಗೂಡಿ ಪುನಃ ಹಳೆಯ ಕಸುಬು ಮುಂದುವರಿಸಿದ್ದ.

ಕೆಲ ದಿನಗಳ ಹಿಂದೆ ಪೆಡ್ಲರ್‌ವೊಬ್ಬನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಸೊಹೇಲ್‌ನ ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಈ ನಿಟ್ಟಿನಲ್ಲಿ ಕಾರ್ಯಾಚರಣೆ ನಡೆಸಿ ಸೊಹೇಲ್ ಸೇರಿದಂತೆ ಮೂವರನ್ನು ಬಂಧಿಸಿ 9.74 ಕೋಟಿ ರೂ. ಮೊತ್ತದ 4 ಕೆ.ಜಿ. 878 ಗ್ರಾಂ ಎಂಡಿಎಂ, 1.62 ಲಕ್ಷ ರೂ. ನಗದು, ನಾಲ್ಕು ಮೊಬೈಲ್, ಒಂದು ಕಾರು ಜಪ್ತಿ ಮಾಡಲಾಗಿದೆ. ಆರೋಪಿ ಸೊಹೇಲ್ ನೈಜೀರಿಯಾದ ಕಿಂಗ್‌ಪಿನ್‌ಗಳ ಸೂಚನೆಯಿಂದ ಕೆ.ಜಿ.ಗಟ್ಟಲೆ ಎಂಡಿಎಂಎ ಪಡೆದು ಅದನ್ನು ಚಿಕ್ಕ ಚಿಕ್ಕ ಪ್ಯಾಕೆಟ್‌ಗಳಲ್ಲಿ ತುಂಬಿಸಿ ಪುನಃ ಸಬ್ ಪೆಡ್ಲರ್‌ಗಳಿಗೆ ನೀಡುವ ಜವಾಬ್ದಾರಿ ಹೊತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಎಂಬಿಎ ಪದವೀಧರನ ಬಂಧನ: ಸುಲಭವಾಗಿ ಹಣ ಸಂಪಾದನೆ ಮಾಡುವ ನಿಟ್ಟಿನಲ್ಲಿ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ಎಂಬಿಎ ಪದವೀಧರ, ಆರ್.ಟಿ. ನಗರ ನಿವಾಸಿ ಮೊಹಮದ್ ಅಜರುಲ್ ಹಕ್ (33) ಎಂಬುವನನ್ನು ಬಂಧಿಸಿ 6.36 ಕೋಟಿ ರೂ. ಮೌಲ್ಯದ 3 ಕೆ.ಜಿ. 180 ಗ್ರಾಂ ಎಂಡಿಎಂಎ ಜಪ್ತಿ ಮಾಡಲಾಗಿದೆ.

ನೈಜೀರಿಯಾ ಪ್ರಜೆಗಳು ಹೇಳುವ ಲೊಕೇಶನ್‌ಗೆ ತೆರಳುತ್ತಿದ್ದ ಅಜರುಲ್, ನಿರ್ದಿಷ್ಟ ಸ್ಥಳದಲ್ಲಿ ಎಸೆಯುತ್ತಿದ್ದ ಡ್ರಗ್ಸ್ ಪ್ಯಾಕೆಟ್ ತಂದು ತನ್ನ ಮನೆಯಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ. ಆರೋಪಿ ಅಜರುಲ್‌ಗೆ ಸಂಪರ್ಕವಿರುವ ಪ್ರಮುಖ ಕಿಂಗ್‌ಪಿನ್‌ಗಳು ಯಾರು ಎಂಬುದರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಆರೋಪಿಯ ಹಣಕಾಸು ವಹಿವಾಟಿನ ಬಗ್ಗೆಯೂ ತನಿಖೆ ಮುಂದುವರಿದಿದೆ ಎಂದು ಪೊಲೀಸರು ವಿವರಿಸಿದರು.

ಕೇರಳದ ಇಬ್ಬರ ಸೆರೆ: ಹೈಡ್ರೊಗಾಂಜಾ ಮಾರಾಟ ಮಾಡುತ್ತಿದ್ದ ಕೇರಳ ಮೂಲದ ಕೆ.ವಿ. ಸೌಗೇಶ್ (32), ಅಲ್ತಾಫ್ (30)ನನ್ನು ನಂದಿನಿ ಲೇಔಟ್ ಪೊಲೀಸರು ಸೆರೆಹಿಡಿದಿದ್ದು, 4 ಕೋಟಿ ರೂ. ಮೌಲ್ಯದ ಹೈಡ್ರೊಗಾಂಜಾ ಜಪ್ತಿ ಮಾಡಿದ್ದಾರೆ.

ಇಂಟೀರಿಯರ್ ಡಿಸೈನರ್ ಆಗಿರುವ ಸೌಗೇಶ್ ಹಾಗೂ ಕ್ಯಾಬ್ ಚಾಲಕ ಅಲ್ತಾಫ್ ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಸಿಸುತ್ತಿದ್ದರು. ಶೋಕಿ ಜೀವನಕ್ಕೆ ಹಣ ಹೊಂದಿಸಲು ಹೈಡ್ರೋ ಗಾಂಜಾ ಮಾರುತ್ತಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ, ಯಶವಂತಪುರ ಉಪವಿಭಾಗದ ಎಸಿಪಿ ಮೇರಿ ಶೈಲಜಾ, ಯಶವಂತಪುರ ಇನ್ಸ್‌ಪೆಕ್ಟರ್ ಎಸ್. ಮಂಜುನಾಥ್, ನಂದಿನಿ ಲೇಔಟ್ ಠಾಣೆ ಇನ್ಸ್‌ಪೆಕ್ಟರ್ ಆರ್.ಎಲ್ ಗಣಪತಿ ನೇತೃತ್ವದ ತಂಡ ಮೂರು ಪ್ರತ್ಯೇಕ ಪ್ರಕರಣಗಳ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು.

ಕದ್ದ ಬೈಕ್‌ಗಳಿಗೆ ನಕಲಿ ದಾಖಲೆ ಸೃಷ್ಟಿಸಿ ಮಾರಾಟ: ಆಂಧ್ರದ ಇಬ್ಬರ ಸೆರೆ

■ **ವಿಕ ಸುದ್ದಿಲೋಕ** ಬೆಂಗಳೂರು

ಫೇಸ್ ಬುಕ್ ಸ್ನೇಹ | ಕಳ್ಳತನಕ್ಕೆ ಸಾಥ್

ಬೆಂಗಳೂರಿನಲ್ಲಿ ಬೈಕ್ ಕಳವು, ಹೈದರಾಬಾದ್‌ನಲ್ಲಿ ನಕಲಿ ಆರ್.ಸಿ. ಸೃಷ್ಟಿ

ಬೆಂಗಳೂರಿನಲ್ಲಿ ಕದ್ದ ಬೈಕ್‌ಗಳಿಗೆ ಹೈದರಾಬಾದ್‌ನಲ್ಲಿ ನಕಲಿ ನೋಂದಣಿ ಪ್ರಮಾಣ ಪತ್ರ (ಆರ್.ಸಿ. ಕಾರ್ಡ್) ಸೃಷ್ಟಿಸಿ ಮಾರಾಟ ಮಾಡುತ್ತಿದ್ದ ಇಬ್ಬರು ಕಳ್ಳರು ಹೆಬ್ಬಗೋಡಿ ಠಾಣೆ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಆಂಧ್ರದ ಅನಂತಪುರ ಮೂಲದ ಚಿತ್ತಪ್ಪಗಾರಿ ಆನಂದ್ (33), ನಂದ್ಯಾಲದ ಶೇಖ್ ಶಫೀರ್ ಬಾಷಾ (37) ಬಂಧಿತರು. ಆರೋಪಿಗಳು ನಗರದ ವಿವಿಧ ಭಾಗಗಳಲ್ಲಿ ಕದ್ದಿದ್ದ 41.67 ಲಕ್ಷ ರೂ. ಮೌಲ್ಯದ 51 ಬೈಕ್, 501 ನಕಲಿ ಆರ್.ಸಿ. ಕಾರ್ಡ್ ಜಪ್ತಿ ಮಾಡಲಾಗಿದೆ.

ನಕಲಿ ಆರ್.ಸಿ. ಕಾರ್ಡ್ ಸೃಷ್ಟಿಯ ಜಾಲವನ್ನು ಗಂಭೀರವಾಗಿ ಪರಿಗಣಿಸಿ ಸಮಗ್ರ ತನಿಖೆ ನಡೆಸಲಾಗುವುದು. ಈ ಬಗ್ಗೆ ಸಾರಿಗೆ ಇಲಾಖೆಗೆ ಮಾಹಿತಿ ನೀಡಲಾಗಿದ್ದು, ನಕಲಿ ಆರ್.ಸಿ. ಕಾರ್ಡ್ ಸೃಷ್ಟಿಸಲು ಸಾಧ್ಯವಾಗದಂತೆ ಮತ್ತಷ್ಟು ಸುರಕ್ಷಾ ಕ್ರಮ ಕೈಗೊಳ್ಳಲು ಶಿಫಾರಸು ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಫೇಸ್‌ಬುಕ್ ಫ್ರೆಂಡ್‌ಶಿಪ್: ಕೆಲ ವರ್ಷಗಳಿಂದ ಯಶವಂತಪುರದಲ್ಲಿ ನೆಲೆಸಿದ್ದ ಆನಂದ್, ಸುಲಭವಾಗಿ ಹಣ ಸಂಪಾದಿಸಲು 2024ರಿಂದ ಬೈಕ್ ಕಳ್ಳತನ ಕೃತ್ಯಕ್ಕೆ ಇಳಿದಿದ್ದ. ಈಗಾಗಲೇ 10 ಪ್ರಕರಣಗಳಲ್ಲಿ ಆರೋಪಿಯಾಗಿರುವ ಆನಂದ್, ಕೆಲ ಬಾರಿ ಜೈಲಿಗೆ ಹೋಗಿ ಬಂದಿದ್ದ. ಜಾಮೀನು ಪಡೆದು ಹೊರಬಂದ ಬಳಿಕ ಪುನಃ ಹಳೆಯ ಕಸುಬು ಮುಂದುವರಿಸಿದ್ದ.

ಇತ್ತೀಚೆಗೆ ಹೈದರಾಬಾದ್‌ನಲ್ಲಿ ನೆಲೆಸಿರುವ ಶಫೀರ್, ಫೇಸ್‌ಬುಕ್‌ನಲ್ಲಿ ಆನಂದ್‌ಗೆ ಸ್ನೇಹಿತನಾಗಿದ್ದ. ಅವನು ಕೂಡ ಕಳ್ಳನಾಗಿದ್ದ. ತಾನು ನಕಲಿ ದಾಖಲೆ ಸೃಷ್ಟಿಸಿಕೊಡುವುದಾಗಿ ಆನಂದ್‌ಗೆ ತಿಳಿಸಿದ್ದ. ಹೆಬ್ಬಗೋಡಿ, ಎಲೆಕ್ಟ್ರಾನಿಕ್ ಸಿಟಿ ವಿವಿಧ ಭಾಗಗಳಲ್ಲಿ ಆನಂದ್ ತಿರುಗಾಡಿ ರಸ್ತೆ ಬದಿ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ಬೈಕ್‌ಗಳನ್ನು ಕಳವು ಮಾಡುತ್ತಿದ್ದ. ಈ ಬೈಕ್‌ಗಳಿಗೆ ಶಫೀರ್, ಸೈಬರ್ ಸೆಂಟರ್‌ನಲ್ಲಿ ಕುಳಿತು ನಕಲಿ ಆರ್.ಸಿ. ಕಾರ್ಡ್ ತಯಾರಿಸಿಕೊಡುತ್ತಿದ್ದ. ಇದೇ ದಾಖಲೆಗಳನ್ನು ಬಳಸಿ ಕದ್ದ ಬೈಕ್‌ಗಳನ್ನು ಒಎಲ್‌ಎಕ್ಸ್ ನಲ್ಲಿ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸಿಸಿಟಿವಿ ಸುಳಿವು: ಕೆಲ ದಿನಗಳ ಹಿಂದೆ ಗೊಲ್ಲಹಳ್ಳಿ ಯಲ್ಲಿ ಮನೆ ಮುಂದೆ ನಿಲ್ಲಿಸಿದ್ದ ಮೆಹಬೂಬ್ ಎಂಬುವವರ ಬೈಕ್ ಕಳವಾಗಿತ್ತು. ಈ ಪ್ರಕರಣದ ತನಿಖೆ ಜವಾಬ್ದಾರಿ ಹೊತ್ತ ಇನ್ಸ್‌ಪೆಕ್ಟರ್ ಸೋಮಶೇಖರ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಸಂಜೀವ್ ನಾಯ್ಕ್ ನೇತೃತ್ವದ ತಂಡವು, ಘಟನಾ ಸ್ಥಳದ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿ ಆರೋಪಿಗಳನ್ನು ಬಂಧಿಸಿದೆ.

ಅಪರಾಧ ಸುದ್ದಿ

ಕೆಲಸ ಮಾಡುತ್ತಿದ್ದ ಮನೆಗೇ ಕನ್ನ: ದಂಪತಿ ಬಂಧನ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲಿ ಚಿನ್ನಾಭರಣ ದೋಚಿದ್ದ ದಂಪತಿಯನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ. ಕತ್ರಿಗುಪ್ಪೆ ನಿವಾಸಿಗಳಾದ ಎಂ.ಐಶ್ವರ್ಯ (21), ಮಣಿಕಂಠ (26) ಬಂಧಿತರು. ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ಬಸವಾಪಟ್ಟಣದ ದಾಗಿನಕಟ್ಟೆ ಗ್ರಾಮದ ಮಣಿಕಂಠ ದಂಪತಿ ಉದ್ಯೋಗ ಅರಸಿ ವರ್ಷದ ಹಿಂದೆ ನಗರಕ್ಕೆ ಬಂದಿದ್ದರು. ಆರು ತಿಂಗಳ ಹಿಂದೆ ಉದ್ಯಮಿ ಮಲ್ಲಿಕಾರ್ಜುನ್ ಮನೆಯಲ್ಲಿ ಅವರ ಕಾರು ಚಾಲಕನಾಗಿ ಮಣಿಕಂಠ ಹಾಗೂ ಮನೆಯಲ್ಲಿ ಸಹಾಯಕಿಯಾಗಿ ಐಶ್ವರ್ಯ ಸೇರಿದ್ದರು. ಔಟ್‌ಹೌಸ್‌ನಲ್ಲಿ ದಂಪತಿ ನೆಲೆಸಲು ಅವಕಾಶ ನೀಡಲಾಗಿತ್ತು.

ಮಾಲೀಕರ ಮನೆಯಲ್ಲಿ ಹಣ ಹಾಗೂ ಆಭರಣ ಕಂಡು ಕಳ್ಳತನ ಮಾಡುವ ದುರಾಸೆಗೆ ಬಿದ್ದಿದ್ದ ದಂಪತಿ, ನಾಲ್ಕು ತಿಂಗಳಿಂದ ಹಂತ-ಹಂತವಾಗಿ ಹಣ ಹಾಗೂ ಆಭರಣ ಕದ್ದು ಮಾರಾಟ ಮಾಡುತ್ತಿದ್ದರು. ಇತ್ತೀಚೆಗೆ ಆಭರಣ ಕಳವಾಗಿರುವುದು ಮಾಲೀಕ ಮಲ್ಲಿಕಾರ್ಜುನ್‌ಗೆ ಗೊತ್ತಾಗಿ ಕೆಲಸಗಾರರ ಮೇಲೆ ಶಂಕೆ ವ್ಯಕ್ತಪಡಿಸಿ ದೂರು ನೀಡಿದ್ದರು. ಹಲವು ಆಯಾಮಗಳಲ್ಲಿ ತನಿಖೆ ನಡೆಸಿ ಮಣಿಕಂಠ ದಂಪತಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಕಳ್ಳತನದ ಕೃತ್ಯ ಬಾಯ್ಬಿಟ್ಟಿದ್ದರು. ಆರೋಪಿಗಳು ಕದ್ದಿದ್ದ 199 ಗ್ರಾಂ ಚಿನ್ನಾಭರಣ, 730 ಗ್ರಾಂ ಬೆಳ್ಳಿ ವಸ್ತುಗಳು ಹಾಗೂ 13.20 ಲಕ್ಷ ರೂ. ನಗದು ಸೇರಿದಂತೆ 42.89 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ಚರ್ಮ ಪಾದರಕ್ಷೆ ತಯಾರಿಕಾ ಸ್ಪರ್ಧೆಗೆ ಅರ್ಜಿ ಆಹ್ವಾನ

ಬೆಂಗಳೂರು: ಡಾ.ಬಾಬು ಜಗಜೀವನ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ (ಲಿಡ್ಕರ್) ಆಯೋಜಿಸಿರುವ ರಾಜ್ಯಮಟ್ಟದ ಚರ್ಮ ಪಾದರಕ್ಷೆ ತಯಾರಿಕಾ ಸ್ಪರ್ಧೆಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಸ್ಪರ್ಧೆಯಲ್ಲಿ 18 ರಿಂದ 55 ರ ವಯೋಮಿತಿಯ ಯಾರು ಬೇಕಾದರೂ ಸ್ಪರ್ಧಿಸಬಹುದಾಗಿದ್ದು, ಮೇ 30ರೊಳಗೆ ಅರ್ಜಿ ಸಲ್ಲಿಸಿ, ಹೆಸರು ನೋಂದಾಯಿಸಿಕೊಳ್ಳಬೇಕಿದೆ. ಸ್ಪರ್ಧೆಯ ಸ್ಥಳ: ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಲೆದರ್ ಫ್ಯಾಷನ್ ಟೆಕ್ನಾಲಜಿ, ಉಲ್ಲಾಳ ಉಪನಗರ, ಕೆಂಗೇರಿ.

ಬಹುಮಾನದ ಮೊತ್ತ: ವಿಜೇತರಿಗೆ ಪ್ರಥಮ ಬಹುಮಾನ 50,000 ರೂ., ದ್ವಿತೀಯ ಬಹುಮಾನ 30,000 ರೂ., ತೃತೀಯ ಬಹುಮಾನ 20,000 ರೂ., ಸಮಾಧಾನಕರ ಬಹುಮಾನ 10,000 ರೂ. (ಇಬ್ಬರಿಗೆ) ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಭೇಟಿ ನೀಡಬಹುದಾದ ವೆಬ್‌ಸೈಟ್ ವಿಳಾಸ: https//lidikar.com.

ಗೂಡ್ಸ್ ವಾಹನ ಡಿಕ್ಕಿ: ಬಾಲಕ ಸಾವು

ಕೊಳ್ಳೇಗಾಲ (ಚಾಮರಾಜನಗರ): ತಾಲೂಕಿನ ಅಣಗಳ್ಳಿ ಸಮೀಪ ಮಂಗಳವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಸೈಕಲ್‌ನಲ್ಲಿ ತೆರಳುತ್ತಿದ್ದ ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಬೆಂಗಳೂರು ಮೂಲದ ಯಶ್ವಂತ್ (11) ಮೃತ ಬಾಲಕ. ಬೇಸಿಗೆ ರಜೆಯ ನಿಮಿತ್ತ ಅಣಗಳ್ಳಿಯಲ್ಲಿರುವ ತಾತನ ಮನೆಗೆ ಬಂದಿದ್ದ ಆತ, ಸೈಕಲ್‌ನಲ್ಲಿ ಅಣಗಳ್ಳಿಯಿಂದ ಹರಳೆ ಮಾರ್ಗದಲ್ಲಿ ತೆರಳುತ್ತಿದ್ದ ವೇಳೆ ಹಿಂಬದಿಯಿಂದ ಬಂದ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡು ಕೊನೆಯುಸಿರೆಳೆದಿದ್ದಾನೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಮುತ್ತುರಾಜ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಕೊಳ್ಳೇಗಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ

ಪತ್ರಿಕಾ ವಿತರಕ ರಮೇಶ್

ಬೆಂಗಳೂರು: ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದ ಜಯಂತಿನಗರದ ನಿವಾಸಿ ರಮೇಶ್(50) ಮಂಗಳವಾರ ಸಂಜೆ ಹೃದಯಾಘಾತದಿಂದ ನಿಧನರಾಗಿದ್ದಾರೆ.



ಸುಮಾರು 23 ವರ್ಷಗಳಿಂದ ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದ ಅವರಿಗೆ ಪತ್ನಿ, ಮಗ ಮತ್ತು ಮೊಮ್ಮಗಳು ಇದ್ದಾರೆ. ಹಲಸೂರಿನ ಜೋಗುಪಾಳ್ಯದಲ್ಲಿರುವ ಅವರ್ ಲೇಡಿ ಆಫ್ ಲೂರ್ದ್ ಚರ್ಚ್‌ನಲ್ಲಿ ಬುಧವಾರ ಮಧ್ಯಾಹ್ನ 3 ಗಂಟೆಗೆ ಅಂತಿಮ ವಿಧಿ ವಿಧಾನ ನೆರವೇರಲಿದೆ ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ಎಲ್ಲಿ-ಏನು? ಬುಧವಾರ

ಆಚಾರ್ಯ ಪಾಠಶಾಲಾ ಕಾಲೇಜ್ ಆಫ್ ಕಾಮರ್ಸ್: ಕಾಲೇಜ್ ಡೇ ಕಾರ್ಯಕ್ರಮ. ಮುಖ್ಯ ಅತಿಥಿ: ನಟ ಶ್ರೀನಿವಾಸ ಪ್ರಭು, ಎಪಿಎಸ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ವಿಷ್ಣುಭರತ್ ಆಲಂಪಲ್ಲಿ. **ಸ್ಥಳ:** ಪ್ರೊ . ಎನ್. ಅನಂತಾಚಾರ್ ಆಡಿಟೋರಿಯಂ. ಬೆಳಗ್ಗೆ 10.30

ನಮ್ಮ ಆರ್ಟ್ ಬೆಂಗಳೂರು: ರಾಷ್ಟ್ರೀಯ ಕಲಾ ಉತ್ಸವದ 2ನೇ ಆವೃತ್ತಿಯ ಉದ್ಘಾಟನಾ ಸಮಾರಂಭ. ಮುಖ್ಯ ಅತಿಥಿ: ಕಿರ್ಲೋಸ್ಕರ್ ಸಿಸ್ಟಮ್ಸ್ ಪ್ರೈವೆಟ್ ಲಿಮಿಟೆಡ್ ಅಧ್ಯಕ್ಷೆ ಗೀತಾಂಜಲಿ ವಿಕ್ರಂ ಕಿರ್ಲೋಸ್ಕರ್, ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ. ಜಿ. ರಾಘವನ್, ಕಲಾ ವಿಮರ್ಶಕ ಡಾ. ಅಶ್ರಫಿ ಎಸ್. ಭಗತ್. **ಸ್ಥಳ:** ಚಿತ್ರಕಲಾ ಪರಿಷತ್ತು. ಸಂಜೆ 5

350 ಸಿಸಿಟಿವಿ ಶೋಧಿಸಿ ಕುಖ್ಯಾತ ಕಳ್ಳನ ಲಾಕ್

■ **ವಿಕ ಸುದ್ದಿಲೋಕ** ಬೆಂಗಳೂರು

66 ಕೇಸ್‌ಗಳ ನಟೋರಿಯಸ್ ಕಳ್ಳ

ರಾಜಧಾನಿಯಲ್ಲಿ ಮನೆಗಳಿಗೆ ಕನ್ನಹಾಕಿ ಕೆಜಿಗಟ್ಟಲೆ ಆಭರಣ ದೋಚುತ್ತಿದ್ದ ಕುಖ್ಯಾತ ಕಳ್ಳನನ್ನು ಸುಮಾರು 140 ಕಿ.ಮೀ. ವ್ಯಾಪ್ತಿಯ 350ಕ್ಕೂ ಹೆಚ್ಚು ಸಿಸಿಟಿವಿ ಪರಿಶೀಲಿಸಿ ಸೆರೆಹಿಡಿಯುವಲ್ಲಿ ಇಂದಿರಾನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲೂಕಿನ ನಾರ್ತ್ ಟೌನ್ ಲೇಔಟ್ ನಿವಾಸಿ ಬಿ.ಪ್ರಕಾಶ್ ಅಲಿಯಾಸ್ ಜಂಗ್ಲಿ (37) ಬಂಧಿತ. ಆರೋಪಿಯು ಕಳವು ಮಾಡಿದ್ದ 1.15 ಕೋಟಿ ರೂ. ಮೌಲ್ಯದ 855 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

2014ರಿಂದ ಕಳ್ಳತನವನ್ನೇ ಕಸುಬು ಮಾಡಿಕೊಂಡಿರುವ ಪ್ರಕಾಶ್ ವಿರುದ್ಧ ಬೆಂಗಳೂರು ನಗರ ಹಾಗೂ ಗ್ರಾಮಾಂತರದಲ್ಲಿ 36 ಕೇಸ್ ದಾಖಲಾಗಿವೆ. ಆಂಧ್ರಪ್ರದೇಶದಲ್ಲಿ 11 ಕೇಸ್‌ಗಳಿವೆ. ತಮಿಳುನಾಡಿನಲ್ಲಿ ಒಂದು ಕೇಸ್‌ನಲ್ಲಿ ಭಾಗಿಯಾಗಿದ್ದಾನೆ. ಈಗ 18 ಕೇಸ್‌ಗಳು ಪತ್ತೆಯಾಗಿದ್ದು, 66 ಪ್ರಕರಣಗಳ ಕುಖ್ಯಾತಿ ಹೊಂದಿದ್ದಾನೆ.

ಮೂರು ರಾಜ್ಯಗಳ ಜೈಲೂಟ ತಿಂದಿರುವ ಪ್ರಕಾಶ್ ಜಾಮೀನು ಪಡೆದು ಪ್ರತಿ ಬಾರಿ ಹೊರ ಬಂದ ಕೆಲವೇ ದಿನಗಳಲ್ಲಿ ಪುನಃ ಕಳ್ಳತನದ ಕೃತ್ಯ ಎಸಗುತ್ತಿದ್ದ. ಬೀಗ ಹಾಕಿದ ಮನೆಗಳನ್ನು ಗುರುತಿಸಿ ಬೀಗ ಒಡೆದು ಒಳನುಗ್ಗಿ ಆಭರಣ ಕದಿಯುತ್ತಿದ್ದ. ಕದ್ದ ಆಭರಣಗಳನ್ನು ಮಾರಾಟ ಮಾಡಿ ಐಷಾರಾಮಿ ಜೀವನ ನಡೆಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಚಿನ್ನ ಸ್ವೀಕರಿಸಿದವರ ಬಂಧನ

ಜಂಗ್ಲಿ ಪ್ರಕಾಶ್‌ನಿಂದ ಕದ್ದ ಚಿನ್ನಾಭರಣ ಸ್ವೀಕರಿಸಿ ಕಳ್ಳತನಕ್ಕೆ ಸಹಕಾರ ನೀಡುತ್ತಿದ್ದ ಇಬ್ಬರು ಚಿನ್ನಾಭರಣ ವ್ಯಾಪಾರಿಗಳನ್ನು ಪೊಲೀಸರು ಬಂಧಿಸಿದ್ದಾರೆ. ರಾಜಸ್ಥಾನ ಮೂಲದ ಸುಶಾಂತ್. ಎಸ್. ದೇಶಮುಖ್ ಹಾಗೂ ಭಾಗೀರಥ್ ದೇವಾಸಿ ಬಂಧಿತರು. ಚಿಕ್ಕಪೇಟೆಯ ಚಿನ್ನಾಭರಣ ಮಳಿಗೆ ಹೊಂದಿರುವ ಆರೋಪಿಗಳು ಹಲವು ವರ್ಷಗಳಿಂದ ಪ್ರಕಾಶ್‌ನಿಂದ ಕದ್ದ ಆಭರಣ ಸ್ವೀಕರಿಸುತ್ತಿದ್ದರು ಎಂದು ಅಧಿಕಾರಿ ಹೇಳಿದರು.

ಸಿಸಿಟಿವಿ ನೀಡಿತ್ತು ಸುಳಿವು: ಕೆಲ ದಿನಗಳ ಹಿಂದೆ ಬಿ.ಎಂ.ಕಾವಲ್‌ನ ನಿವಾಸಿ ಕೆ.ಕೆ ಗೋವಿಂದನ್ ಅವರು ಕುಟುಂಬ ಸಮೇತ ಕೇರಳಕ್ಕೆ ತೆರಳಿದ್ದರು. ಈ ಸಮಯದಲ್ಲಿ ಅವರ ಮನೆಗೆ ಕನ್ನಹಾಕಿದ್ದ ಖದೀಮ ಆಭರಣ ದೋಚಿದ್ದ.

ಹಲಸೂರು ಉಪ ವಿಭಾಗದ ಎಸಿಪಿ ರಂಗಪ್ಪ ಹಾಗೂ ಇಂದಿರಾನಗರ ಇನ್ಸ್‌ಪೆಕ್ಟರ್ ಸುದರ್ಶನ್ ನೇತೃತ್ವದ ತಂಡವು ಹಲವು ಆಯಾಮಗಳಲ್ಲಿ ಪ್ರಕರಣದ ತನಿಖೆ ನಡೆಸಿದಾಗ ಕುಖ್ಯಾತ ಕಳ್ಳ ಜಂಗ್ಲಿ ಪ್ರಕಾಶ್ ಕೈವಾಡವಿರುವುದು ಗೊತ್ತಾಗಿತ್ತು. ಈ ನಿಟ್ಟಿನಲ್ಲಿ ತನಿಖಾ ತಂಡವು ಪ್ರಕಾಶ್ ನಕಲಿ ನಂಬರ್ ಪ್ಲೇಟ್ ಹೊಂದಿರುವ ಬೈಕ್‌ನ ಸಿಸಿಟಿವಿ ಜಾಡು ಹಿಡಿದು ಬೆಂಗಳೂರು ಹೊರವಲಯದ ದೇವನಹಳ್ಳಿ, ನೆಲಮಂಗಲ ಸೇರಿದಂತೆ ಸುಮಾರು 140 ಕಿಲೋಮೀಟರ್ ವ್ಯಾಪ್ತಿಯಲ್ಲಿ 350ಕ್ಕೂ ಹೆಚ್ಚು ಸಿಸಿಟಿವಿಗಳನ್ನು ಪರಿಶೀಲಿಸಿ ಪ್ರಕಾಶ್‌ನ ಇರುವಿಕೆ ಪತ್ತೆ ಹಚ್ಚಿತ್ತು. ಅಂತಿಮವಾಗಿ ದೇವನಹಳ್ಳಿ ಸಮೀಪ ಬಳಿ ಪ್ರಕಾಶ್‌ನನ್ನು ಬಂಧಿಸುವಲ್ಲಿ ತಂಡ ಯಶಸ್ವಿಯಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಅನ್ಯಭಾಷೆ ಚಾಲಕರಿಗೆ ಕನ್ನಡ ಕಲಿಸಿ: ಬಿಳಿಮಲೆ ಆಗ್ರಹ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ಆಟೋ, ಟ್ಯಾಕ್ಸಿ ಓಡಿಸುವ ಅನ್ಯ ಭಾಷಿಕರಿಗೆ ಕನ್ನಡ ಕಲಿಸಲು ಕ್ರಮ ವಹಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಸಾರಿಗೆ ಇಲಾಖೆ ಆಯುಕ್ತರಿಗೆ ಪತ್ರ ಬರೆದಿರುವ ಅವರು, ಸಾರಿಗೆ ಇಲಾಖೆಯ ಮೋಟಾರು ವಾಹನ ಕಾಯಿದೆ- 2016ರಲ್ಲಿ ಜಾರಿಗೆ ಬಂದಿರುವ ಆನ್ ಡಿಮ್ಯಾಂಡ್ ಸೇವೆಗಳ ನಿಯಮಗಳನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

''ಸಾರ್ವಜನಿಕ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುವ ವ್ಯಕ್ತಿಗಳು ಸ್ಥಳೀಯ ಭಾಷೆಯ ಕನಿಷ್ಠ ಜ್ಞಾನ ಹೊಂದಿರುವುದು ಕಡ್ಡಾಯ. ನಿಯಮಗಳಲ್ಲಿ ಅವಕಾಶ ವಿದ್ದರೂ ಅದನ್ನು ಸಮರ್ಪಕವಾಗಿ ಅನುಷ್ಠಾನ ಮಾಡದ ಕಾರಣ ಹಲವಾರು ಬಾರಿ ಅನ್ಯಭಾಷಿಕ ವಾಹನ ಚಾಲಕರು ಮತ್ತು ಕನ್ನಡಿಗ ಪ್ರಯಾಣಿಕರ ನಡುವೆ ವಾಗ್ವಾದಗಳು ಸಂಭವಿಸುತ್ತಿರುವುದು ಕಳವಳಕಾರಿ ಸಂಗತಿ,'' ಎಂದು ಸರಕಾರದ ಗಮನ ಸೆಳೆದಿದ್ದಾರೆ.

''ಕರ್ನಾಟಕ ಆನ್ ಡಿಮ್ಯಾಂಡ್ ಸಾರಿಗೆ ನಿಯಮ- 2016ರ ಉಪನಿಯಮ (8)ದಲ್ಲಿ ಕರ್ನಾಟಕದಲ್ಲಿ ವಾಹನ ಚಾಲನೆ ಮಾಡುವ ಚಾಲಕ ಕನಿಷ್ಠ ಎರಡು ವರ್ಷಗಳ ಕಾಲ ಇಲ್ಲಿ ವಾಸವಿರಬೇಕು. ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಮಾತನಾಡುವಂತಿರಬೇಕು ಹಾಗೂ ಇಲ್ಲಿನ ನಾಗರಿಕರೊಂದಿಗೆ ಸಂಯಮದಿಂದ ವರ್ತಿಸುವ ವ್ಯಕ್ತಿಯಾಗಿರಬೇಕು ಎಂಬ ಅಂಶಗಳನ್ನು ಅಳವಡಿಸಲಾಗಿದೆ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಮೂಲಕ ವಿಶೇಷವಾಗಿ ಬೆಂಗಳೂರು ನಗರದ ಕನ್ನಡಿಗರು ಎದುರಿಸುತ್ತಿರುವ ಸುದೀರ್ಘ ಸಮಸ್ಯೆಗೆ ಸಾರಿಗೆ ಇಲಾಖೆ ಪರಿಹಾರ ದೊರಕಿಸಬೇಕು,'' ಎಂದು ಬಿಳಿಮಲೆ ಕೋರಿದ್ದಾರೆ.

''ಕನ್ನಡ ಮಾತನಾಡಲು ಬಾರದ ಚಾಲಕರನ್ನು ಒಂದೆಡೆ ಸೇರಿಸಿ ಅವರಿಗೆ ಕನ್ನಡ ಕಲಿಸುವ ಪ್ರಯತ್ನವನ್ನು ಸಾರಿಗೆ ಇಲಾಖೆ ಮಾಡಬಹುದು,'' ಎಂದು ಸಲಹೆ ನೀಡಿರುವ ಅವರು, ''ಇದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಕಾರ ಇರಲಿದೆ,'' ಎಂದು ಭರವಸೆ ನೀಡಿದ್ದಾರೆ.

'ಬೇಳೆ ಕಾಳು ಉತ್ಪಾದನೆ ಹೆಚ್ಚಳಕ್ಕೆ ಕ್ರಿಯಾ ಯೋಜನೆ ರೂಪಿಸಿ'

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರಸ್ತುತ ಸನ್ನಿವೇಶದಲ್ಲಿ ರಾಷ್ಟ್ರದಲ್ಲಿ ಬೇಳೆ ಕಾಳು ಬೆಳೆಗಳ ಉತ್ಪಾದನೆ, ಬೆಳೆ ಪ್ರದೇಶ ವ್ಯಾಪ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಜ್ಞಾನಿಗಳು, ಸಂಶೋಧಕರು ಕ್ರಿಯಾ ಯೋಜನೆ ರೂಪಿಸಬೇಕು ಎಂದು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಮಹಾ ನಿರ್ದೇಶಕ ಡಾ. ಎಂ.ಎಲ್. ಜಾಟ್ ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಹೊಸ ದಿಲ್ಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಹಯೋಗದೊಂದಿಗೆ ಬೆಂಗಳೂರು ಕೃಷಿ ವಿವಿ ಆವರಣದಲ್ಲಿ ಆಯೋಜಿಸಿರುವ ಮೂರು ದಿನಗಳ ಮುಂಗಾರಿನ ಬೇಳೆ ಕಾಳು ಬೆಳೆಗಳ ರಾಷ್ಟ್ರೀಯ ವಾರ್ಷಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಮುಂಬರುವ ದಿನಗಳಲ್ಲಿ ವಿಜ್ಞಾನಿಗಳು ಈ ಕುರಿತಾಗಿ ಸಂಘಟಿತರಾಗಿ ಸಮಗ್ರ ಸಂಶೋಧನಾ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿದೆ. ಕೃಷಿ ಸಂಶೋಧನೆಯಲ್ಲಿ ನುರಿತ ಮಾನವ ಸಂಪನ್ಮೂಲ ಹಾಗೂ ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಮಾತ್ರ ನಿರೀಕ್ಷಿತ ಗುರಿ ಸಾಧಿಸಲು ಸಾಧ್ಯ,'' ಎಂದು ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ ಮಾತನಾಡಿ, ''ದ್ವಿದಳ ಧಾನ್ಯಗಳ ಕೃಷಿಯನ್ನು ಇನ್ನೂ ಹೆಚ್ಚು ಲಾಭದಾಯಕಗೊಳಿಸಿದಾಗ ಕೃಷಿಕರು ಈ ಬೆಳೆಗಳತ್ತ ಆಕರ್ಷಿತರಾಗಲಿದ್ದು, ಅಧಿಕ ಇಳುವರಿ ನೀಡುವ ಹೊಸ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಅಲ್ಲದೆ, ತಳಿ ಅಭಿವೃದ್ಧಿಯನ್ನು ತ್ವರಿತಗೊಳಿಸಲು 'ಸ್ಪೀಡ್ ಬ್ರೀಡಿಂಗ್' ಕಾರ್ಯಕ್ರಮಗಳಿಗೆ ಒತ್ತು ನೀಡಬೇಕಾಗಿದೆ,'' ಎಂದರು.

ಕಾರ್ಯಕ್ರಮದಲ್ಲಿ ಐಸಿಎಆರ್‌ನ ಉಪ ಮಹಾನಿರ್ದೇಶಕ ಡಾ. ಡಿ.ಕೆ. ಯಾದವ್, ರಾಷ್ಟ್ರೀಯ ದ್ವಿದಳ ಧಾನ್ಯ ಮಿಷನ್‌ನ ಜಂಟಿ ಕಾರ್ಯದರ್ಶಿ ಸಂಜಯ್ ಅಗರವಾಲ್, ಐಸಿಎಆರ್‌ನ ಸಹಾಯಕ ಮಹಾ ನಿರ್ದೇಶಕ ಡಾ. ಸಂಜೀವ್ ಝಾ, ಕಾನ್ಪುರದ ಐಐಪಿಆರ್ ನಿರ್ದೇಶಕ ಡಾ. ಜಿ.ಪಿ. ದೀಕ್ಷಿತ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಡಾ. ಮೂಡಲಗಿರಿಯಪ್ಪ, ಪ್ರಧಾನ ವಿಜ್ಞಾನಿ ಡಾ. ಲೋಹಿತಾಶ್ವ ಹಾಗೂ ರಾಷ್ಟ್ರದ ನಾನಾ ಭಾಗಗಳ 250ಕ್ಕೂ ಹೆಚ್ಚು ವಿಜ್ಞಾನಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಕಬ್ಬನ್‌ಪಾರ್ಕ್‌ನ ತಾವರೆಕೊಳಕ್ಕೆ ಹರಿಯುತ್ತಿದೆ ಒಳಚರಂಡಿ ನೀರು

■ **ವಿಕ ಸುದ್ದಿಲೋಕ** ಬೆಂಗಳೂರು

ಕಬ್ಬನ್‌ಪಾರ್ಕ್‌ನ ತಾವರೆಕೊಳಕ್ಕೆ ಒಳಚರಂಡಿ ನೀರು ಹರಿದು ಬರುತ್ತಿದ್ದು, ಇಲ್ಲಿನ ಸಾಕಷ್ಟು ಮೀನುಗಳು ಮರಣ ಹೊಂದಿವೆ. ಇಲ್ಲಿನ ಪರಿಸರಕ್ಕೂ ತೀವ್ರ ಧಕ್ಕೆ ಉಂಟಾಗಿದೆ. ಈ ಬಗ್ಗೆ ಕಬ್ಬನ್‌ಪಾರ್ಕ್ ವಾಯುವಿಹಾರಿಗಳ ಸಂಘ ತೋಟಗಾರಿಕೆ ಇಲಾಖೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಚಿನ್ನಸ್ವಾಮಿ ಸ್ಟೇಡಿಯಂ ಮತ್ತು ಬಿಎಂಆರ್‌ಸಿಎಲ್‌ನಿಂದ ಕಬ್ಬನ್‌ಪಾರ್ಕ್‌ಗೆ ನೇರವಾಗಿ ಒಳಚರಂಡಿ ನೀರು ಹರಿದು ಬರುತ್ತಿದೆ. ಆದರೆ, ತೋಟಗಾರಿಕೆ ಇಲಾಖೆ ಇದನ್ನು ಕಂಡೂ ಕಾಣದಂತೆ ಕೈ ಕಟ್ಟಿ ಕುಳಿತಿದೆ ಎಂದು ಕಬ್ಬನ್‌ಪಾರ್ಕ್ ವಾಯುವಿಹಾರಿಗಳ ಸಂಘದ ಅಧ್ಯಕ್ಷ ಹಾಗೂ ವಕೀಲರಾದ ಎಸ್. ಉಮೇಶ್ ದೂರಿದ್ದಾರೆ.

ಕಬ್ಬನ್‌ಪಾರ್ಕ್‌ಗೆ ಹರಿದು ಬರುತ್ತಿರುವ ಕೊಳಚೆ ನೀರನ್ನು ಶಾಶ್ವತವಾಗಿ ತಡೆಯಬೇಕು. ಇಲ್ಲದಿದ್ದರೆ ದೊಡ್ಡ ಹೋರಾಟಕ್ಕೆ ಮುಂದಾಗುತ್ತೇವೆ ಎಂದು ಉಮೇಶ್ ಸರಕಾರ ಮತ್ತು ತೋಟಗಾರಿಕೆ ಇಲಾಖೆಗೆ ಎಚ್ಚರಿಕೆ ನೀಡಿದ್ದಾರೆ.

ಶಿವಾಜಿನಗರದ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು ನಡೆದ ದುರಂತದಲ್ಲಿ ಮೃತಪಟ್ಟ ಕೇರಳ ನಿವಾಸಿಗಳ ಮನೆಗೆ ಭೇಟಿ ನೀಡಿದ್ದ ಸಚಿವ ಜಮೀರ್ ಅಹಮದ್ ಖಾನ್ ಅವರು ಪರಿಹಾರ ನೀಡಿದರು. ಮೃತಪಟ್ಟ ಸ್ಮಿತಾ ಹಾಗೂ ಲತಾ ಅವರ ಕುಟುಂಬಕ್ಕೆ ವೈಯಕ್ತಿಕವಾಗಿ ತಲಾ ಐದು ಲಕ್ಷ ರೂ. ಹಾಗೂ ಗಾಯಾಳುಗಳಾದ ಸಿಜಿ, ಮಾಯಾ, ಪ್ರೀತಿ ಕುಟುಂಬಕ್ಕೆ ತಲಾ ಒಂದು ಲಕ್ಷ ರೂ. ನೆರವಿನ ಚೆಕ್ ನೀಡಿದರು.

ಪೇಟೆ ಧಾರಣೆ

ಬೆಂಗಳೂರು ಸಗಟು ಬೆಲೆ 05.05.2026

ಸೂರ್ಯಕಾಂತಿ ಎಣ್ಣೆ (10 ಲೀ.)	
ಗೋಲ್ಡ್ ವಿನ್ನರ್	1720
ಜೆಮಿನಿ	1750
ಸನ್‌ಪ್ಯೂರ್ (10 ಕೆ.ಜಿ.)	1710
ಪಾಮ್ ಆಯಿಲ್ (10 ಲೀ.)	
ರುಚಿ ಗೋಲ್ಡ್	1390
ಶುಭ್	1370
ಕಡಲೆಕಾಯಿ ಎಣ್ಣೆ (10 ಲೀ.)	
ಫ್ಯೂರ್‌ನಟ್	1650
ಕೆ ಎನ್ ಜಿ	1640
ನಟ್ ಗೋಲ್ಡ್	1600
ಕುಕ್ಕಿಂಗ್ ಆಯಿಲ್ (850 ಗ್ರಾ.ನ 10 ಪ್ಯಾಕೆಟ್)	
ಸನ್‌ಪಾರ್ಕ್	1380
ಸನ್ ಪ್ರಿಯಾ	1390
ಸನ್‌ಪ್ಲಸ್	1430
ದೀಪದ ಎಣ್ಣೆ (850 ಗ್ರಾ.ನ 10 ಪ್ಯಾಕೆಟ್)	
ಆನಂದಮ್	1410
ಆಂದಂ	1400
ಸಕ್ಕರೆ (50 ಕೆಜಿ)	
ಉತ್ತಮ	2110-2115
ಮಧ್ಯಮ	2100-2105
ಬೆಲ್ಲ (ಕ್ವಿಂಟಾಲ್)	
ಸಣ್ಣ ಅಚ್ಚು	5600-6200
ದಪ್ಪ ಅಚ್ಚು	5500-5600
ಉಂಡೆ ಸೇಲಂ	4900-5200
ಕಡ್ಲೆ ಬೇಳೆ (50 ಕೆಜಿ)	
ಲಕನ್	4150-4170

ತೊಗರಿಬೇಳೆ (50 ಕೆಜಿ)	
ಶಿವಲಿಂಗ	6500-6520
ರೆಗ್ಯುಲರ್	5000-5500
ಉದ್ದಿನ ಬೇಳೆ (50 ಕೆಜಿ)	
ಹನುಮಾನ್	5950-6000
ಮಹಾರಾಜ	5800-5850
ಕಡ್ಲೆಕಾಯಿ ಬೀಜ (40 ಕೆಜಿ)	
ಉತ್ತಮ	6600-6800
ಮಧ್ಯಮ	6000-6500
ಅಕ್ಕಿ (ಕ್ವಿಂಟಾಲ್)	
ಸೋನಾ ಮಸೂರಿ (ಹಳೆ)	5500-5600
ಸೋನಾ ಮಸೂರಿ (ಹೊಸ)	4500-4800
ಸೋನಾ ಮಸೂರಿ ಸ್ಟೀಮ್	4700-4800
ಇಡ್ಲಿರಾರ್	3900-4000
ರಾಗಿ (ಕ್ವಿಂಟಾಲ್)	
ಉತ್ತಮ	4900-5200
ಮಧ್ಯಮ	4600-4700
ಗೋಧಿ (50 ಕೆಜಿ)	
ಉತ್ತಮ	2100-2200
ಮಧ್ಯಮ	1900-2000
ಜೋಳ (50 ಕೆಜಿ)	
ಉತ್ತಮ	2700-2800
ಮಧ್ಯಮ	2000-2400
ಈರುಳ್ಳಿ (50 ಕೆಜಿ)	
ದಪ್ಪ	700-750
ಮಧ್ಯಮ	400-500
ಗೋಲ್ಟಾ	350-400
ಮೊಟ್ಟೆ 100ಕ್ಕೆ	590

ಬೆಂಗಳೂರಿಗೆ ಆರ್ಥಿಕ ಮಾಸ್ಟರ್‌ಪ್ಲಾನ್

» ನಮ್ಮ ಮೊದಲ ಪುಟದಿಂದ

''ಯಾವ ಜಾಗದಲ್ಲಿ ಉದ್ಯೋಗ ಸೃಷ್ಟಿ, ಪ್ರವಾಸೋದ್ಯಮ, ವಸತಿ ಯೋಜನೆಗಳಿಗೆ ಆದ್ಯತೆ ನೀಡಬೇಕೆಂಬುದರ ಜತೆಗೆ, ಸಂಚಾರ ದಟ್ಟಣೆ ನಿವಾರಣೆಗೆ ಸಂಬಂಧಿಸಿದಂತೆ ನಕ್ಷೆ ರೂಪಿಸಲಾಗುವುದು. ಮುಂಬಯಿ, ಹೊಸದಿಲ್ಲಿ, ಕೋಲ್ಕೊತ್ತಾದಲ್ಲಿ ಇಲ್ಲಿಗಿಂತಲೂ ಸಂಚಾರ ದಟ್ಟಣೆ ನೋಡಿದ್ದೇನೆ. ನಾನು ಅವರನ್ನು ದೂರುತ್ತಿಲ್ಲ. ಈ ಸಮಸ್ಯೆಗೆ ಯಾವ ರೀತಿ ಪರಿಹಾರ ಕಂಡುಕೊಳ್ಳಬೇಕೆಂಬುದರ ಬಗ್ಗೆ ಯೋಜನೆ ರೂಪಿಸಿದ್ದೇವೆ. ಸುಮಾರು 2 ಲಕ್ಷ ಕೋಟಿ ಮೌಲ್ಯದ ಯೋಜನೆ ರೂಪಿಸಿದ್ದು, ಹಂತ-ಹಂತವಾಗಿ ಕಾರ್ಯಗತಗೊಳಿಸಲಾಗುತ್ತಿದೆ,'' ಎಂದು ವಿವರಿಸಿದರು.

''ಜಾಗತಿಕ ನಗರಗಳ ಜತೆ ಸ್ಪರ್ಧೆ ಮಾಡಲಾಗುತ್ತಿದೆ. ನಮ್ಮ ಜತೆ ಒಡಂಬಡಿಕೆ ಮಾಡಿಕೊಳ್ಳಲು ಮುಂದೆ ಬಂದಿರುವ ಐಎಸ್‌ಇಜಿ ಫೌಂಡೇಷನ್ ಸಂಸ್ಥೆ ಮುಂಬಯಿ, ವಿಶಾಖಪಟ್ಟಣ, ಪುಣೆ, ವಾರಾಣಸಿಗಳಲ್ಲಿ ಈ ಯೋಜನೆ ರೂಪಿಸಿದೆ. ಸಂಸ್ಥೆಗೆ 4 ತಿಂಗಳ ಕಾಲಾವಕಾಶ ನೀಡಿದ್ದು, ಈ ಅವಧಿಯಲ್ಲಿ ನಕ್ಷೆ ರೂಪಿಸಲಿದೆ. ಸಂಸ್ಥೆಗೆ ಅಗತ್ಯ ಸಹಕಾರ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬೆಂಗಳೂರಿನ ನಾಗರಿಕರು, ಡೆವಲಪರ್‌ಗಳು, ಉದ್ದಿಮೆದಾರರು, ಶೈಕ್ಷಣಿಕ ಸಂಸ್ಥೆಗಳನ್ನು ವಿಶ್ವಾಸಕ್ಕೆ ಪಡೆದು ದೊಡ್ಡ ಮಾಸ್ಟರ್ ಪ್ಲಾನ್ ಸೃಷ್ಟಿಸಬೇಕು,'' ಎಂದು ಸೂಚಿಸಿದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಮತ್ತಿತರರು ಉಪಸ್ಥಿತರಿದ್ದರು.

ಜೀವನಶೈಲಿ ಕಾಯಿಲೆಗೆ ಹೋಮಿಯೋಪತಿ ಪರಿಹಾರ

■ **ವಿಕ ಸುದ್ದಿಲೋಕ** ಬೆಂಗಳೂರು

ಭಾರತದಲ್ಲಿ ಹೋಮಿಯೋಪತಿ ಶಕ್ತಿಶಾಲಿ ಮತ್ತು ಜನಪ್ರಿಯ ವೈದ್ಯಕೀಯ ಪದ್ಧತಿಯಾಗಿ ರೂಪುಗೊಳ್ಳುತ್ತಿದೆ. ದೇಶಾದ್ಯಂತ ಲಕ್ಷಾಂತರ ಜನರು ಈ ಪದ್ಧತಿಯಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಕೇಂದ್ರ ಆಯುಷ್ ಸಚಿವಾಲಯ ಕೂಡ ಈ ದಿಕ್ಕಿನಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸುತ್ತಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹೇಳಿದರು.

ಹೋಮಿಯೋಪತಿ ಫೌಂಡೇಷನ್ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವ ಹೋಮಿಯೋಪತಿ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

''ಸರಿಯಾದ ಪ್ರಮಾಣದಲ್ಲಿ ನೀಡಲಾಗುವ ಔಷಧಗಳು ದೇಹದ ನೈಸರ್ಗಿಕ ರೋಗನಿರೋಧಕ ಶಕ್ತಿಯನ್ನು ಜಾಗೃತಗೊಳಿಸುತ್ತವೆ. ಇಂದು ವೈದ್ಯಕೀಯ ವಿಜ್ಞಾನ ಬಹಳ ಮುಂದುವರಿದಿದ್ದರೂ, ಜೀವನಶೈಲಿ ಕಾಯಿಲೆಗಳು, ಮಾನಸಿಕ ಒತ್ತಡ ಮತ್ತು ದೀರ್ಘಕಾಲದ ಕಾಯಿಲೆಗಳು ಹೆಚ್ಚುತ್ತಿವೆ. ಹೋಮಿಯೋಪತಿಯ ಸಮಗ್ರ ವಿಧಾನ ಸಮತೋಲಿತ ಮತ್ತು ಶಾಶ್ವತ ಆರೋಗ್ಯದ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ,'' ಎಂದು ತಿಳಿಸಿದರು.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ. ಭಗವಾನ್ ಮಾತನಾಡಿ, ''ರೋಗಕ್ಕೆ ಚಿಕಿತ್ಸೆ ನೀಡುವುದು ಮಾತ್ರವಲ್ಲ, ಅದರ ಮೂಲ ಹುಡುಕುವ ಕೆಲಸವನ್ನು ಹೋಮಿಯೋಪತಿ ಮಾಡುತ್ತದೆ. ಇದು ಈ ಆಧುನಿಕ ಯುಗದ ಅಗತ್ಯಗಳಲ್ಲಿ ಒಂದು. ಹೀಗಾಗಿ, ಹೋಮಿಯೋಪತಿ ಶಿಕ್ಷಣವನ್ನು ಬಲಪಡಿಸುವುದು ಹಾಗೂ ಅದನ್ನು ಮುಖ್ಯ ಆರೋಗ್ಯ ವ್ಯವಸ್ಥೆಯೊಂದಿಗೆ ಜೋಡಿಸುವುದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಬದ್ಧತೆಯಾಗಿದೆ,'' ಎಂದರು.

ಕರ್ನಾಟಕ ಹೋಮಿಯೋಪತಿ ಮಂಡಳಿ ಅಧ್ಯಕ್ಷ ಡಾ.ಬಿ.ಟಿ.ರುದ್ರೇಶ್ ಮಾತನಾಡಿ, ''ನೂರಾರು ವರ್ಷಗಳ ನಂತರವೂ ಹೋಮಿಯೋಪತಿ ಇಂದು ನಮ್ಮ ನಡುವೆ ಇದೆ ಎಂದರೆ, ಭಾರತದ ಬಹು ನಂಬಿಕೆಯ ವೈದ್ಯಪದ್ಧತಿಯಾಗಿ ನಮ್ಮನ್ನು ಕಾಯುತ್ತಿದೆ ಎಂದರೆ ಅದಕ್ಕೆ ಅದರದೇ ಆದ ಅರ್ಹತೆ ಮತ್ತು ಸ್ಥಿರತೆ ಇರುವುದೇ ಕಾರಣ,'' ಎಂದರು.

ಶಾಸಕ ಸಿ.ಕೆ.ರಾಮಮೂರ್ತಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್, ಕುಲಸಚಿವ ಅರ್ಜುನ್ ಒಡೆಯರ್, ಮೌಲ್ಯಮಾಪನ ಕುಲಸಚಿವ ಡಾ.ರಿಯಾಜ್ ಭಾಷಾ ಉಪಸ್ಥಿತರಿದ್ದರು.

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಪಂಜಾಬ್	9	6	2	1	13	+0.855
ಬೆಂಗಳೂರು	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	10	5	5	0	10	+0.151
ಡೆಲ್ಲಿ	10	4	6	0	08	-0.949
ಕೋಲ್ಕೊತಾ	9	3	5	1	07	-0.539
ಮುಂಬಯಿ	10	3	7	0	06	-0.649
ಲಖನೌ	9	2	7	0	04	-1.076

445 ರನ್ — **ಕೆ.ಎಲ್. ರಾಹುಲ್**, ಡೆಲ್ಲಿ ಕ್ಯಾಪಿಟಲ್ಸ್

17 ವಿಕೆಟ್ — **ಭುವನೇಶ್ವರ್ ಕುಮಾರ್**, ರಾಯಲ್ ಚಾಲೆಂಜರ್ಸ್

ಅಸ್ಥಿರ ಪ್ರದರ್ಶನ ನೀಡಿದ ಡೆಲ್ಲಿ ಕ್ಯಾಪಿಟಲ್ಸ್‌ಗೆ ಮತ್ತೊಂದು ಆಘಾತ

ಸಂಘಟಿತ ಆಟ, ಸಿಎಸ್‌ಕೆಗೆ ಜಯ

ಹೊಸದಿಲ್ಲಿ: ಸಾಂಘಿಕ ಬೌಲಿಂಗ್ ನಿರ್ವಹಣೆಯ ಜತೆಗೆ ಸಂಜು ಸ್ಯಾಮ್ಸನ್ (87*; 52 ಎಸೆತ, 7 ಫೋರ್, 6 ಸಿಕ್ಸರ್) ಮತ್ತು ಕಾರ್ತಿಕ್ ತ್ಯಾಗಿ (41*; 31 ಎಸೆತ) ಅವರ ಸ್ಫೋಟಕ ಬ್ಯಾಟಿಂಗ್ ಸಾಹಸದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡ, ಐಪಿಎಲ್ 48ನೇ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೋಲಿಸಿತು. ಇದರೊಂದಿಗೆ ಟೂರ್ನಿಯಲ್ಲಿ ಸಿಎಸ್‌ಕೆ 5ನೇ ಜಯ ಗಳಿಸಿದರೆ, ಡೆಲ್ಲಿ 6ನೇ ಸೋಲಿಗೆ ಒಳಗಾಯಿತು.

ರಾಷ್ಟ್ರ ರಾಜಧಾನಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಅಕ್ಷರ್ ಪಟೇಲ್ ಸಾರಥ್ಯದ ಡೆಲ್ಲಿ, ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯಕ್ಕೆ ಗುರಿಯಾಯಿತು. ಹೀಗಾಗಿ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 155 ರನ್‌ಗಳ ಸಾಧಾರಣ ಮೊತ್ತಕ್ಕೆ ಸೀಮಿತಗೊಂಡಿತು. ಇದಕ್ಕೆ ಉತ್ತರವಾಗಿ ಚೆನ್ನೈ, 17.3 ಓವರ್‌ಗಳಲ್ಲಿ 2 ವಿಕೆಟ್‌ಗೆ 159 ರನ್ ಗಳಿಸಿ ವಿಜಯದ ನಗೆ ಬೀರಿತು. ಸ್ಯಾಮ್ಸನ್ ಮತ್ತು ಕಾರ್ತಿಕ್ ಮುರಿಯದ 3ನೇ ವಿಕೆಟ್‌ಗೆ 66 ಎಸೆತಗಳಲ್ಲಿ 114 ರನ್‌ಗಳ ಜತೆಯಾಟ ನಿರ್ವಹಿಸಿ ತಂಡಕ್ಕೆ ಸುಲಭ ಜಯ ತಂದುಕೊಟ್ಟರು.



ಸಂಜು ಸ್ಯಾಮ್ಸನ್

ಇದಕ್ಕೂ ಮುನ್ನ ಟೂರ್ನಿಯಲ್ಲಿ ಸ್ಥಿರ ಪ್ರದರ್ಶನ ಕಾಯ್ದುಕೊಂಡಿರುವ ಹಾಗೂ ತಂಡದ ಬ್ಯಾಟಿಂಗ್ ತಾರೆಗಳಾದ ಪಾಥುಮ್ ನಿಸ್ಸಾಂಕ ಮತ್ತು ಕೆ.ಎಲ್. ರಾಹುಲ್ ತಂಡಕ್ಕೆ ಭದ್ರ ಬುನಾದಿ ಹಾಕಲು ವಿಫಲರಾದರು. ಇವರಿಬ್ಬರ ವೈಫಲ್ಯದಿಂದಾಗಿ ಪವರ್ ಪ್ಲೇ ಅವಧಿಯಲ್ಲಿ ದೊಡ್ಡ ಮೊತ್ತ ಪೇರಿಸುವಲ್ಲಿ ಕ್ಯಾಪಿಟಲ್ಸ್ ಎಡವಿತು.

ಮೊದಲ 6 ಓವರ್‌ಗಳಲ್ಲಿ 2 ವಿಕೆಟ್‌ಗೆ 37 ರನ್ ಗಳಿಸಿದ ಡೆಲ್ಲಿ, ಮೊದಲ ಹತ್ತು ಓವರ್‌ಗಳ ಮುಕ್ತಾಯಕ್ಕೆ 4 ವಿಕೆಟ್ ಕಳೆದುಕೊಂಡು 62 ರನ್‌ಗಳಿಗೆ ಕುಸಿಯಿತು. ಅಗ್ರ ಕ್ರಮಾಂಕದ ಬ್ಯಾಟರ್‌ಗಳಲ್ಲದೆ, ನಾಯಕ ಅಕ್ಷರ್ ಪಟೇಲ್ ಸಹ 2 ರನ್‌ಗಳಿಗೆ ಹೋರಾಟ ಮುಗಿಸಿ ನಿರಾಸೆ ಮೂಡಿಸಿದರು.

ಇದರ ನಡುವೆಯೂ ಟ್ರಿಸ್ಟನ್ ಸ್ಟಬ್ಸ್ ಮತ್ತು ಸಮೀರ್ ರಿಜ್ವಿ , ಐದು ಬಾರಿಯ ಚಾಂಪಿಯನ್ ಸಿಎಸ್‌ಕೆ ತಂಡದ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. ಬಿರುಸಿನ ಬ್ಯಾಟಿಂಗ್ ನಡೆಸಿದ ಟ್ರಿಸ್ಟನ್, 38 ರನ್‌ಗಳಿಗೆ ಔಟಾದರೂ 6ನೇ ವಿಕೆಟ್‌ಗೆ 65 ರನ್‌ಗಳ ಮಹತ್ವದ ಜತೆಯಾಟಕ್ಕೆ ಸಾಕ್ಷಿಯಾದರು. ಈ ಮೂಲಕ ಡೆಲ್ಲಿ ಪರ 6ನೇ ವಿಕೆಟ್‌ಗೆ ಅಗ್ರ ಜಂಟಿ ಗರಿಷ್ಠ ರನ್ ಜತೆಯಾಟ ನಿರ್ವಹಿಸಿದ ಗೌರವಕ್ಕೆ ಟ್ರಿಸ್ಟನ್ ಮತ್ತು ರಿಜ್ವಿ ಪಾತ್ರರಾದರು. 2018ರಲ್ಲಿ ವಿಜಯ್ ಶಂಕರ್ ಮತ್ತು ಹರ್ಷಲ್ ಪಟೇಲ್ ಜೋಡಿ 65* ರನ್ ಗಳಿಸಿದ್ದು ಹಿಂದಿನ ದಾಖಲೆ. ಡೆತ್ ಓವರ್‌ಗಳಲ್ಲಿ ಅಬ್ಬರಿಸಿದ ರಿಜ್ವಿ ಕೇವಲ 24 ಎಸೆತಗಳಲ್ಲಿ 40 ರನ್ ಸಿಡಿಸಿ ತಂಡದ ಗೌರವಯುತ ಮೊತ್ತಕ್ಕೆ ಸಹಕಾರಿಯಾದರು.

ಸಿಎಸ್‌ಕೆ ಪರ ನೂರ್ ಅಹ್ಮದ್ 2 ವಿಕೆಟ್ ಪಡೆದರೆ, ಅಕೀಲ್, ಮುಕೇಶ್, ಗುರ್ಜಪ್‌ನೀತ್ ಮತ್ತು ಓವರ್ಟನ್ ತಲಾ 1 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್

ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 155 (ಸಮೀರ್ ರಿಜ್ವಿ 40*, ಟ್ರಿಸ್ಟನ್ ಸ್ಟಬ್ಸ್ 38, ಪಾಥುಮ್ 19; ನೂರ್ ಅಹ್ಮದ್ 22ಕ್ಕೆ 2, ಜಾಮಿ ಓವರ್ಟನ್ 5ಕ್ಕೆ 1, ಅಕೀಲ್ 19ಕ್ಕೆ 1, ಗುರ್ಜಪ್‌ನೀತ್ 29ಕ್ಕೆ 1).

ಚೆನ್ನೈ ಸೂಪರ್ ಕಿಂಗ್ಸ್: 17.3 ಓವರ್‌ಗಳಲ್ಲಿ 2 ವಿಕೆಟ್‌ಗೆ 159 (ಸ್ಯಾಮ್ಸನ್ 87*, ಕಾರ್ತಿಕ್ 41; ಎನ್‌ಗಿಡಿ 30ಕ್ಕೆ 1).

ಉಭಯ ತಂಡಗಳಿಗೂ ಪುಟಿದೇಳುವ ವಿಶ್ವಾಸ

ಹೈದರಾಬಾದ್ - ಪಂಜಾಬ್ ಹೈವೋಲ್ಟೇಜ್ ಪಂದ್ಯ ಇಂದು

ಹೈದರಾಬಾದ್: ತಮ್ಮ ಹಿಂದಿನ ಪಂದ್ಯಗಳಲ್ಲಿ ಸೋತಿರುವ ಸನ್‌ರೈಸರ್ಸ್ ಹೈದರಾಬಾದ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಪ್ರಸಕ್ತ ಐಪಿಎಲ್‌ನ 49ನೇ ಪಂದ್ಯದಲ್ಲಿ ಪುಟಿದೇಳುವ ತವಕದೊಂದಿಗೆ ಬುಧವಾರ ಮುಖಾಮುಖಿಯಾಗುತ್ತಿವೆ.

ಕಳೆದ ಬಾರಿಯ ರನ್ನರ್ ಅಪ್ ಪಂಜಾಬ್ ಆಡಿದ 9 ಪಂದ್ಯಗಳಿಂದ 13 ಅಂಕಗಳನ್ನು ಕಲೆಹಾಕಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಆದರೆ ಹಿಂದಿನ ಎರಡು ಪಂದ್ಯಗಳಲ್ಲಿ ರಾಜಸ್ಥಾನ ರಾಯಲ್ಸ್ ಮತ್ತು ಗುಜರಾತ್ ಟೈಟನ್ಸ್ ವಿರುದ್ಧ ಮುಗ್ಗರಿಸಿರುವುದು ತಂಡದ ಆತ್ಮವಿಶ್ವಾಸಕ್ಕೆ ಪೆಟ್ಟು ಬಿದ್ದಂತಾಗಿದೆ. ಪ್ಲೇಆಫ್ ಪ್ರವೇಶವನ್ನು ಸನಿಹ ಮಾಡಿಕೊಳ್ಳುವ ಗುರಿ ಹೊಂದಿರುವ ಶ್ರೇಯಸ್ ಅಯ್ಯರ್ ಬಳಗ, ಹೈದರಾಬಾದ್ ಎದುರು ಗೆಲುವಿನ ಲಯ ಕಂಡುಕೊಳ್ಳುವ ಅದಮ್ಯ ವಿಶ್ವಾಸದಲ್ಲಿದೆ.

ಶ್ರೇಯಸ್ ಅಯ್ಯರ್

ಅತ್ತ ಸತತ ಐದು ಪಂದ್ಯಗಳ ಗೆಲುವಿನ ನಂತರ ಕೋಲ್ಕೊತಾ ನೈಟ್‌ರೈಡರ್ಸ್ ವಿರುದ್ಧ ಮುಗ್ಗರಿಸಿರುವ ಹೈದರಾಬಾದ್, ಸದ್ಯ ಆಡಿದ ಹತ್ತು ಪಂದ್ಯಗಳಿಂದ 12 ಅಂಕ ಹೊಂದಿದ್ದು, ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಆರು ತಂಡಗಳ ನಡುವೆ ಪ್ಲೇಆಫ್ ಸ್ಥಾನಕ್ಕೆ ಪ್ರಬಲ ಪೈಪೋಟಿ ಏರ್ಪಟ್ಟಿರುವ ಕಾರಣ ಅಗ್ರ ಮೂರರಲ್ಲಿ ಸ್ಥಾನ ಉಳಿಸಿಕೊಳ್ಳಲು ಎಸ್‌ಆರ್‌ಎಚ್ ಹಂಬಲಿಸುತ್ತಿದೆ. ಹೀಗಾಗಿ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಹಿಂದಿನ ಸೋಲಿನಿಂದ ಹೊರಬರುವ ನಿರೀಕ್ಷೆಯನ್ನು ಹೊಂದಿದೆ.

ಉಭಯ ತಂಡಗಳು ಹಾಲಿ ಟೂರ್ನಿಯಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅತ್ಯುತ್ತಮ ಪ್ರದರ್ಶನ ನೀಡುತ್ತಿರುವ ಕಾರಣ ಬುಧವಾರದ ಪಂದ್ಯ ಹೈವೋಲ್ಟೇಜ್ ಪಂದ್ಯಕ್ಕೆ ಸಾಕ್ಷಿಯಾಗುವ ಸಾಧ್ಯತೆ ಇದೆ.

ಹೈದರಾಬಾದ್ ತಂಡದ ತಾರಾ ಬೌಲರ್ ಪ್ಯಾಟ್ ಕಮಿನ್ಸ್ ಇನ್ನು 6 ವಿಕೆಟ್ ಕಿತ್ತರೆ, ಟಿ20 ಮಾದರಿಯಲ್ಲಿ 200 ವಿಕೆಟ್ ಪಡೆದ ಸಾಧನೆ ಮಾಡಲಿದ್ದಾರೆ. ಹಾಗೆಯೇ ಪಂಜಾಬ್‌ನ ಯುಜ್ವೇಂದ್ರ ಚಹಲ್ ಇನ್ನೂ 9 ವಿಕೆಟ್ ಕಿತ್ತರೆ, ಟಿ20 ಮಾದರಿಯಲ್ಲಿ 400 ವಿಕೆಟ್ ಪಡೆದ ಮೈಲುಗಲ್ಲು ಸ್ಥಾಪಿಸಲಿದ್ದಾರೆ. ಉಭಯ ತಂಡಗಳು 25 ಬಾರಿ ಎದುರಾಗಿದ್ದು, 17ರಲ್ಲಿ ಎಸ್‌ಆರ್‌ಎಚ್ ಮತ್ತು 8ರಲ್ಲಿ ಪಂಜಾಬ್ ತಂಡ ಗೆಲುವು ಸಾಧಿಸಿವೆ.

ಪಂದ್ಯ ಆರಂಭ: ರಾತ್ರಿ 7.30

ಸ್ಥಳ: ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣ

ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್

ಐಸಿಸಿ ಟಿ20 ರ‍್ಯಾಂಕಿಂಗ್: ಮತ್ತೆ ನಂ.1 ಸ್ಥಾನಕ್ಕೆ ಮರಳಿದ ಭಾರತ

ದುಬೈ: ಮೂರು ಬಾರಿಯ ವಿಶ್ವಕಪ್ ವಿಜೇತ ಭಾರತ ತಂಡ ಮಂಗಳವಾರ ಬಿಡುಗಡೆಯಾದ ಐಸಿಸಿ ಟಿ20 ರ‍್ಯಾಂಕಿಂಗ್‌ನಲ್ಲಿ ಮತ್ತೆ ನಂ.1 ಸ್ಥಾನಕ್ಕೆ ಮರಳಿದೆ. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ.

ಟಿ20 ವಿಶ್ವಕಪ್ ಕಿರೀಟವನ್ನು ಉಳಿಸಿಕೊಂಡ ಮೊದಲ ತಂಡ ಎಂಬ ದಾಖಲೆ ನಿರ್ಮಿಸಿರುವ ಭಾರತ, ಕಳೆದ ಮಾರ್ಚ್‌ನಲ್ಲಿ ಮೂರನೇ ಬಾರಿಗೆ ಪ್ರಶಸ್ತಿ ಗೆದ್ದ ಸಾಧನೆ ಮಾಡಿತು.2025ರ ಮೇ ನಂತರ ಆಡಿದ ಎಲ್ಲ ಪಂದ್ಯಗಳ ಶೇ.100ರಷ್ಟು ಮತ್ತು ಹಿಂದಿನ ಎರಡು ವರ್ಷಗಳ ಶೇ.50 ರಷ್ಟು ಫಲಿತಾಂಶವನ್ನು ಪರಿಗಣಿಸಿದ ಬಳಿಕ ರ‍್ಯಾಂಕಿಂಗ್ ಬಿಡುಗಡೆ ಮಾಡಲಾಗಿದೆ ಎಂದು ಐಸಿಸಿ ವೆಬ್‌ಸೈಟ್‌ನಲ್ಲಿ ತಿಳಿಸಿದೆ. 275 ಪಾಯಿಂಟ್ಸ್‌ಗಳನ್ನು ಹೊಂದಿರುವ ಭಾರತ ಮೊದಲ ಸ್ಥಾನದಲ್ಲಿದ್ದರೆ, ಇಂಗ್ಲೆಡ್ (262 ಅಂಕ) ಮತ್ತು ಆಸ್ಟ್ರೇಲಿಯಾ (258 ಅಂಕ) ಕ್ರಮವಾಗಿ ನಂತರದ ಸ್ಥಾನ ಹೊಂದಿವೆ.

ಕಾಂಪೌಂಡ್ ವಿಭಾಗದಲ್ಲಿ ಭಾರತಕ್ಕೆ ಮೂರನೇ ಸ್ಥಾನ

ಆರ್ಚರಿ ವಿಶ್ವಕಪ್ ಸ್ಟೇಜ್ 2

ಶಾಂಘೈ: ಮಾಜಿ ವಿಶ್ವಚಾಂಪಿಯನ್ ಒಜಾಸ್ ದಿಯೋತಲೆ ಸಾರಥ್ಯದ ಭಾರತ ತಂಡ ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ಸ್ಟೇಜ್ 2ರ ಪುರುಷರ ಕಾಂಪೌಂಡ್ ತಂಡ ಸ್ಪರ್ಧೆಯ ಕ್ವಾಲಿಫಿಕೇಷನ್ ಸುತ್ತಿನ ಅಗ್ರ 10ರಲ್ಲಿ ಸ್ಥಾನ ಪಡೆದಿದೆ.

ಬರ್ಲಿನ್‌ನಲ್ಲಿ ನಡೆದಿದ್ದ 2023ರ ವಿಶ್ವ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತದ ಮೊದಲ ಪುರುಷ ಆರ್ಚರಿ ಪಟು ಎಂಬ ಶ್ರೇಯಕ್ಕೆ ಭಾಜನವಾಗಿರುವ ದಿಯೋತಲೆ,ಮಂಗಳವಾರ ನಡೆದ ಸ್ಪರ್ಧೆಯಲ್ಲಿ 711 ಅಂಕಗಳನ್ನು ಕಲೆಹಾಕುವುದರೊಂದಿಗೆ ಭಾರತೀಯರ ಪೈಕಿ ಗರಿಷ್ಠ ಹಾಗೂ ಒಟ್ಟಾರೆ 7ನೇ ಸ್ಥಾನ ಗಳಿಸಿದರು. ಇದು ತಂಡದ ಉತ್ತಮ ಸ್ಥಿತಿಗೆ ಕಾರಣವಾಯಿತು. ಸಾಹಿಲ್ ಜಾಧವ್ ಸಹ 711 ಅಂಕಗಳನ್ನು ಗಳಿಸಿದರೆ, ಕುಶಾಲ್ ದಲಾಲ್ 18ನೇ ಸ್ಥಾನ ಪಡೆದರು. ಹೀಗಾಗಿ ಭಾರತ, ತಂಡ ಸ್ಪರ್ಧೆಯಲ್ಲಿ ಮೂರನೇ ಶ್ರೇಯಾಂಕ ಗಿಟ್ಟಿಸಿತು. ರಿಕರ್ವ್ ಸ್ಪರ್ಧೆಯ ಅರ್ಹತಾ ಸುತ್ತುಗಳು ಬುಧವಾರ ಆರಂಭವಾಗಲಿವೆ.

ವಿಶ್ವಕಪ್ ಶಾಟ್‌ಗನ್: ಭಾರತದ ಸ್ಕೀಟ್ ಶೂಟರ್ಸ್‌ಗೆ ನಿರಾಸೆ

ಅಲ್ಮಾಟಿ(ಕಜಕಸ್ತಾನ): ಭಾರತದ ಸ್ಕೀಟ್ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶಾಟ್‌ಗನ್ ಸ್ಪರ್ಧೆಯಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಫೈನಲ್ ಪ್ರವೇಶಿಸಲು ವಿಫಲರಾದರು.

ಮಂಗಳವಾರ ನಡೆದ ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ ಮೈರಾಜ್ ಅಹ್ಮದ್ ಖಾನ್ ಮತ್ತು ರೈಜಾ ಧಿಲ್ಲೋನ್ ಜೋಡಿ ಭಾರತೀಯರ ಪೈಕಿ ಅತಿ ಹೆಚ್ಚು ಅಂಕ ಗಳಿಸಿದರೂ ಫೈನಲ್‌ಗೆ ಮುನ್ನಡೆಯಲು ಸಾಧ್ಯವಾಗಲಿಲ್ಲ. ಭವ್ತೇಘ್ ಸಿಂಗ್ ಗಿಲ್ ಮತ್ತು ಒಲಿಂಪಿಯನ್ ಅನಂತ್ ಜೀತ್ ಸಿಂಗ್ ನರುಕಾ ಸಹ ನಿರಾಸೆ ಮೂಡಿಸಿದರು. ಮಹಿಳೆಯರ ಪೈಕಿ ಗನೆಮತ್ ಶೆಖೋನ್, ರೈಜಾ ಧಿಲ್ಲೋನ್ ಮತ್ತು ಪರಿನಾಜ್ ಧಾಲಿವಾಲ್ ನಿರೀಕ್ಷಿತ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ.

ಸ್ವದೇಶದ ಸವಾಲು ಮುನ್ನಡೆಸಿದ ಮಧುರಿಮಾ

■ **ವಿಕ ಸುದ್ದಿಲೋಕ** ತುಮಕೂರು

ಐಟಿಎಫ್ ಡಬ್ಲ್ಯು 35 ತುಮಕೂರು ಓಪನ್

ಸ್ಫೂರ್ತಿದಾಯಕ ಪ್ರದರ್ಶನ ನೀಡಿದ ಭಾರತೀಯ ಆಟಗಾರ್ತಿಯರು ತುಮಕೂರು ವಿವಿಯ ಟೆನಿಸ್ ಕ್ರೀಡಾಂಗಣದಲ್ಲಿ ಮಂಗಳವಾರ ಪ್ರಧಾನ ಸುತ್ತಿನೊಂದಿಗೆ ಆರಂಭವಾದ ಐಟಿಎಫ್ ಡಬ್ಲ್ಯು 35 ತುಮಕೂರು ಓಪನ್ ಟೂರ್ನಿಯ ಮೊದಲ ಸುತ್ತಿನ ಸಿಂಗಲ್ಸ್ ಮತ್ತು ಡಬಲ್ಸ್ ಎರಡರಲ್ಲೂ ಮುನ್ನಡೆ ಸಾಧಿಸಿದ್ದಾರೆ.

ಭಾರತದ ಸವಾಲನ್ನು ಮುನ್ನಡೆಸಿದ ಮಧುರಿಮಾ ಸಾವಂತ್, ಮೂರು ಸೆಟ್‌ಗಳ ಹೋರಾಟದಲ್ಲಿ ಗೆದ್ದು ಬೀಗಿದರು. ಸಾವಂತ್ ಅವರು 6-2, 3-6, 6-1 ಸೆಟ್‌ಗಳಿಂದ ಮಾರಿಯಾ ಮಿಖೈಲೋವಾ ಅವರನ್ನು ಸೋಲಿಸಿ 16ರ ಸುತ್ತಿಗೆ ಲಗ್ಗೆ ಹಾಕಿದರು.

ಆತ್ಮವಿಶ್ವಾಸದ ಬೇಸ್ ಲೈನ್ ಆಟ ಮತ್ತು ತೀಕ್ಷ್ಣವಾದ ಚಲನೆಯೊಂದಿಗೆ ಆರಂಭಿಕ ಸೆಟ್‌ನಲ್ಲಿ ಮೇಲುಗೈ ಸಾಧಿಸಿದ ಮಧುರಿಮಾ, ಎರಡನೇ ಸೆಟ್‌ನಲ್ಲಿ ಮಿಖೈಲೋವಾ ಅವರಿಂದ ಪ್ರಬಲ ಪ್ರತಿರೋಧ ಎದುರಿಸಿದರು. ಆದಾಗ್ಯೂ, ನಿರ್ಣಾಯಕ ಸೆಟ್‌ನಲ್ಲಿ ಭಾರತೀಯ ಆಟಗಾರ್ತಿ ಬೇಗನೆ ಲಯ ಕಂಡುಕೊಂಡರು. ಆಕ್ರಮಣಕಾರಿ ಶಾಟ್ ಮತ್ತು ಸ್ಥಿರ ಆಟದೊಂದಿಗೆ ಮೇಲುಗೈ ಸಾಧಿಸಿ ಪಂದ್ಯವನ್ನು ತಮ್ಮದಾಗಿಸಿಕೊಂಡರು.

ಮತ್ತೊಂದು ಭಾರತೀಯರ ಪಂದ್ಯದಲ್ಲಿ ಸಂದೀಪ್ತಿ ಸಿಂಗ್ ರಾವ್ 6-3, 6-4 ಸೆಟ್‌ಗಳಿಂದ ಯಶಸ್ವಿ ಪನ್ವಾರ್ ಅವರನ್ನು ಮಣಿಸಿದರು. ಪೂಜಾ ಇಂಗಳೆ ಕೂಡ ಮೂರು ಸೆಟ್‌ಗಳ ಕಠಿಣ ಪಂದ್ಯದಲ್ಲಿ ಡ್ಯಾನಿಕಾ ಫರ್ನಾಂಡೊ ಅವರನ್ನು 7-5, 1-6, 6-4 ಸೆಟ್‌ಗಳಿಂದ ಮಣಿಸಿದರು. ಮತ್ತೊಂದು ಪಂದ್ಯದಲ್ಲಿ ಸೋನಾಲ್ ಪಾಟೀಲ್ 6-0, 6-3 ಸೆಟ್‌ಗಳಿಂದ ಅರ್ಹತಾ ಆಟಗಾರ್ತಿ ಸ್ನಿಗ್ಧಾ ಕಾಂತಾರನ್ನು ಮಣಿಸಿ 16ರ ಘಟ್ಟಕ್ಕೆ ಪ್ರವೇಶಿಸಿದರು.

ಮಹಿಳಾ ಡಬಲ್ಸ್‌ನ 16ರ ಸುತ್ತಿನಲ್ಲಿ ಅಗ್ರ ಶ್ರೇಯಾಂಕಿತ ವೈದೇಹಿ ಚೌಧರಿ ಮತ್ತು ಜುಝಾನ್ನಾ ಪಾವ್ಲಿಕೋವ್ಸ್ಕಾ 6-1, 6-2 ಸೆಟ್‌ಗಳಿಂದ ಮಾರಿಯಾ ಮಿಖೈಲೋವಾ ಮತ್ತು ಸಂದೀಪ್ತಿ ಸಿಂಗ್ ರಾವ್ ಅವರನ್ನು ಸೋಲಿಸಿದರು. ನಾಲ್ಕನೇ ಶ್ರೇಯಾಂಕದ ಶ್ರವ್ಯಾ ಶಿವಾನಿ - ಝೀಲ್ ದೇಸಾಯಿ, ಐಶ್ವರ್ಯಾ ಜಾಧವ್-ಆಕೃತಿ ನಾರಾಯಣ್ ತಮ್ಮ ಎದುರಾಳಿಗಳ ವಿರುದ್ಧ ಗೆದ್ದು ಮುಂದಿನ ಸುತ್ತಿಗೆ ಮುನ್ನಡೆದರು.

ಜಪಾನ್‌ಗೆ ಮಣಿದ ಭಾರತ

ಎಎಫ್‌ಸಿ U17 ಮಹಿಳಾ ಏಷ್ಯನ್ ಕಪ್

ಸುಝೌ(ಚೀನಾ): ಪಂದ್ಯದ ಪ್ರಥಮಾರ್ಧದಲ್ಲಿ ದಿಟ್ಟ ಹೋರಾಟ ನೀಡಿದ ಹೊರತಾಗಿಯೂ ದ್ವಿತೀಯಾರ್ಧದಲ್ಲಿ ರಕ್ಷಣಾ ವೈಫಲ್ಯ ಅನುಭವಿಸಿದ ಭಾರತ 17 ವರ್ಷದೊಳಗಿನವರ ಎಎಫ್‌ಸಿ ಮಹಿಳಾ ಏಷ್ಯನ್ ಕಪ್‌ನಲ್ಲಿ ಜಪಾನ್ ತಂಡದ ವಿರುದ್ಧ ಹೀನಾಯ ಸೋಲು ಅನುಭವಿಸಿದೆ.

ಮಂಗಳವಾರ ನಡೆದ 'ಬಿ' ಗುಂಪಿನ ತನ್ನ 2ನೇ ಪಂದ್ಯದಲ್ಲಿ ಭಾರತ 0-3 ಗೋಲ್‌ಗಳಿಂದ ಜಪಾನ್‌ಗೆ ಮಂಡಿಯೂರಿತು. ಯುಮಿ ಹಯಾಶಿ (59ನೇ ನಿ.) ಮತ್ತು ಯುಜುಹಾ ಐಕೆಡಾ (76, 81ನೇ ನಿ.) ಗೋಲ್ ಗಳಿಸಿ ಜಪಾನ್ ತಂಡದ ಏಕಪಕ್ಷೀಯ ಗೆಲುವಿಗೆ ಕಾರಣರಾದರು.

ಕ್ವಾರ್ಟರ್‌ಫೈನಲ್ ಪ್ರವೇಶವನ್ನು ಜೀವಂತವಾಗಿಟ್ಟುಕೊಳ್ಳಬೇಕಾದರೆ ಭಾರತ ತಂಡ ಶುಕ್ರವಾರ ಲೆಬನಾನ್ ವಿರುದ್ಧ ಗೆಲ್ಲುವುದು ಅನಿವಾರ್ಯವಾಗಿದೆ.

ಮೇ 10ರಿಂದ ಎಟಿಪಿ ಚಾಲೆಂಜರ್ಸ್

ಬೆಂಗಳೂರು: ತುಮಕೂರಿನಲ್ಲಿ ಐಟಿಎಫ್ ಡಬ್ಲ್ಯು 35 ಮಹಿಳಾ ಟೆನಿಸ್ ಟೂರ್ನಿ ನಡೆಯುತ್ತಿದೆ. ಇದರ ಮಧ್ಯೆಯೇ ಬೆಂಗಳೂರಿನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣ ಮೇ 10ರಿಂದ 17 ಹಾಗೂ ಮೇ 18ರಿಂದ 24ರವರೆಗೆ ಎರಡು ಉನ್ನತ ಮಟ್ಟದ ವೃತ್ತಿಪರ ಎಟಿಪಿ ಚಾಲೆಂಜರ್ಸ್ ಟೂರ್ನಿಗಳಿಗೆ ಆತಿಥ್ಯವಹಿಸಲು ಸಜ್ಜಾಗಿದೆ.

ಬೇಸಿಗೆಗೆ ಹಿತ ಈ ಕನ್ನಡಕ

ಬೇಸಿಗೆಗೆ ಆರಾಮ ಎನಿಸುವ ಹಾಗೂ ಸ್ಟೈಲಿಶ್ ಲುಕ್ ನೀಡುವ ಬಗ್-ಐ ಸನ್‌ಗ್ಲಾಸ್ ಟ್ರೆಂಡಿಂಗ್‌ನಲ್ಲಿದೆ.

ಶ್ರೀವಿದ್ಯಾ ರಾವ್
shree.vidya@timesofindia.com

ಬೇಸಿಗೆಯಲ್ಲಿ ಮನೆಯಿಂದ ಹೊರ ಬರುವಾಗ ಸನ್‌ಗ್ಲಾಸ್ ಅಗತ್ಯ ವಸ್ತು. ಒಂದೇ ರೀತಿಯ ಸನ್‌ಗ್ಲಾಸ್ ಬೋರ್ ಎನಿಸಿದರೆ ಒಂದಷ್ಟು ಹೊಸ ವಿನ್ಯಾಸಗಳ ಪ್ರಯೋಗಕ್ಕೆ ಇದೇ ಸೂಕ್ತ ಸೀಸನ್. ಈ ವರ್ಷದ ಬೇಸಿಗೆಯಲ್ಲಿ ಬಗ್-ಐ ಸನ್‌ಗ್ಲಾಸ್‌ಗಳು ಮೋಡಿ ಮಾಡಿವೆ. ಈ ಮೂಲಕ ಸಣ್ಣ ಚೌಕಟ್ಟಿನ ಕನ್ನಡಕಗಳ ಕಾಲ ಮುಗಿದು ಮುಖದ ಬಹುಭಾಗವನ್ನು ಮುಚ್ಚುವ ದೊಡ್ಡ ಗಾತ್ರದ ಕನ್ನಡಕಗಳ ಅಬ್ಬರ ಶುರುವಾಗಿದೆ.

ಫ್ಯಾಷನ್ ಎಂಬುದು ಗಾಲಿಯಿದ್ದಂತೆ. ಹಳೆಯ ಟ್ರೆಂಡ್‌ಗಳು ಹೊಸ ರೂಪದಲ್ಲಿ ಮತ್ತೆ ಮರಳಿ ಬರುವುದು ಸಾಮಾನ್ಯ. ಇದಕ್ಕೆ ಇತ್ತೀಚಿನ ಸಾಕ್ಷಿ ಎಂದರೆ ಬಗ್-ಐ ಸನ್‌ಗ್ಲಾಸ್‌ಗಳ ಭರ್ಜರಿ ಪುನರಾಗಮನ. ಈ ಬೃಹತ್ ಗಾತ್ರದ ಕನ್ನಡಕಗಳು ಈಗಿನ ಫ್ಯಾಷನ್ ಜಗತ್ತನ್ನು ಆವರಿಸಿಕೊಳ್ಳುತ್ತಿವೆ.

70ರ ದಶಕದ ರಾಜವೈಭೋಗದ ಸ್ಟೈಲ್ ಮತ್ತು 2000ರ ದಶಕದ ಆರಂಭದಲ್ಲಿದ್ದ ಫ್ಯಾಷನ್ ಎರಡನ್ನೂ ನೆನಪಿಸುತ್ತವೆ ಈ ಸನ್‌ಗ್ಲಾಸ್‌ಗಳು. ಇದು ಹಳೆಯ ಕಾಲದ ವೈಭವ ಮತ್ತು ಇಂದಿನ ಸ್ಟೈಲ್‌ನ ಅದ್ಭುತ ಮಿಶ್ರಣ. ಪಾಪ್ ಐಕಾನ್ ರಿಯಾನಾ, ಡೋಜಾ ಕ್ಯಾಟ್, ರೊಸಾಲಿಯಾ ಮತ್ತು ಪಮೇಲಾ ಆಂಡರ್ಸನ್ ಅವರಂತಹ ತಾರೆಯರು ಈಗಾಗಲೇ ಈ ದೊಡ್ಡ ಕನ್ನಡಕಗಳನ್ನು ಧರಿಸಿ ಮಿಂಚುತ್ತಿದ್ದಾರೆ. ನಟಿ ತಮನ್ನಾ ಕೂಡ ಇಂಥದ್ದೇ ಕನ್ನಡಕದಲ್ಲಿ ಕಾಣಿಸಿಕೊಂಡಿದ್ದಾರೆ. ಇದು ಸಾಮಾನ್ಯ ಜನರಲ್ಲಿ ಈ ಟ್ರೆಂಡ್ ಬಗ್ಗೆ ಕುತೂಹಲ ಮೂಡಿಸಿದೆ. ಬಗ್-ಐ ಎಂದರೆ ಕೀಟಗಳ ಕಣ್ಣುಗಳಂತೆ ಕಾಣುವ ದೊಡ್ಡ ಗಾತ್ರದ ಕನ್ನಡಕಗಳು. ಇದನ್ನು ಗಾಗಲ್-ಐ ಎಂದೂ ಕರೆಯುತ್ತಾರೆ. ಈ ಸನ್‌ಗ್ಲಾಸ್‌ಗಳು ಗಾತ್ರದಲ್ಲಿ ದೊಡ್ಡದಾಗಿರುತ್ತವೆ ಮತ್ತು ಬಹುತೇಕ ದುಂಡನೆಯ ಆಕಾರವನ್ನು ಹೊಂದಿರುತ್ತವೆ. ಇವು ನಿಮ್ಮ ಕಣ್ಣುಗಳ ಸುತ್ತಲಿನ ಭಾಗವನ್ನು ಸಂಪೂರ್ಣವಾಗಿ ಮುಚ್ಚುವಷ್ಟು ದೊಡ್ಡದಾಗಿರುವುದರಿಂದ, ಇವುಗಳನ್ನು ಧರಿಸಿದಾಗ ಕೀಟಗಳ ದೊಡ್ಡ ಕಣ್ಣುಗಳಂತೆ ಕಾಣುತ್ತವೆ. ಇದೇ ಕಾರಣಕ್ಕೆ ಇವುಗಳಿಗೆ ಬಗ್-ಐ ಎಂಬ ಹೆಸರು ಬಂದಿದೆ.

ನೀವು ಸರಳ ಉಡುಪನ್ನು ಧರಿಸಿದರೂ ಈ ಸನ್‌ಗ್ಲಾಸ್ ನಿಮ್ಮ ಒಟ್ಟಾರೆ ಲುಕ್ ಅನ್ನು ಆಕರ್ಷಕವಾಗಿಸುತ್ತದೆ. ಈ ಸನ್‌ಗ್ಲಾಸ್‌ಗಳ ಗಾತ್ರವು ದೊಡ್ಡದಾಗಿರುವುದರಿಂದ ಇವು ಕಣ್ಣುಗಳನ್ನು ಮಾತ್ರವಲ್ಲದೆ ಕಣ್ಣಿನ ಸುತ್ತಲಿನ ಸೂಕ್ಷ್ಮ ಭಾಗವನ್ನೂ ಸೂರ್ಯನ ಹಾನಿಕಾರಕ ಕಿರಣಗಳಿಂದ ರಕ್ಷಿಸಲು ಸಹಕಾರಿ. ಜೀನ್ಸ್ ಮತ್ತು ಟೀ-ಶರ್ಟ್ ಅಥವಾ ಸುಂದರವಾದ ಸಮ್ಮರ್ ಡ್ರೆಸ್ ಹೀಗೆ ಈ ಸನ್‌ಗ್ಲಾಸ್‌ಗಳು ಯಾವುದೇ ಶೈಲಿಯ ಉಡುಪಿನೊಂದಿಗೆ ಸುಲಭವಾಗಿ ಹೊಂದಿಕೊಳ್ಳುತ್ತವೆ.

ಆಯ್ಕೆ ಸೂಕ್ತವಾಗಿರಲಿ

ಬಗ್-ಐ ಕನ್ನಡಕಗಳು ಗಾತ್ರದಲ್ಲಿ ದೊಡ್ಡದಾಗಿರುವುದರಿಂದ ಇವು ದುಂಡಗಿನ ಮುಖದವರಿಗೆ ಅಥವಾ ಚೌಕಾಕಾರದ ಮುಖದವರಿಗೆ ಹೆಚ್ಚು ಹೊಂದಿಕೊಳ್ಳುತ್ತವೆ. ನೀವು ಈ ಶೈಲಿಯನ್ನು ಪ್ರಯತ್ನಿಸುವಾಗ ಕನ್ನಡಕದ ಅಂಚುಗಳು ನಿಮ್ಮ ಕೆನ್ನೆಯೆಲುಬಿನ ಆಕಾರದೊಂದಿಗೆ ಹೇಗೆ ಹೊಂದಾಣಿಕೆಯಾಗುತ್ತವೆ ಎಂಬುದನ್ನು ನೋಡಿಕೊಳ್ಳಬೇಕು. ಇವುಗಳನ್ನು ಧರಿಸಿದಾಗ ಭಾರ ಎನಿಸದಂತೆ ಇರಲು ಹಗುರವಾದ ಪ್ಲಾಸ್ಟಿಕ್ ಅಥವಾ ಟೈಟಾನಿಯಂ ಫ್ರೇಮ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ.

ಕಡು ಬಣ್ಣಗಳ ಬದಲು ಶ್ಯಾಂಪೇನ್, ತಿಳಿ ಗುಲಾಬಿ ಮತ್ತು ಪಾರದರ್ಶಕ ಫ್ರೇಮ್‌ಗಳು ಈ ಬಾರಿ ಹೆಚ್ಚು ಗಮನ ಸೆಳೆದಿವೆ. ಇವು ಕ್ಲಾಸಿ ಲುಕ್ ನೀಡುತ್ತವೆ. ಬಿಳಿ ಟೀ-ಶರ್ಟ್ ಮತ್ತು ಜೀನ್ಸ್ ಜೊತೆಗೆ ಈ ಕನ್ನಡಕಗಳನ್ನು ಧರಿಸಿ. ಬ್ಲೇಜರ್ ಅಥವಾ ಕೋಟ್‌ಗಳ ಜೊತೆಗೆ ಇವುಗಳನ್ನು ಧರಿಸಿದಾಗ ನೀವು ಹೆಚ್ಚು ವೃತ್ತಿಪರವಾಗಿ ಮತ್ತು ಆತ್ಮವಿಶ್ವಾಸದಿಂದ ಕಾಣುತ್ತೀರಿ.■

ಲವಲVK ಅಭಿರುಚಿ

ಆಮ್ರಖಂಡ್

ಮಹಾರಾಷ್ಟ್ರ ಮತ್ತು ಗುಜರಾತಿನ ಅತ್ಯಂತ ಜನಪ್ರಿಯ ಸಿಹಿ ತಿನಿಸು ಶ್ರೀಖಂಡ್‌ನ ರೂಪಾಂತರಿ ಆಮ್ರಖಂಡ್. ಸೋಸಿದ ಮೊಸರಿನ ಜೊತೆ ಮಾವಿನ ಹಣ್ಣು ಬೆರೆತು, ಬೆಣ್ಣೆಯಂತೆ ಮೃದುವಾದ ಹಾಗೂ ಬಾಯಲ್ಲಿಟ್ಟರೆ ಕರಗುವ ಈ ಸಿಹಿಯನ್ನು ಪೂರಿ, ಚಪಾತಿಯೊಂದಿಗೆ ನೆಂಚಿಕೊಳ್ಳಲೂಬಹುದು ಅಥವಾ ಭೋಜನದ ನಂತರದ ತಂಪಾದ ಸಿಹಿಪೇಯವಾಗಿಯೂ ಆನಂದಿಸಬಹುದು.

ಸಾಮಗ್ರಿ: ಗಟ್ಟಿ ಮೊಸರು 1/2 ಲೀಟರ್, ಮಾವಿನ ಹಣ್ಣು 1, ಸಕ್ಕರೆ ಪುಡಿ 5-6 ಚಮಚ, ಪಿಸ್ತಾ, ಗೋಡಂಬಿ ಬಾದಾಮಿ ತುಂಡುಗಳು 2 ಚಮಚ.

ವಿಧಾನ: ಮೊಸರನ್ನು ಒಂದು ಮಸ್ಲಿನ್ ಬಟ್ಟೆಯಲ್ಲಿ ಕಟ್ಟಿ 2 ರಿಂದ 3 ಗಂಟೆಗಳ ಕಾಲ ಸೋಸಲು ಬದಿಗಿಡಿ. ನಂತರ ಬಟ್ಟೆಯಲ್ಲಿ ಶೇಖರವಾದ ಮೊಸರುಗಡ್ಡೆಯನ್ನು ಒಂದು ಬೌಲ್‌ಗೆ ಹಾಕಿ, ಸಕ್ಕರೆಪುಡಿ ಸೇರಿಸಿ ಮಸೆದುಕೊಳ್ಳಿ. ಮಾವಿನಹಣ್ಣಿನ ತಿರುಳನ್ನು ನೀರು ಸೋಕಿಸದೆ ಮಿಕ್ಸಿಯಲ್ಲಿ ಅರೆದು ಮಸೆದಿಟ್ಟ ಮೊಸರಿನೊಂದಿಗೆ ಬೆರೆಸಿ ಮಿಶ್ರಣ ಮಾಡಿ, ಪುಟ್ಟ ಕುಡಿಕೆಯಲ್ಲಿ ತುಂಬಿ, ಒಣಹಣ್ಣುಗಳನ್ನು ಉದುರಿಸಿ ಫ್ರಿಡ್ಜ್‌ನಲ್ಲಿ ಮೂರರಿಂದ ನಾಲ್ಕು ಗಂಟೆಗಳ ಕಾಲ ಇಟ್ಟು ನಂತರ ಸವಿಯಿರಿ. ■

ಕೆ.ವಿ. ರಾಜಲಕ್ಷ್ಮಿ

ಲವಲVK beauty ಡೈರಿ

ಬೆವರಿಂದ ಪಾರಾಗಲಿ ಮೇಕಪ್

ಬೇಸಿಗೆಯ ಮೇಕಪ್ ಬೆವರಿಗೆ ಹಾಳಾಗಬಾರದು. ಬೆಳಗಿಂದ ಸಂಜೆಯವರೆಗೂ ಅದೇ ಲುಕ್ ಕಾಣಬೇಕು ಅಂದರೆ ಕೆಲವು ಕ್ರಮಗಳನ್ನು ಅನುಸರಿಸಿ.

ಮೇಕಪ್ ದೀರ್ಘಕಾಲ ಬಾಳಿಕೆ ಬರಲು ಚರ್ಮವನ್ನು ಸಿದ್ಧಗೊಳಿಸುವುದು ಅತಿ ಮುಖ್ಯ. ಕ್ಲೆನ್ಸಿಂಗ್ ಮತ್ತು ಹೈಡ್ರೇಶನ್ ಅತ್ಯಗತ್ಯ. ಎಣ್ಣೆ ರಹಿತ ಲೈಟ್ ವೇಟ್ ಮಾಯಿಶ್ಚರೈಸರ್ ಬಳಸಿ. ಜಿಡ್ಡಿನಂಶವಿಲ್ಲದ ಸನ್‌ಸ್ಕ್ರೀನ್ ಹಚ್ಚುವುದು ಮರೆಯಬೇಡಿ. ಮೂಗು ಮತ್ತು ಹಣೆಯ ಭಾಗದಲ್ಲಿ ಮ್ಯಾಟಿಫೈಯಿಂಗ್ ಪ್ರೈಮರ್ ಬಳಸಿ. ಇದು ಮೇಕಪ್ ಸರಿಯಾಗಿ ಕುಳಿತುಕೊಳ್ಳಲು ಸಹಾಯ ಮಾಡುತ್ತದೆ.

ಬೇಸಿಗೆಯಲ್ಲಿ ಮೇಕಪ್ ಅತಿ ಹೆಚ್ಚು ಪದರಗಳಾಗಿ ಕಾಣದಂತೆ ಎಚ್ಚರವಹಿಸಿ. ವಾಟರ್‌ಪ್ರೂಫ್ ಫೌಂಡೇಶನ್ ಆಯ್ಕೆ ಮಾಡಿ. ತೆಳುವಾದ ಪದರವನ್ನು ಮಾತ್ರ ಅನ್ವಯಿಸಿ. ಮುಖದ ಕಲೆಗಳನ್ನು ಮುಚ್ಚಲು ದೀರ್ಘಕಾಲ ಬಾಳಿಕೆ ಬರುವ ಕನ್ಸೀಲರ್ ಬಳಸಿ.

ಮುಖದ ಮೇಲೆ ಜಿಡ್ಡಿನಂಶ ಕಾಣದಂತೆ ಟ್ರಾನ್ಸ್‌ಲೂಸೆಂಟ್ ಪೌಡರ್‌ನಿಂದ ಲಘುವಾಗಿ ಸೆಟ್ ಮಾಡಿ.

ಐಶ್ಯಾಡೋ ಪ್ರೈಮರ್ ಬಳಸಿ ಮತ್ತು ಕಡ್ಡಾಯವಾಗಿ ವಾಟರ್‌ಪ್ರೂಫ್ ಐಲೈನರ್ ಹಚ್ಚಿ. ಲಾಂಗ್ ಲಾಸ್ಟಿಂಗ್ ಲಿಪ್ ಸ್ಟೇನ್‌ಗಳು ಅಥವಾ ಮಾಯಿಶ್ಚರೈಸರ್ ಇರುವ ಲಿಪ್‌ಸ್ಟಿಕ್‌ಗಳನ್ನು ಆರಿಸಿ.

ಎಲ್ಲವೂ ಮುಗಿದ ಮೇಲೆ ಮೇಕಪ್ ಒಂದೇ ಕಡೆ ಇರಲು ಪ್ರಬಲವಾದ ಸೆಟ್ಟಿಂಗ್ ಸ್ಪ್ರೇ ಬಳಸಿ. ಇದು ಶಾಖ ಮತ್ತು ಬೆವರಿನಿಂದ ಮೇಕಪ್ ಅಳಿಸದಂತೆ ತಡೆಯುತ್ತದೆ. ■

ವಿಜಯಬಂಧ - 7937



ಎಡದಿಂದ ಬಲಕ್ಕೆ

1 ಹಿಲರಿ ಹತ್ತಿದ ಆಲಯದಂತಹ ಮಂಜಿನ ಬೆಟ್ಟ 4
4 ಯೋಜನೆ ಹಾಕಿದವರಿಗೆ ಸಿಕ್ಕ ಕಾರ್ಯಕ್ರಮ ಏರ್ಪಾಡಿನ ಹೊಣೆ 4
6 ಶರವನ್ನು ಹಿಡಿದು ಬಂದ ಶಿವಭಕ್ತ 3
8 ಹೃದಯ ಮಿತವಾಗಿ ತೋರಿದ ಸ್ಪಂದನ 3
10 ಹಾವಿನ ಬಳಿಯೂ ಕಂಡ ಮೃದುತನ 3
12 ಆಶಯ ಹೊಂದಿರುವಾತ ಅವಕಾಶ ಸಿಕ್ಕಾಗ ಕಂಡ ಗಗನ 3
13 ಸಹಾಯ ಮಾಡಿದವನಿಗೆ ಬಡಿಸಿದ ಸಿಹಿ 3
16 ಪಾರಿತೋಷಕ ಪಡೆದುಕೊಂಡ ವಣಿಕ 3
19 ತವಕದಿಂದ ಹೋಗಿ ಸೇರಿದ ತಾಯಿಮನೆ 3
21 ಕನಿಕರವನ್ನು ಹೊಂದಿದ ಶ್ರೀಮಂತ 3
23 ಜಮಾನ ಕಾಲದಿಂದಲೂ ಈತ ಮುಖಂಡ 4
24 ದಮನಗೊಳಿಸಲಾಗದ ಹತ್ತು ದಿವಸಗಳ ಕಾಲ 4

ಮೇಲಿನಿಂದ ಕೆಳಕ್ಕೆ

2 ಬೆಂಗಳೂರು ದಕ್ಷಿಣ ಜಿಲ್ಲೆಯ ಗಡಿಯಲ್ಲಿನ ತಾಲೂಕು 3
3 ನ್ಯಾಯ ಶಕ್ತಿಯ ಮುಂದೆ ಸಿಕ್ಕೇ ಸಿಗುವ ಗೆಲುವು 2
4 ಪ್ರಾಣಿಗಳಲ್ಲಿ ತುಂಬಿಕೊಂಡಿರುವ ಜೀವ 2
5 ವಾನರರಿಗೂ ಸೇವೆ ನೀಡಿದ ಸೇವಕ 3
7 ನಿರಂತರ ಯತ್ನದಿಂದ ಸಿಕ್ಕ ಅನರ್ಘ್ಯ ಮಣಿ 2
8 ಮಿಳಿತಗೊಂಡ ಸಮಯ ತುಂಬಾ ಚಿಕ್ಕದು 2
9 ಕರ್ನಾಟಕದ ಜೀವನಾಡಿ ನದಿಯ ಉಗಮ ಸ್ಥಳ 5
10 ನಯವಾಗಿರುವ ಈತ ಸೌಜನ್ಯಶೀಲ 5
11 ಶಯನದಲ್ಲಿ ವಿಲಾಸವಾಗಿದ್ದೂ ಸಿಕ್ಕ ಗೆಲುವು 2
14 ಪದ್ಯದ ಆಕರ್ಷಕ ಹೆಸರಿನಾಕೆ 2
15 ಮರುಳ ಪುನಃ ಬಂದು ನಿಂದ 2
17 ಶ್ರೀವಾರಿಗಳ ಮುಡಿ ಏರಿದ ನೀರಿನಲ್ಲಿ ಜನಿಸಿದ ಕಮಲ 3
18 ಜ್ಞಾಪಕವಿರುವಂತೆ ಈತ ಮಹಾ ತಿಳಿವಳಿಕಸ್ಥ 2
20 ಅನುಗ್ರಹಿತ ಬಾತ್ಮೀದಾರ ಸಂಗ್ರಹಿಸಿದ ಸುದ್ದಿ 3
21 ಬಂಧನಕ್ಕೆ ಒಳಗಾದವನು ಪಾವತಿಸಿದ ಹಣ 2
22 ಮಂಕ ದಕ್ಷಿಣಕ್ಕೆ ತಿರುಗಿ ಬಡಿದ ಬಾಗಿಲ ಹಲಗೆ 2

ವಿಜಯಬಂಧ | 7936

ಎಡದಿಂದ ಬಲಕ್ಕೆ: 1.ಕಾವಿ 3.ಸಂಧಾನ 5.ಕಾಯ 6.ಸವಲತ್ತು 8,ತರಗತಿ 12.ನಾಮಕರಣ 15.ಕರಣಿಕ 18.ಕೃಷಿಭೂಮಿ 20.ಪಕ್ಷಿ 21.ಪತಾಕೆ 22.ರಸೆ

ಮೇಲಿನಿಂದ ಕೆಳಕ್ಕೆ: 2.ವಿಭವ 3.ಸಂಪತ್ತು 4. ನಮ್ರತ 5.ಕಾಳಗ 6.ಸತ್ವ 7.ಲಲನಾಮಣಿ 9.ರಮಣಋಷಿ 10.ತಿಥಿ 11.ತೆಂಕಣ 13.ಡಂಕ 14.ಶಮಿ 16.ರಕ್ತಾಕ್ಷಿ 17.ಕಲಾಪ 18.ಕೃತ್ತಿಕೆ 19.ಭೂಶಿರ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಕಟಕ, ವೃಶ್ಚಿಕ-ಈ ರಾಶಿಯವರಿಗೆ ಬುಧಾ ಆದಿತ್ಯ ಯೋಗ

ಮೇಷ: ಒಳ್ಳೆಯ ಯೋಚನಾ ಶಕ್ತಿ, ಉತ್ತಮ ಸಂಸ್ಕೃತಿಯನ್ನು ಪಡೆದಿರುವುದು ಉಪಯೋಗಕ್ಕೆ ಬರಲಿದೆ. ಅಲೆದಾಟದಿಂದ ದೇಹಾಯಾಸವಾದರೂ ಕಾರ್ಯಗಳು ಸಾಗಲಿವೆ. ದಾಂಪತ್ಯದಲ್ಲಿ ಸಮಸ್ಯೆ ಉಂಟಾಗದಂತೆ ಜಾಗ್ರತೆ ವಹಿಸಿ. **ಶುಭ ಸಂಖ್ಯೆ:** 2, **ಬಣ್ಣ:** ಕೆಂಪು
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಕಚೇರಿಯಲ್ಲಿ ಅರಿವಿಲ್ಲದ ವಿಚಾರಗಳಲ್ಲಿ ತಪ್ಪು ಮಾಡುವುದರ ಬದಲು ಸಹೋದ್ಯೋಗಿಗಳ ಸಹಕಾರ ಪಡೆಯಿರಿ. ನ್ಯಾಯವಾದಿಗಳಿಗೆ ವೃತ್ತಿಯಿಂದ ಆದಾಯ ಗಳಿಕೆ ಇರಲಿದೆ. ಕಟ್ಟಡ ನಿರ್ಮಾಣಗಾರರಿಗೆ ಹೆಚ್ಚಿನ ಕೆಲಸ ಇರುವುದು. **ಶುಭ ಸಂಖ್ಯೆ:** 1, **ಬಣ್ಣ:** ಕಪ್ಪು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಉದ್ಯೋಗದಲ್ಲಿ ಜವಾಬ್ದಾರಿಯುತ ಕಾರ್ಯವೈಖರಿಯಿಂದ ಗೌರವ ಪ್ರಾಪ್ತಿಯಾಗಲಿದೆ. ಒದಗಿ ಬರುವ ಅವಕಾಶಗಳು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ಸಾಲದ ಹಣ ಹಿಂದಿರುಗಿಸುವ ಬಗ್ಗೆ ಗಮನವಿರಲಿ. **ಶುಭ ಸಂಖ್ಯೆ :** 4, **ಬಣ್ಣ:** ಕೆಂಪು
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಸಾಂಸಾರಿಕ ಮತ್ತು ಆರ್ಥಿಕವಾಗಿ ಇಷ್ಟಾರ್ಥ ಸಿದ್ಧಿಸುವುದು. ಸ್ವತಂತ್ರ ವೃತ್ತಿಯವರಿಗೆ ನಿರಂತರ ಆದಾಯ ತೋರಿ ಬಂದರೂ ಖರ್ಚು-ವೆಚ್ಚಗಳಲ್ಲಿ ಜಾಗ್ರತೆ ಇರಲಿ. **ಶುಭ ಸಂಖ್ಯೆ :** 5, **ಬಣ್ಣ:** ಹಳದಿ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲ ಪ್ರಾಪ್ತಿ. ಸುಗಂಧ ಮತ್ತು ಅಲಂಕಾರಿಕ ದ್ರವ್ಯಗಳ ಮಾರಾಟ ಲಾಭದಾಯಕ. ಉದ್ಯೋಗ ವಿಸ್ತರಣೆ ವಿಷಯವಾಗಿ ಉತ್ತಮ ಆಲೋಚನೆಗಳು ಗರಿಗೆದರಲಿವೆ. **ಶುಭ ಸಂಖ್ಯೆ :** 4, **ಬಣ್ಣ:** ಬಿಳಿ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಇಂದು ಕೆಲಸಗಾರರಲ್ಲಿ ಬಹಳ ಶಾಂತ ರೀತಿಯಿಂದ ವರ್ತಿಸುವುದು ಅನಿವಾರ್ಯ. ಪೊಲೀಸ್ ವರಿಷ್ಠ ಅಧಿಕಾರಿಗಳಿಗೆ ಕೆಲಸ ಕಡಿಮೆಯಾಗುವುದು. **ಶುಭ ಸಂಖ್ಯೆ :** 6, **ಬಣ್ಣ:** ಕಂದು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ನೈತಿಕ ಮೌಲ್ಯ ಆಧರಿಸುವುದರಿಂದ ಕಾರ್ಯಗಳು ಸುಗಮವಾಗುವುವು. ಸಾಮಾಜಿಕವಾದ ಕೆಲಸಗಳಿಂದ ಕೌಟುಂಬಿಕವಾಗಿ ಸಮಯದ ಅಭಾವ ಉಂಟಾಗುವುದು. ಅಧಿಕಾರಿಗಳಿಗೆ ವರ್ಗಾವಣೆ ಸಂಭವ. **ಶುಭ ಸಂಖ್ಯೆ :** 2, **ಬಣ್ಣ:** ಆಕಾಶ ನೀಲಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಕ್ರಿಯಾತ್ಮಕ ಯೋಚನೆಗಳೊಂದಿಗೆ ಸಂಪೂರ್ಣವಾಗಿ ಚಟುವಟಿಕೆಯಿಂದ ಇರುವಿರಿ. ಕಾನೂನು ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಸರಿಯಲ್ಲ, ಸಹೋದ್ಯೋಗಿಗಳ ಸಹಕಾರ ಉತ್ತಮವಾಗಿರುವುದು. **ಶುಭ ಸಂಖ್ಯೆ :** 1, **ಬಣ್ಣ:** ಗುಲಾಬಿ
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಜಗತ್ತಿನ ಚಲನೆಯ ವೇಗಕ್ಕೆ ನಿಮ್ಮ ಚಲನವಲನಗಳು ಕಡಿಮೆಯಾಗಿರುವ ಅನುಭವ ಕಾಡಲಿದೆ. ಗೆಳೆಯರೊಂದಿಗೆ ಸಂತೋಷ ಕೂಟದಲ್ಲಿ ಪಾಲ್ಗೊಳ್ಳುವಿರಿ. **ಶುಭ ಸಂಖ್ಯೆ :** 9, **ಬಣ್ಣ:** ಮೆರೂನ್
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಸಹೋದರರಲ್ಲಿ ಉಂಟಾದ ಸಮಸ್ಯೆ ವಿವಾದಕ್ಕೆ ಆಸ್ಪದವಾಗದಂತೆ ಬಗೆಹರಿಸಿಕೊಳ್ಳಿ. ವ್ಯವಹಾರವನ್ನು ವಿಸ್ತರಿಸಿಕೊಳ್ಳುವಲ್ಲಿ ಸ್ನೇಹಿತರು ನೆರವಾಗಲಿದ್ದಾರೆ. ಹಣ ಸಂಜೆಯ ವೇಳೆಗೆ ಕೈ ಸೇರಲಿದೆ. **ಶುಭ ಸಂಖ್ಯೆ :** 7, **ಬಣ್ಣ:** ಇಂಡಿಗೋ
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಅನಿವಾರ್ಯದ ಸಮಯಕ್ಕೆ ಅಕ್ಕಪಕ್ಕದವರ ಸಹಾಯ ಸಿಗುತ್ತದೆ. ಹೀಗಾಗಿ ಸುತ್ತಮುತ್ತಲಿನ ಜನರೊಂದಿಗೆ ಬೆರೆಯುವ ಗುಣ ಬೆಳೆಸಿಕೊಳ್ಳಿ. **ಶುಭ ಸಂಖ್ಯೆ :** 8, **ಬಣ್ಣ:** ಕೇಸರಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಅಕ್ಕಪಕ್ಕದವರ ಟೀಕೆಯನ್ನೂ ಶಾಂತ ಮನಸ್ಸಿನಿಂದ ಸ್ವೀಕರಿಸಿ. ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. **ಶುಭ ಸಂಖ್ಯೆ :** 9, **ಬಣ್ಣ:** ಬೂದು
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಲವಲVK

ನಟ ಸಲ್ಮಾನ್ ಖಾನ್‌ರಿಗೆ ರಾಜ್–ಡಿಕೆ ನಿರ್ದೇಶನ ಮಾಡುತ್ತಿರುವ ಸೂಪರ್‌ಹೀರೊ ಶೈಲಿಯ ಸಿನಿಮಾದಲ್ಲಿ ಕರೀನಾ ಕಪೂರ್ ನಾಯಕಿಯಾಗಲಿದ್ದಾರೆ.

ನಟ ಶಿವರಾಜ್‌ಕುಮಾರ್ ಅವರು ಪವನ್ ಒಡೆಯರ್ ನಿರ್ದೇಶನದ 'ಬೇಲ್' ಸಿನಿಮಾ ಶೂಟಿಂಗ್‌ಗಾಗಿ ಹಿಮಾಚಲ ಪ್ರದೇಶದ ಧರ್ಮಶಾಲಾಗೆ ತೆರಳಿದ್ದಾರೆ.

ಜನನಾಯಕನ ವಿಜಯಪಥ

ಮೌನಿಯೊಬ್ಬ ಗೇಮ್ ಚೇಂಜರ್ ಆದ ಬಗೆ

ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಸಿನಿಪ್ರಿಯರನ್ನು ತಮ್ಮ ಸ್ಟೈಲಿಶ್ ಸ್ವ್ಯಾಗ್, ಚುರುಕಿನ ನಟನೆ, ತುಂಟತನ, ಸಮಾಜದ ಕಟ್ಟಕಡೆಯ ಶ್ರಮಜೀವಿಗಳನ್ನೂ ತನ್ನೊಳಗಾಗಿಸಿ ನಾನೂ ನಿಮ್ಮಂತೇ ಎಂದು ಹೇಳಿಕೊಂಡು ಬಂದಿರುವ ವಿಜಯ್ ದಳಪತಿಯ ಮಾಸ್ ಅಪೀಲ್ ಸಾಮಾನ್ಯದ್ದಲ್ಲ. ಅದಕ್ಕೇ ಇರಬೇಕು 'ಅಪ್ಪಡಿ ಪೋಡು ಪೋಡು', 'ವಾತಿ ಕಮಿಂಗ್', 'ಹಬೀಬೊ' ಎಂದು ಚಿತ್ರ ವಿಚಿತ್ರವಾಗಿ ಕುಣಿದು ಕುಪ್ಪಳಿಸಿದ ಅವರೀಗ ತಮಿಳುನಾಡಿನ ಚುಕ್ಕಾಣಿ ಹಿಡಿಯಲು ಮುಂದಾಗಿದ್ದಾರೆ.

ಹಂಸಪ್ರಿಯ
feedbacklvk@vijaykarnataka.com

ವಿಜಯ್ ದಳಪತಿ 'ಬಿಗಿಲ್' ಸಿನಿಮಾದಲ್ಲಿ 'ನಾವು ಯಾರು ಅನ್ನೋದು ಮುಖ್ಯ ಅಲ್ಲ, ನಮ್ಮಿಂದ ಏನಾಗುತ್ತದೆ ಎಂಬುದಷ್ಟೇ ಮುಖ್ಯ' ಎಂದು ಹೇಳಿದ ಪಂಚಿಂಗ್ ಡೈಲಾಗ್‌ಗೆ ಚಿತ್ರಮಂದಿರದಲ್ಲಿ ಪ್ರೇಕ್ಷಕರು ಹೊಡೆದ ಚಪ್ಪಾಳೆ ಇಂದು ಇಡೀ ತಮಿಳುನಾಡಿನಲ್ಲಿ ಅನುರಣಿಸುತ್ತಿದೆ. 'ಒಂದು ಮಗು ಹುಟ್ಟಲು ಒಂಬತ್ತು ತಿಂಗಳು, ಒಬ್ಬ ಎಂಜಿನಿಯರ್, ಡಾಕ್ಟರ್ ಆಗಲು ಐದು ವರ್ಷ, ಆದರೆ ಒಬ್ಬ ನಾಯಕ ಹುಟ್ಟಲು ಒಂದು ಯುಗ ಬೇಕು, ಒಂದು ಯುಗಕ್ಕೆ ಒಬ್ಬನೇ ನಾಯಕ-ಮರ್ಸೆಲ್' ಎಂದು ಅವರು ಹೊಡೆದ ಡೈಲಾಗ್ ಕೇವಲ ಸಿನಿಮಾ ಡೈಲಾಗ್ ಆಗಿ ಉಳಿಯದೆ ಈಗವರು ರಿಯಲ್ ಜನನಾಯಕ ಅನಿಸಿಕೊಂಡಿದ್ದಾರೆ. ಇದುವೇ ವಿಜಯ್ ಸಿನಿಮಾ ಮ್ಯಾಜಿಕ್. ಅಭಿಮಾನಿಗಳ ಉತ್ಕಟ ಅಭಿಮಾನವನ್ನು ಮತಗಳನ್ನಾಗಿ ಪರಿವರ್ತಿಸಿದ ತಮಿಳು ಸ್ಟಾರ್ ವಿಜಯ್ ದಳಪತಿ ಈಗ ತಮಿಳುನಾಡಿನ ಮುಖ್ಯಮಂತ್ರಿಯ ಪಟ್ಟದ ಸನಿಹಕ್ಕೆ ಬಂದು ನಿಂತಿದ್ದಾರೆ.

ಮೌನಿ ವಿಜಯ್

ನಟ ವಿಜಯ್ ಬೇರೆ ಕಲಾವಿದರ ರೀತಿ ಹುಚ್ಚಾಪಟ್ಟೆ ಮಾತನಾಡುವುದಿಲ್ಲ. ಸೆಟ್‌ನಲ್ಲಿಯೂ ತಾನಾಯಿತು, ತನ್ನ ಕೆಲಸವಾಯಿತು ಎಂಬಂತಿರುತ್ತಾರೆ. ಕೆಲವು ಮೂಲಗಳ ಪ್ರಕಾರ ತನ್ನ ಸಹೋದರಿಯ ಮರಣದ ನಂತರ ಅವರು ಮಾತು ಕಡಿಮೆ ಮಾಡಿದರು ಎಂದು ಹೇಳಲಾಗುತ್ತಿದೆ. ಆದರೆ ಸಿನಿಮಾ ತಂಡದವರು ಹೇಳುವಂತೆ ವಿಜಯ್ ಬುದ್ಧಿವಂತ. ಸುಮ್ಮನೆ ಮಾತನಾಡುವುದಕ್ಕಿಂತಲೂ ಮೌನವಾಗಿ ಎಲ್ಲವನ್ನೂ ಗಮನಿಸುತ್ತಿರುತ್ತಾರೆ. ಕಥೆ ಕೇಳುವಾಗ, ನೃತ್ಯ ನಿರ್ದೇಶಕರು ಡಾನ್ಸ್ ಹೇಳಿಕೊಡುವಾಗ, ಫೈಟ್ ಕಂಪೋಸಿಂಗ್ ವೇಳೆ ಹೀಗೆ ಎಲ್ಲಾ ವಿಷಯದಲ್ಲಿಯೂ ಬಹಳ ಎಚ್ಚರಿಕೆಯಿಂದ ಗಮನಿಸಿ ನಿರ್ದೇಶಕರು ಮತ್ತು ಚಿತ್ರತಂಡ ಅಚ್ಚರಿ ಪಡುವಂತೆ ಅವುಗಳನ್ನು ತೆರೆಯ ಮೇಲೆ ತರುತ್ತಾರೆ. ತೆರೆಯ ಮೇಲೆ ತಮ್ಮದೇ ರಾ ಶೈಲಿಯಲ್ಲಿ ಪಟಪಟ ಮಾತನಾಡುವ ಅವರು ಇತರೆಡೆ ತನಗೆ ಎಷ್ಟು ಬೇಕೋ ಅಷ್ಟೇ ಮಾತನಾಡುತ್ತಾರೆ.

ವೈರಲ್ ಸ್ವ್ಯಾಗ್

ವಿಜಯ್ ನಟನೆಯ ಪ್ರತಿ ಸಿನಿಮಾದ ಹಾಡುಗಳ ಸಿಗ್ನೇಚರ್ ಸ್ಟೆಪ್‌ಗಳು ರಾತ್ರೋರಾತ್ರಿ ವೈರಲ್ ಆಗುತ್ತವೆ. ಇತ್ತೀಚಿನ ದಿನಗಳಲ್ಲಂತೂ ಅವರು ಸುಮ್ಮನೇ ಕೈ ಕುಣಿಸಿ, ಕಾಲು ತಿರುಗಿಸಿದರೆ ಅದೇ ಸಿಗ್ನೇಚರ್ ಸ್ಟೆಪ್ ಆಗಿ ಜನಪ್ರಿಯವಾಗುತ್ತಿತ್ತು. ಯಾವ ವಯಸ್ಸಿನವರು ಬೇಕಾದರೂ ಆ ಸ್ಟೆಪ್‌ಗಳನ್ನು ಮಾಡುವಷ್ಟು ಅವು ಸರಳ ಮತ್ತು ಸ್ಟೈಲಿಶ್ ಆಗಿರುತ್ತಿದ್ದವು. 'ವಾತಿ ಕಮಿಂಗ್' ಹಾಡಿನ ಸ್ಟೆಪ್ ಅಂತೂ ಸಿನಿಮಾ ರಿಲೀಸ್ ಆಗುವುದಕ್ಕೂ ಮುನ್ನ ಮತ್ತು ಆದ ಮೇಲೂ ಸಿಕ್ಕಾಪಟ್ಟೆ ವೈರಲ್ ಆಗಿತ್ತು. ಅವರು ಡೈಲಾಗ್ ಡೆಲಿವರಿ ಮಾಡುವ ರಾ ಸ್ಟೈಲ್ ಕೂಡ ಜನಪ್ರಿಯ.

ರಜನಿ ಫ್ಲೇವರ್‌ನ ನಟ

ವಿಜಯ್ ಮ್ಯಾನರಿಸಂ, ನಟನೆಯು ಸೂಪರ್‌ಸ್ಟಾರ್ ರಜನಿಕಾಂತ್ ಸ್ಟೈಲ್‌ಗೆ ಹೋಲುತ್ತದೆ ಎನ್ನುವವರೂ ಇದ್ದಾರೆ. ಇತ್ತೀಚಿನ ದಿನಗಳಲ್ಲಿ ಅದನ್ನವರು ಹೆಚ್ಚು ಮಾಡಿಕೊಂಡಿದ್ದರು. ನಟ ವಿಜಯಕಾಂತ್‌ರನ್ನು ಬಹಳ ಇಷ್ಟಪಡುತ್ತಿದ್ದ ವಿಜಯ್ ರಾಜಕೀಯದಲ್ಲಿ ಅವರು ಕಂಡ ಯಶಸ್ಸು ತನಗೆ ದಕ್ಕಬೇಕು ಎಂದುಕೊಂಡಿದ್ದರು. ಆದರೆ ಅವರ ಅದೃಷ್ಟ ಚೆನ್ನಾಗಿದ್ದ ಕಾರಣ ಈಗ ವಿಜಯಕಾಂತ್‌ಗಿಂತಲೂ ಬಹುಎತ್ತರದ ಗೆಲುವು ವಿಜಯ್ ಅವರದ್ದಾಗಿದೆ.

ಸರಳತೆಯಲ್ಲಿಯೇ ಲಕ್ಷುರಿ

ವಿಜಯ್ ಹೆಸರಿಗೆ ದಳಪತಿ. ಆದರೆ ಅವರ ಉಡುಗೆ, ಪಾದರಕ್ಷೆ ಎಲ್ಲವೂ ಸರಳ. ಸಿನಿಮಾ ಮತ್ತು ಖಾಸಗಿ ಸಮಾರಂಭಗಳಲ್ಲಿಯೂ ಅವರು ಹೆಚ್ಚಾಗಿ ಕೇವಲ ಕಾಟನ್ ಶರ್ಟ್ ಮತ್ತು ಫಾರ್ಮಲ್ ಪ್ಯಾಂಟ್‌ನಲ್ಲಿಯೇ ಕಾಣಿಸಿಕೊಳ್ಳುತ್ತಾರೆ. ಅದನ್ನು ಬಿಟ್ಟರೆ ಟಿ ಶರ್ಟ್, ಟ್ರ್ಯಾಕ್ ಪ್ಯಾಂಟ್ ಅವರಿಗೆ ಅಚ್ಚುಮೆಚ್ಚು. ವಿಶೇಷ ಎಂದರೆ ಅವರು ನೋಡಲು ಬಹಳ ಸರಳವೆನಿಸಿದರೂ ಧರಿಸುವ ಸಿಂಪಲ್ ಉಡುಪುಗಳು ಪಕ್ಕಾ ಬ್ರಾಂಡೆಡ್ ಮತ್ತು ದುಬಾರಿ ಬೆಲೆಯವು ಎಂಬುದು ಅವರ ಆಪ್ತರ ಮಾತು. ಆದರೆ ಸಾಮಾನ್ಯರ ಕಣ್ಣಿಗೆ ಅವು ಬಹಳ ಸರಳವಾಗಿರುತ್ತಿದ್ದವು. ವಿಜಯ್ ಕೋಟ್ಯಂತರ ರೂಪಾಯಿ ಬೆಲೆಯ ಆಸ್ತಿ ಮಾಡಿದ್ದಾರೆ, ಐಷಾರಾಮಿ ಕಾರುಗಳಲ್ಲಿ ಓಡಾಡುತ್ತಾರೆ. ಅದೇ ರೀತಿ ಟಿ ಶರ್ಟ್, ಟ್ರ್ಯಾಕ್ ಪ್ಯಾಂಟ್ ಧರಿಸಿ ಸೈಕಲ್ ನಲ್ಲಿಯೂ ಓಡಾಡುತ್ತಾರೆ.

ಆತ್ಮೀಯರು ಕಡಿಮೆ

ಸಿನಿಮಾ ರಂಗದಲ್ಲಿ ಪ್ರತಿಯೊಬ್ಬರಿಗೂ ಆತ್ಮೀಯರು ಇರುತ್ತಾರೆ. ಆದರೆ ವಿಜಯ್ ತಾನು ಯಾರೊಂದಿಗೆ ಆತ್ಮೀಯನಾಗಿದ್ದೇನೆ ಎಂಬುದನ್ನು ತೋರಿಸಿಕೊಂಡಿರಲಿಲ್ಲ. ಯಾವಾಗಲೂ ಒಬ್ಬರೇ ಬರುತ್ತಾರೆ, ಒಬ್ಬರೇ ಹೋಗುತ್ತಾರೆ. ತನ್ನ ಸುತ್ತ ಮೌನದ ಕೋಟೆಯನ್ನು ಕಟ್ಟಿಕೊಂಡಿದ್ದಾರೆ. ತನ್ನ ತಂದೆ ತಾಯಿಯೊಂದಿಗೂ ಅವರು ಹೆಚ್ಚಿಗೆ ಮಾತನಾಡುವುದಿಲ್ಲ ಎನ್ನುವವರು ಇದ್ದಾರೆ. ರಾಜಕೀಯ ಪ್ರವೇಶ ಮಾಡಿದಾಗ ತನ್ನ ಕುಟುಂಬದವರನ್ನು ಅವರು ಹತ್ತಿರ ಸೇರಿಸಲಿಲ್ಲ, ತನ್ನ ತಂದೆ ಒಬ್ಬ ದೊಡ್ಡ ನಿರ್ದೇಶಕರಾದರೂ ಯಾವುದೇ ಪ್ರಚಾರಕ್ಕೆ ಅವರನ್ನು ಬಳಸಿಕೊಳ್ಳಲಿಲ್ಲ. ಏಕಾಂಗಿಯಾಗಿಯೇ ತಮಿಳುನಾಡಿನ ಮೂಲೆ ಮೂಲೆ ಸುತ್ತಿದರು.

ಸ್ಥಳೀಯ ಸೊಗಡು

ವಿಜಯ್ ಸಿನಿಮಾಗಳು ದೊಡ್ಡ ಮಟ್ಟದಲ್ಲಿ ಹಿಟ್ ಆಗಲು ಕಾರಣ ಅವುಗಳಲ್ಲಿರುವ ಸ್ಥಳೀಯ ಕಥೆ ಮತ್ತು ಭರಪೂರ ಮನರಂಜನೆ. ಅವರ ಸಿನಿಮಾದಲ್ಲಿ ತಮಿಳು ಸಂಸ್ಕೃತಿಯ ಅನಾವರಣ ಇದ್ದೇ ಇರುತ್ತದೆ. ಜೆನ್ ಜೀಗಳನ್ನೂ ಸೂಜಿಗಲ್ಲಿನಂತೆ ಸೆಳೆಯುವಂತಹ ಸ್ಲಿಮ್ ಬಾಡಿ, ಚುರುಕುತನ, ಫಿಟ್ನೆಸ್ ಅವರದ್ದು. ಈಗ ಸಂಪೂರ್ಣ ರಾಜಕಾರಣಿಯಾಗಿರುವ ಅವರ ಸಿನಿಮಾಗಳನ್ನು ಸಿನಿ ಅಭಿಮಾನಿಗಳು ನಿಜವಾಗಿಯೂ ಮಿಸ್ ಮಾಡಿಕೊಳ್ಳುತ್ತಾರೆ.

ರಾಜಕೀಯ ಪ್ರವೇಶಕ್ಕೆ ಸಿದ್ಧತೆ

ಕಳೆದ ಹತ್ತು ವರ್ಷಗಳಿಂದ ವಿಜಯ್ ಸಿನಿಮಾಗಳಲ್ಲಿ ರಾಜಕೀಯ ವಾಂಛೆ ಗಾಢವಾಗಿತ್ತು. 'ಮರ್ಸೆಲ್'ನಲ್ಲಿ ಮೆಡಿಕಲ್ ಮಾಫಿಯಾ, 'ಕತ್ತಿ'ಯಲ್ಲಿ ಕುಡಿಯುವ ನೀರಿನ ಸಮಸ್ಯೆ, 'ಮಾಸ್ಟರ್'ನಲ್ಲಿ ಮಾದಕ ವಸ್ತುಗಳ ವಿರುದ್ಧದ ಹೋರಾಟ, 'ಸರ್ಕಾರ್'ನಲ್ಲಿ ಚುನಾವಣೆಗೆ ಒಂದೊಂದು ಮತವೂ ಬಹಳ ಮುಖ್ಯ ಎಂಬಂತಹ ಕಥೆಗಳ ಮೂಲಕ ಜನರಿಗೆ ಹತ್ತಿರವಾದರು. ಈ ಎಲ್ಲಾ ಸಿನಿಮಾಗಳಲ್ಲಿಯೂ ಮನರಂಜನೆ ಹೇರಳವಾಗಿತ್ತು. ಜನರಿಗೆ ಮನರಂಜನೆ ಮೂಲಕ ಹೇಳುವ ಸಂದೇಶ ಬೇಗ ತಲುಪುತ್ತದೆ ಎಂಬ ವಿಷಯವನ್ನು ಅವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ■

ಈಶಾ ಅಂಬಾನಿ

ಕರಣ್ ಜೋಹರ್

ಜಾಗತಿಕ ವೇದಿಕೆಯಲ್ಲಿ ಭಾರತದ ಕಲಾ ವೈಭವ

ಜಗತ್ತಿನ ಪ್ರತಿಷ್ಠಿತ ಫ್ಯಾಷನ್ ಸಮಾರಂಭ ಮೆಟ್‌ಗಾಲಾದಲ್ಲಿ ಈ ವರ್ಷವೂ ಭಾರತದ ಸೆಲೆಬ್ರಿಟಿಗಳು ತಮ್ಮ ನೆಲಮೂಲದ ವಿಶೇಷ ಉಡುಪುಗಳಲ್ಲಿ ಕಂಗೊಳಿಸಿದ್ದಾರೆ. 'ಕಾಸ್ಟ್ಯೂಮ್ ಆರ್ಟ್' ಥೀಮ್‌ಗೆ ತಕ್ಕಂತೆ ಅವರು ಕೆಲವು ದೇಸಿ ಕಲೆಗಳನ್ನು ಫ್ಯಾಷನಬಲ್ ಆಗಿ ಅನಾವರಣಗೊಳಿಸಿದ್ದಾರೆ.

ಬಬಿತಾ ಎಸ್.
babitha.salian@timesofindia.com

ಭಾರತದ ಸರ್ವಶ್ರೇಷ್ಠ ಚಿತ್ರ ಕಲಾವಿದ ರಾಜಾ ರವಿವರ್ಮನ ಕಲಾ ವೈಭವ, ಪಾರಂಪರಿಕ ಕಲಂಕಾರಿ ಚಿತ್ತಾರ, ವಜ್ರದ ವೈಭೋಗ, ಸೀರೆ, ಪ್ರಾದೇಶಿಕ ಜವಳಿ ವೈವಿಧ್ಯ, ಬೆಳ್ಳಿಯ ಫ್ಯಾಷನ್ ಆಕ್ಸೆಸರಿ ಇತ್ಯಾದಿ 2026ನೇ ಸಾಲಿನ ಮೆಟ್‌ಗಾಲಾ ಸಮಾರಂಭಕ್ಕೆ ದೇಸಿ ಮೆರುಗು ನೀಡಿದವು. ನ್ಯೂಯಾರ್ಕ್‌ನಲ್ಲಿ ಸೋಮವಾರ ನಡೆದ ಈ ಫ್ಯಾಷನ್ ಈವೆಂಟ್‌ನಲ್ಲಿ ಭಾರತೀಯ ಸೆಲೆಬ್ರಿಟಿಗಳ ಕಾಸ್ಟ್ಯೂಮ್ ಆರ್ಟ್ ಉಡುಪುಗಳ ಫೋಟೊ ಮತ್ತು ವಿಡಿಯೊಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಭಾರತದ ಕಲಾ ಶ್ರೀಮಂತಿಕೆ ಕಂಡು ನೆಟ್ಟಿಗರು ಬೆರಗಾಗಿದ್ದಾರೆ.

ಮೆಟ್‌ಗಾಲಾ 2026

ಕೇಪ್‌ನಲ್ಲಿ ರವಿವರ್ಮನ ಕುಂಚ

ಭಾರತದ ಸ್ಟಾರ್ ನಿರ್ದೇಶಕ ಕರಣ್ ಜೋಹರ್ ಈ ವರ್ಷ ಮೆಟ್‌ಗಾಲಾ ರೆಡ್ ಕಾರ್ಪೆಟ್‌ನಲ್ಲಿ ಕಾಣಿಸಿಕೊಳ್ಳುವ ಮೂಲಕ ಡೆಬ್ಯೂ ಮಾಡಿದ್ದಾರೆ. ಪ್ರಯೋಗಶೀಲ ಫ್ಯಾಷನ್‌ಗೆ ಹೆಸರಾಗಿರುವ ಅವರು ಅಲ್ಲಿ ರಾಜಾ ರವಿವರ್ಮನ ಕಲಾ ವಿಶೇಷತೆಯನ್ನು ಮೂಡಿಸಿದ್ದ ಡಿಸೈನರ್ ಕೇಪ್ ಅನ್ನು ಸುಂದರವಾಗಿ ಪ್ರಸ್ತುತಪಡಿಸಿದ್ದಾರೆ. ಕಪ್ಪು ಮತ್ತು ಕಂದು ಬಣ್ಣ ಮಿಶ್ರಿತ ಬಂದ್‌ಗಲಾ ಸೂಟ್ ಧರಿಸಿ ಅದರ ಮೇಲೆ ಕೇಪ್ ಧರಿಸಿ ಪೋಸ್ ಕೊಡುತ್ತಿದ್ದ ಅವರು ಚಲಿಸುವ ಕ್ಯಾನ್‌ವಾಸ್‌ನಂತೆ ಭಾಸವಾಗಿದ್ದಾರೆ.

ಸೀರೆಯಲ್ಲಿ ವಜ್ರದ ಹೊಳಪು

ಖ್ಯಾತ ಉದ್ಯಮಿ ಈಶಾ ಅಂಬಾನಿ ಮೆಟ್ ಗಾಲಾದಲ್ಲಿ ಸೀರೆಧಾರಿಯಾಗಿ ಮಿಂಚಿದ್ದಾರೆ. ಅವರು ಧರಿಸಿದ್ದ ಚಿನ್ನದೆಳೆಯ ಹ್ಯಾಂಡ್‌ಲೂಮ್ ಟಿಶ್ಯೂ ಸೀರೆಯ ತುಂಬ 200ಕ್ಕೂ ಅಧಿಕ ವಜ್ರದ ಹರಳುಗಳನ್ನು ಅಳವಡಿಸಲಾಗಿತ್ತು. ಸೀರೆಯ ಬ್ಲೌಸ್ ಮತ್ತು ನೆಕ್ಲೇಸ್‌ನಲ್ಲಿ 1800ಕ್ಕೂ ಹೆಚ್ಚಿನ ಕ್ಯಾರಟ್‌ನ ವಜ್ರಗಳು ಮತ್ತು ಎಮರಾಲ್ಡ್ ಗಳನ್ನು ಕಲಾತ್ಮವಾಗಿ ವಿನ್ಯಾಸಗೊಳಿಸಲಾಗಿತ್ತು. ಸಾಂಪ್ರದಾಯಿಕ ಸೀರೆಗೆ ಆಧುನಿಕ ಅಂಶಗಳನ್ನು ಬೆರೆಸಿ ಮಾಡಿದ ಈಶಾ ಲುಕ್ ಕಲಾತ್ಮಕತೆ ಮತ್ತು ರಾಯಲ್ ಶೈಲಿಯಿಂದ ಗಮನ ಸೆಳೆದವು. ಅವರು ಕೈಯಲ್ಲಿ ಹಿಡಿದಿದ್ದ ಮಾವಿನಕಾಯಿ ಬಣ್ಣ ಮತ್ತು ಗಾತ್ರದ ಪರ್ಸ್ ಕೂಡ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು.

ಸ್ಲೀವ್ಸ್ ಮೇಲೆ ಕುಶಲಕರ್ಮಿಗಳ ಹೆಸರು

ಸೆಲೆಬ್ರಿಟಿ ಫ್ಯಾಷನ್ ಡಿಸೈನರ್ ಮನೀಶ್ ಮಲ್ಹೋತ್ರಾ ಮೆಟ್ ಗಾಲಾದಲ್ಲಿ ಕಪ್ಪು ಬಣ್ಣದ ಬಂದ್‌ಗಲಾ ಸೂಟ್‌ನಲ್ಲಿ ಪೋಸ್ ನೀಡಿದ್ದಾರೆ. ಇದರ ಮೇಲೆ ಅವರು ಬಿಳಿ ಬಣ್ಣದ ವಿಶೇಷ ಕೇಪ್ ಧರಿಸಿದ್ದರು. ಇದರಲ್ಲಿ ಭಾರತದ ಸಾಂಪ್ರದಾಯಿಕ ಡೋರಿ, ಜರ್ದೋಸಿ, ಚಿಕನ್‌ಕರಿ, ಕಸಬ್ ಕಸೂತಿಗಳನ್ನು ಮೂಡಿಸಿದ್ದು, ಅದರೊಂದಿಗೆ ಕುಶಲಕರ್ಮಿಗಳ ಹೆಸರು, ಕಲಾ ಪ್ರಕಾರಗಳ ವಿಶೇಷ, ಬಳಸುವ ಸಾಮಗ್ರಿ ಮತ್ತು ಕಸೂತಿ ಹಿಂದಿರುವ ಕಥೆಗಳನ್ನು ಪ್ರಸ್ತುತಪಡಿಸಿದ್ದು ವಿಶೇಷವಾಗಿತ್ತು.

ಉಡುಪಿನಲ್ಲಿ ಬೆಳ್ಳಿ ಕಲಾಕೃತಿ

ಖ್ಯಾತ ಉದ್ಯಮಿ ಮತ್ತು ಆರ್‌ಸಿಬಿ ತಂಡದ ಒಡತಿ ಅನನ್ಯಾ ಬಿರ್ಲಾ ಮೆಟ್‌ಗಾಲಾದಲ್ಲಿ ಭಾರತೀಯ ಫ್ಯಾಷನ್‌ಗೆ ಜಾಗತಿಕ ಫ್ಯಾಷನ್‌ನ ಸ್ಪರ್ಶವಿದ್ದ ಕಪ್ಪು ಬಣ್ಣದ ಬ್ಲೇಝರ್ ಶೈಲಿಯ ಸ್ಕಲ್ಪ್ಚರ್ ಪೆಪ್ಲಮ್ ಮತ್ತು ಫ್ಲೋರ್ ಲೆಂತ್ ಪ್ಲೀಟೆಡ್ ಸ್ಕರ್ಟ್ ಧರಿಸಿದ್ದರು. ಅವರು ಮುಖಕ್ಕೆ ಮೆಟಾಲಿಕ್ ಸ್ಕಲ್ಪ್ಚರ್ ಮಾಸ್ಕ್ ಧರಿಸಿದ್ದು ವಿಶೇಷವಾಗಿತ್ತು.

ಕಲಂಕಾರಿಗೆ ರೋಸ್‌ಕಟ್ ಡೈಮಂಡ್

ಖ್ಯಾತ ಉದ್ಯಮಿ ಸುಧಾ ರೆಡ್ಡಿ ಕಪ್ಪು ಬಣ್ಣದ ಡಿಸೈನರ್ ಕೋರ್ಸೆಟ್ ಮತ್ತು ಅದರ ಮೇಲೆ ತಮ್ಮೂರು ಆಂಧ್ರಪ್ರದೇಶದ ವಿಶೇಷ ಕಲಂಕಾರಿ ಚಿತ್ತಾರದ ಡಿಸೈನರ್ ಕೇಪ್ ಧರಿಸಿ ಸ್ಟೈಲ್ ಸ್ಟೇಟ್‌ಮೆಂಟ್ ನೀಡಿದ್ದಾರೆ. ಇದಲ್ಲದೆ ಅವರು ಧರಿಸಿದ್ದ ಬೃಹತ್ ರೋಸ್‌ಕಟ್ ಡೈಮಂಡ್ ಮತ್ತು 550 ಕ್ಯಾರಟ್‌ನ ನೀಲಿ ಬೂದು ಬಣ್ಣದ ಟಾಂಜೈನೈಟ್ ಹರಳಿನ ನೆಕ್ಲೇಸ್ ಹೈದರಾಬಾದ್ ನಗರದ 3000 ವರ್ಷಗಳಷ್ಟು ಹಿಂದಿನ ಪಾರಂಪರಿಕ ಆಭರಣವಾಗಿ ಗಮನ ಸೆಳೆಯಿತು. ■



ಅನನ್ಯಾ ಬಿರ್ಲಾ

ನತಾಶಾ ಪೂನಾವಾಲಾ

ಮನೀಶ್ ಮಲ್ಹೋತ್ರಾ

ಸುಧಾ ರೆಡ್ಡಿ

ಅಮ್ಮನ ಕೈರುಚಿ ಮಿಸ್ ಮಾಡಿಕೊಳ್ಳುತ್ತೇನೆ

ಸಂಯುಕ್ತಾ ಹೊರ್ನಾಡು, ಸುಧಾ ಬೆಳವಾಡಿ

ಸಂಯುಕ್ತಾ ಹೊರ್ನಾಡು
feedbacklvk@vijaykarnataka.com

ನಮ್ಮ ಮನೆಯಲ್ಲಿ ಇರುವುದೇ ನಾವು ಮೂವರು -ನಾನು, ನಮ್ಮಪ್ಪ-ಅಮ್ಮ, ಹಾಗೂ ನಮ್ಮ ಎರಡು ಬೆಕ್ಕುಗಳು. ನನ್ನಮ್ಮ ನನ್ನ ಪಾಲಿಗೆ ಜಗತ್ತಿನ ಗ್ರೇಟೆಸ್ಟ್ ಕುಕ್. ಅವರು ಮಾಡುವ ಅಡುಗೆಯ ರುಚಿಯನ್ನು ನಾನು ಜಗತ್ತಿನ ಮತ್ತೆಲ್ಲೂ ಸವಿದಿಲ್ಲ. ಅವರು ಮನೆಯಲ್ಲಿಲ್ಲ ಎಂದರೆ ನಾನು ಮೊದಲು ಮಿಸ್ ಮಾಡಿಕೊಳ್ಳುವುದೇ ಊಟ, ತಿಂಡಿ. ನಾನು ಮನೆಯಲ್ಲಿ ಯಾವಾಗಲೂ ಅವರಿಂದ ಬೈಸಿಕೊಂಡೇ ಊಟ ಮಾಡುವುದು. ನಾವಿಬ್ಬರು ಎಲ್ಲೇ ಇದ್ದರೂ ಪರಸ್ಪರ ತುಂಬಾ ಮಾತನಾಡುತ್ತೇವೆ. ಅದನ್ನು ನಾನು ಮಿಸ್ ಮಾಡಿಕೊಳ್ಳುತ್ತೇನೆ.

ಮನೆ ಚೊಕ್ಕವಾಗಿಡಬೇಕೆಂದು ನನ್ನ ಅಮ್ಮ ಬೈತಾನೇ ಇರುತ್ತಾರೆ, ಅದನ್ನು ಮಿಸ್ ಮಾಡಿಕೊಳ್ಳುತ್ತೇನೆ. ಬೆಳಗ್ಗೆ ಎದ್ದ ತಕ್ಷಣ ಅವರು ಶ್ಲೋಕ ಹೇಳುತ್ತಿರುತ್ತಾರೆ. ಆಗ ಯಾರೊಂದಿಗೂ ಮಾತನಾಡುವುದಿಲ್ಲ, ಅಡುಗೆ ಮಾಡುವಾಗ ಅವರ ತಲೆ ತಿನ್ನುತ್ತೇನೆ ಎಂದು ನನಗೆ ಹೊರಗೆ ಹೋಗು ಎನ್ನುತ್ತಾರೆ. ಅವನ್ನೆಲ್ಲ ಮಿಸ್ ಮಾಡಿಕೊಳ್ಳುತ್ತೇನೆ.

ನನ್ನ ಅಮ್ಮ ಅದ್ಭುತವಾಗಿ ಟೀ ಮಾಡುತ್ತಾರೆ. ಅವರು ಕೈಯಾರೆ ಮಾಡಿದ ಟೀ ಹೊರತಾಗಿ ನಾನು ಬೇರೆಲ್ಲೂ ಕುಡಿಯುವುದಿಲ್ಲ, ಅವರು ಯಾರೂ ಮಾಡದ ವಿಶೇಷ ವಿಧಾನದಲ್ಲಿ ಮಾಡುತ್ತಾರೆ. ತಾವು ಮನೆಯಲ್ಲಿ ಇಲ್ಲದಿದ್ದಾಗ ನನಗೆ ಕಾಲ್ ಮಾಡಿ ಟೀ ಬೇಕಾ ಎಂದು ರೇಗಿಸುತ್ತಿರುತ್ತಾರೆ. ಅದನ್ನು ಮಿಸ್ ಮಾಡಿಕೊಳ್ಳುತ್ತೇನೆ.

ನಮ್ಮಿಬ್ಬರಲ್ಲಿ ಯಾರೇ ಮನೆಯಲ್ಲಿಲ್ಲ ಅಂದರೆ ಗಲಾಟೆಯೇ ಇರಲ್ಲ. ನಾನು ನೆಟ್‌ವರ್ಕ್ ಇಲ್ಲದ ಕಡೆ ಶೂಟಿಂಗ್‌ಗೆ ಹೋದಾಗಲೂ ನೆಟ್‌ವರ್ಕ್ ಬರುವುದನ್ನೇ ಕಾಯುತ್ತಿರುತ್ತೇನೆ. ನ್ಯೂಸ್ ನೋಡುವಾಗಲೂ ತಮಾಷೆ ಮಾಡಿಕೊಳ್ಳುತ್ತಿರುತ್ತೇವೆ. ಇಬ್ಬರು ಒಟ್ಟಿಗಿದ್ದಾಗ ತುಂಬಾ ನಗುತ್ತೇವೆ. ನಮ್ಮ ಮನೆಯವರಿಗೆಲ್ಲಾ ಊಟದ ಕುರಿತು ಒಂದು ಥರದ ಅತಿ ಆಸಕ್ತಿ, ಯಾವಾಗಲೂ ಅದರ ಬಗ್ಗೆಯೇ ಮಾತು. ನೆದರ್ಲೆಂಡ್ಸ್‌ನಲ್ಲಿರುವ ನನ್ನ ತಮ್ಮನೂ ಕಾಲ್‌ನಲ್ಲಿ ಅಡುಗೆ ಬಗ್ಗೆಯೇ ಮಾತನಾಡುತ್ತಿರುತ್ತಾನೆ. ನನ್ನ ಅಜ್ಜಿ, ಅಮ್ಮ, ಎಲ್ಲರಿಗೂ ಅಡುಗೆ ಬಗ್ಗೆ ಆಸಕ್ತಿ. ಆದರೆ ಫೂಡಿ ಅಲ್ಲ. ನನ್ನಮ್ಮ ಮನೆಯಲ್ಲಿ ಇಲ್ಲ ಅಂದರೆ 25 ಜನರು ಮನೆಯಲ್ಲಿಲ್ಲ ಎಂಬ ಭಾವನೆ ನನಗೆ. ನಾನಿಲ್ಲ ಎಂದರೆ ಹತ್ತು ಜನರು ಮನೆಯಲ್ಲಿಲ್ಲ ಎಂಬ ಭಾವನೆ ಬರುತ್ತದೆ ಎನ್ನುತ್ತಿರುತ್ತಾರೆ ನನ್ನಮ್ಮ. ■

ನಮ್ಮಮ್ಮ ಅಂದ್ರೆ ನಂಗಿಷ್ಟ

ನಟಿ ಸಂಯುಕ್ತಾ ಹೊರ್ನಾಡು ಅವರಂತೆ ನೀವೂ ನಿಮ್ಮ ಅಮ್ಮ ಮನೆಯಲ್ಲಿ ಇಲ್ಲದಿದ್ದಾಗ, ಯಾವ ಸಂದರ್ಭದಲ್ಲಿ ಮಿಸ್ ಮಾಡಿಕೊಳ್ಳುತ್ತೀರಿ, ಆ ಭಾವ ಹೇಗಿರುತ್ತದೆ? ಈ ಬಗ್ಗೆ 50 ಪದಗಳೊಳಗೆ ಬರೆದು ವಾಟ್ಸಪ್ ಮಾಡಿ. ನಿಮ್ಮ ಹೆಸರು, ಅಮ್ಮನ ಜೊತೆಗಿನ ನಿಮ್ಮ ಫೋಟೊ, ವಿಳಾಸ ಕಳುಹಿಸಿ. ಆಯ್ದ ಬರಹಗಳು ಪ್ರಕಟವಾಗುವವು.

8880852240

ಮ್ಯಾಂಗೋ ಮೋಚಿ ಮಾಯೆ

ಮಾವಿನಹಣ್ಣಿನ ಈ ಸೀಸನ್‌ನಲ್ಲಿ ವಿಭಿನ್ನ ಪಾಕ ವಿಧಾನಗಳು ಗಮನ ಸೆಳೆಯುತ್ತವೆ. ಹೊಸ ಪ್ರಯೋಗಗಳಿಗೆ ಮಾವು ಒಳಗಾಗುತ್ತದೆ. ಸದ್ಯ ಇಂಥದ್ದೇ ಪ್ರಯೋಗ ಸೋಶಿಯಲ್ ಮೀಡಿಯಾ ವೇದಿಕೆ ಏರಿದೆ. ಹೌದು, ರುಚಿ ಜೊತೆ ನೋಡಲು ಆಕರ್ಷಕವಾಗಿ ಕಾಣುವ ಮ್ಯಾಂಗೋ ಮೋಚಿ ಸೋಶಿಯಲ್ ಮೀಡಿಯಾ ವೇದಿಕೆಗಳಲ್ಲಿ ವಿಭಿನ್ನ ಪ್ರಯೋಗಗಳ ಮೂಲಕ ಸದ್ದು ಮಾಡುತ್ತಿದೆ.

ಜಪಾನ್‌ನ ಸಾಂಪ್ರದಾಯಿಕ ಮೋಚಿ ಮತ್ತು ಭಾರತೀಯರ ಅಚ್ಚುಮೆಚ್ಚಿನ ಮಾವಿನ ಹಣ್ಣಿನ ಅದ್ಭುತ ಸಮ್ಮಿಲನವಾಗಿದ್ದು, ಇದು ಯುವ ಜನತೆಯನ್ನು ಮೋಡಿ ಮಾಡಿದೆ. ಏಷ್ಯನ್ ಪಾಕಪದ್ಧತಿಯ ಬಗ್ಗೆ ಜನರಲ್ಲಿ ಹೆಚ್ಚುತ್ತಿರುವ ಆಸಕ್ತಿ ಮತ್ತು ನಮ್ಮಲ್ಲಿನ ಮಾವಿನ ಹಣ್ಣಿನ ಕ್ರೇಜ್ ಸೇರಿ ಈ ಫ್ಯೂಷನ್ ಕಾಂಬಿನೇಷನ್ ಸದ್ಯ ಗಮನ ಸೆಳೆದಿದೆ.

ಮೋಚಿ ಎಂಬುದು ಜಪಾನಿನ ಒಂದು ಬಗೆಯ ರೈಸ್ ಕೇಕ್. ಇದನ್ನು ಅಕ್ಕಿ ಹಿಟ್ಟಿನಿಂದ ತಯಾರಿಸಲಾಗುತ್ತದೆ. ಇದಕ್ಕೆ ಈಗ ರಸಭರಿತ ಮಾವಿನ ಸ್ಪರ್ಶ ಸಿಕ್ಕಿದೆ. ತಾಜಾ ಮಾವಿನ ಹಣ್ಣಿನ ತುಂಡು ಅಥವಾ ಮಾವಿನ ಹಣ್ಣಿನ ಫ್ಲೇವರ್ ಇರುವ ಐಸ್ ಕ್ರೀಮ್ ತುಂಬಿಸಿದ ಮೋಚಿ ಆಕರ್ಷಣೆ ಹೆಚ್ಚಿಸಿಕೊಂಡಿದೆ. ಕೃತಕ ಬಣ್ಣ ಅಥವಾ ಫ್ಲೇವರ್‌ಗಳ ಬದಲಿಗೆ ತಾಜಾ ಮಾವಿನ ಹಣ್ಣನ್ನು ಬಳಸುವುದರಿಂದ ಇದು ಹಣ್ಣಿನ ನೈಸರ್ಗಿಕ ರುಚಿಯನ್ನು ಉಳಿಸಿಕೊಳ್ಳುತ್ತದೆ. ಮಾವಿನ ಹಣ್ಣಿನ ಸೀಸನ್‌ನಲ್ಲಿ ಏನಾದರೂ ಹೊಸತು ಪ್ರಯತ್ನಿಸಬೇಕು ಎನ್ನುವವರಿಗೆ ಮ್ಯಾಂಗೋ ಮೋಚಿ ಐಸ್‌ಕ್ರೀಮ್ ಅಥವಾ ಫ್ರೆಶ್ ಮ್ಯಾಂಗೋ ಮೋಚಿ ಬೆಸ್ಟ್.

ನೋಡಲು ಸಣ್ಣ ಉಂಡೆಗಳಂತೆ ಅಥವಾ ಮೊಟ್ಟೆಯ ಆಕಾರದಲ್ಲಿರುವ ಇವು ಸೋಶಿಯಲ್ ಮೀಡಿಯಾ ಫೋಟೋಗಳಿಗೆ ಅಥವಾ ಫುಡ್ ಬ್ಲಾಗ್‌ಗಳಿಗೆ ಆಕರ್ಷಕವಾಗಿ ಕಾಣುತ್ತವೆ. ಹೀಗಾಗಿ ಹೆಚ್ಚೆಚ್ಚು ಶೇರ್ ಆಗುತ್ತಿವೆ. ■

ವಿಭಿನ್ನ ಫ್ಲೇವರ್‌ಗಳ ಮೋಚಿ

ಈ ಟ್ರೆಂಡ್ ಕೇವಲ ಮಾವಿನ ಹಣ್ಣಿಗೆ ಸೀಮಿತವಾಗಿಲ್ಲ. ಚಾಕೊಲೆಟ್ ಮತ್ತು ಬನಾನಾ, ಚೀಸ್ ಕೇಕ್ ಫಿಲ್ಲಿಂಗ್, ಪುದೀನ ಮತ್ತು ಲಿಂಬೆ ರಸದ ಮಿಶ್ರಣ ಹೀಗೆ ವಿವಿಧ ಫ್ಲೇವರ್‌ನ ಐಸ್‌ಕ್ರೀಮ್ ಗಳನ್ನು ಹಾಕಿ ತಮ್ಮದೇ ಆದ ಹೊಸ ರುಚಿಗಳನ್ನು ಸೃಷ್ಟಿಸುತ್ತಿದ್ದಾರೆ.

ಲವಲVK ಸೂಪರ್ ರುಚಿ

RNI No. KARKAN/2016/71628
Vol. 11 Issue no. 125
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.